ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ನವೆಂಬರ್ 13, 2013 ಪುಟ 20 ರೂ. 14/-

ಕನಕಪುರದಲ್ಲಿ


ಒಬ್ಬ ಕೆಟ್ಟ ಶಿಕ್ಷಕ




ಕಾಗಿನೆಲೆ ಸ್ವಾಮಿ ಸಂದರ್ಶನ




'ಪೇಜಾವರ ದುರಹಂಕಾರಿ'






ಅಂಬಿ ಬಂಟ

ಅಮರಾವತಿ ಚಂದ್ರನ ಸೈಟು ಪುರಾಣ





APMC

255 ಎಕರೆ ಸರ್ಕಾರಿ ಭೂಮಿ ಲೂಟಿ



ಕಮ್ಯೂನಲ್ ಕಾಳಿಂಗ




• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

ಭಾರತದ ನೆರೆಯಲ್ಲಿ ಸರ್ವಾಧಿಕಾರಿಯೊಬ್ಬನ ಆಗಮನ




ನವೆಂಬರ್‌ನಲ್ಲಿ ಶ್ರೀಲಂಕಾದಲ್ಲಿ ನಡೆಯಲಿರುವ ಕಾಮನ್ ವೆಲ್ತ್ ದೇಶಗಳ ಶೃಂಗಸಭೆಯಲ್ಲಿ ಭಾರತ ಭಾಗವಹಿಸ ಕೂಡದೆಂಬ ದನಿ ಕೇಳಿಬರುತ್ತಿದೆ. 2009ರಲ್ಲಿ ನಡೆದ ತಮಿಳು ಟೈಗರ್‌ಗಳ ವಿರುದ್ಧದ ಅಂತಿಮ ಯುದ್ಧದಲ್ಲಿ ಸರ್ಕಾರಿ ಸೇನೆ ಗೆದ್ದಿತು. ಆದರೆ ಆ ನಂತರವೂ ಬಂದೂಕು ಕೆಳಗಿಳಿಸದೆ ಸಾವಿರಾರು ನಿರಾಯುಧ ತಮಿಳರನ್ನು ಕೊಲೆ ಮಾಡುತ್ತಾ ಹೋದ ಲಂಕಾ ಸೇನೆಯ ಕ್ರೌರ್ಯಗಳು ಬಿಬಿಸಿ ಸೇರಿದಂತೆ ಅನೇಕ ಮಾಧ್ಯಮಗಳಲ್ಲಿ ಪ್ರಸಾರ ಗೊಂಡವು.

ಅನ್ಯಾಯ-ತಾರತಮ್ಯಗಳನ್ನು ಪ್ರಶ್ನಿಸುವ-ಪ್ರತಿಭಟಿಸುವ ಒಂದು ಪೀಳಿಗೆಯನ್ನೇ ಮುಗಿಸಿಬಿಡುವಂತಿದ್ದ ಈ ಸಾಮೂಹಿಕ ಹತ್ಯೆಗಳನ್ನು ನಮ್ಮ ಭಾರತ ಸರ್ಕಾರ ಖಡಾಖಂಡಿತವಾಗಿ ಖಂಡಿಸಲಿಲ್ಲ. ಅದರ ಬದಲಾಗಿ ಕೆಟ್ಟದ್ದನ್ನು ನೋಡಲಾರೆ ಕೆಟ್ಟದ್ದನ್ನು ಕೇಳಲಾರೆ ಎಂಬಂತೆ ಮೌನವಾಗಿ ಉಳಿಯಿತು. ಬಹುಶಃ ಈಗಲೂ ಆ ಮೌನ ಉಳಿಸಿಕೊಂಡೇ ಮನಮೋಹನ್ ಸಿಂಗ್ ಕೊಲಂಬೊಗೆ ಹೋಗಿ ಬರುವ ಸಾಧ್ಯತೆಗಳಂತೂ ಇವೆ.

ಜನಾಂಗೀಯ ದ್ವೇಷ ಹಾಗೂ ನಕಲಿ ದೇಶಭಕ್ತಿಯ ಮಾತುಗಳಿಗೆ ಜನ ಬೇಗ ಮರುಳಾದರೆ ಅದು ತರಬಹುದಾದ ಅನಾಹುತಗಳ ಅನುಭವವಾಗಲು ಅಷ್ಟೇನೂ ತಡವಾಗುವುದಿಲ್ಲ.

ಇದಕ್ಕೆ ಶ್ರೀಲಂಕಾ ನಮ್ಮ ಕಣ್ಣೆದುರಿಗಿನ ಸಾಕ್ಷಿಯಂತಿದೆ. ಅಲ್ಲಿನ ಚುನಾಯಿತ ಅಧ್ಯಕ್ಷ ಮಹಿಂದಾ ರಾಜಪಕ್ಸೆ ನೋಡ ನೋಡುತ್ತಿರುವಂತೆಯೇ ಈಗ ದೇಶದ ಸರ್ವಾಧಿಕಾರಿಯಾಗಿ ಬದಲಾಗಿದ್ದಾನೆ.

ಈಗ ಲಂಕಾದಲ್ಲಿ ತಮಿಳರ 'ಸಮಸ್ಯೆ'ಯನ್ನು ಕೊಂದು ತಾತ್ಕಾಲಿಕವಾಗಿ ಬಗೆಹರಿಸಿಬಿಡಲಾಗಿದೆ. ಆದರೆ ಆ ಪ್ರಕ್ರಿಯೆಯಲ್ಲಿ ಪ್ರಜಾಪ್ರಭುತ್ವವೇ ಕಣ್ಮರೆಯಾಗಿ ಹೋಗಿದೆ.



ಏಳು ದಶಕಗಳ ಇತಿಹಾಸವಿರುವ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಐವತ್ತಾಲ್ಕು ಸದಸ್ಯ ದೇಶಗಳಿವೆ. ಏಷ್ಯಾ ಆಫ್ರಿಕಾ, ಯುರೋಪ್, ಆಸ್ಟ್ರೇಲಿಯಾ ಹಾಗೂ ಉತ್ತರ ಅಮೆರಿಕಾ ಖಂಡಗಳ, ಈ ಹಿಂದೆ ಬ್ರಿಟಿಷ್ ಕಾಲೋನಿಗಳಾಗಿದ್ದ ದೇಶಗಳೇ ನಂತರ ಕಾಮನ್‌ವೆಲ್ತ್ ಸಂಘಟನೆ ರೂಪಿಸಿಕೊಂಡವು. ಅದಕ್ಕೆ ಈ ವಸಾಹತು ದೇಶಗಳ ಮೇಲೆ ಯಾವುದಾದರೂ ರೀತಿಯಲ್ಲಿ ಹತೋಟಿ ಉಳಿಸಿಕೊಳ್ಳಲು ಬಯಸಿದ್ದ ಇಂಗ್ಲೆಂಡ್‌ನ ಚತಾವಣೆಯಿತ್ತು.

ಈ ಬಾರಿಯ ಶೃಂಗಸಭೆಯಲ್ಲಿ ಒಂದು ಮಹತ್ವದ ವಿಚಾರ ಚರ್ಚೆಯಾಗುತ್ತಿದೆ. ಅದು ಕಾಮನ್‌ವೆಲ್ತ್ ಸದಸ್ಯ ದೇಶಗಳು ಅಳವಡಿಸಿಕೊಳ್ಳಬೇಕಾದ ರಾಜಕೀಯ ನೀತಿ-ಮೌಲ್ಯಗಳ (values & principles charter) ಹೊಸ ಪ್ರಸ್ತಾಪವೊಂದನ್ನು ಮಂಡಿಸಲಾಗುತ್ತಿದೆ. ಅದರಲ್ಲಿ ಪ್ರಮುಖವಾಗಿ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಹಿಷ್ಣುತೆ ಹಾಗು ನಾಗರಿಕ ಸಮಾಜದ ಅನಿಸಿಕೆಗಳಿಗೆ ಸರ್ಕಾರಗಳು ಗೌರವ ನೀಡಬೇಕೆಂಬ ಪ್ರಸ್ತಾಪಗಳಿವೆ.

ಈ ಬಾರಿ ಸಮ್ಮೇಳನದ ಆತಿಥೇಯ ದೇಶ ಶ್ರೀಲಂಕಾ ಆಗಿದೆ. ಜೊತೆಗೆ ಮಹಿಂದಾ ರಾಜಪಕ್ಸೆ ಕಾಮನ್‌ವೆಲ್ತ್ ಒಕ್ಕೂಟಕ್ಕೆ ಮುಂದಿನ ಎರಡು ವರ್ಷ ಕಾಲ ಚೇರ್‌ಮೆನ್ ಆಗಲಿದ್ದಾನೆ.

ಈ ನಡುವೆ ಶ್ರೀಲಂಕಾದೊಳಗೆ ಏನಾಗಿದೆ ಎಂಬುದನ್ನು ನೋಡೋಣ.

ಎಲ್‌ಟಿಟಿಇಯೊಂದಿಗಿನ ಯುದ್ಧವನ್ನು ಮುಗಿಸಿಕೊಂಡ ನಂತರ ಅಧ್ಯಕ್ಷೀಯ ಚುನಾವಣೆಯಲ್ಲಿ 2ನೇ ಬಾರಿ ಗೆದ್ದ ತಕ್ಷಣ ರಾಜಪಕ್ಸೆ ಈಗ್ಗೆ ಮೂರು ವರ್ಷಗಳ ಹಿಂದೆಯೇ ಲಂಕಾ ಸಂವಿಧಾನಕ್ಕೆ ಸಮಗ್ರ ಬದಲಾವಣೆ ತಂದ.

ಯಾರೊಬ್ಬರೂ ಸತತ ಎರಡು ಬಾರಿಗಿಂತ ಹೆಚ್ಚು ಅಧ್ಯಕ್ಷರಾಗುವಂತಿಲ್ಲ ಎಂದಿದ್ದ ನಿಯಮ ಬದಲಾಯಿಸಿ ಎಷ್ಟು ಅವಧಿಗೆ ಬೇಕಾದರೂ ಅಧ್ಯಕ್ಷರಾಗುವಂತೆ ಹೊಸ ನಿಯಮ ಮಾಡಿಕೊಂಡ. ಹದಿನೆಂಟನೆ ತಿದ್ದುಪಡಿ ಎಂದೇ ಕುಖ್ಯಾತಿ ಗಳಿಸಿರುವ ಆ ತಿದ್ದುಪಡಿಯ ಅಂಶಗಳನ್ನು ಗಮನಿಸಿದರೆ ಒಂದು ಪ್ರಜಾಪ್ರಭುತ್ವದೊಳಗಿಂದಲೇ ಸರ್ವಾಧಿಕಾರ ಹೇಗೆ ಜಾಗ ಮಾಡಿಕೊಂಡು ತಲೆ ಎತ್ತಬಲ್ಲದು ಎಂಬುದಕ್ಕೆ ಸಾಕ್ಷಿ ನೀಡುವಂತಿದೆ.

ಈ ತಿದ್ದುಪಡಿಯ ಮೂಲಕ ರಾಜಪಕ್ಸೆ ಈಗ ಲಂಕಾದ ಸಂಸತ್ತು, ನ್ಯಾಯಾಂಗ ಹಾಗು ಕಾರ್ಯಾಂಗಗಳ ಮೇಲೆ ಸಂಪೂರ್ಣ ಹಿಡಿತ ತಂದುಕೊಂಡಿದ್ದಾನೆ. ಸುಪ್ರೀಂಕೋರ್ಟಿನ ನ್ಯಾಯಾಧೀಶರ ನೇಮಕದಿಂದ ಹಿಡಿದು ದೇಶದ ಸೇನಾ ದಂಡನಾಯಕ, ಪೊಲೀಸ್ ಮುಖ್ಯಸ್ಥ, ಚುನಾವಣಾ ಆಯೋಗದ ಮುಖ್ಯಸ್ಥ, ಲೆಕ್ಕ ಪರಿಶೋಧಕ, ಅಟಾರ್ನಿ ಜನರಲ್, ಭ್ರಷ್ಟಾಚಾರ ತನಿಖಾ ದಳದ ಮುಖ್ಯಸ್ಥ... ಹೀಗೆ ದೇಶದ ಎಲ್ಲಾ ಪ್ರಮುಖ ಸಾಂವಿಧಾನಿಕ ಸಂಸ್ಥೆಗಳ ಪ್ರಮುಖ ಹುದ್ದೆಗಳಿಗೆ ಯಾರನ್ನು ನೇಮಿಸಬೇಕು ಅಥವಾ ತೆಗೆಯಬೇಕೆಂಬ ಅಧಿಕಾರವೀಗ ರಾಜಪಕ್ಸೆಯ ಕೈಗೆ ಬಂದಿದೆ.

ಈ ಅಧಿಕಾರವನ್ನು ಚಲಾಯಿಸಿಯೇ ಕೆಲ ತಿಂಗಳ ಹಿಂದೆ ಲಂಕಾ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶೆ ಶಿರಾನಿ ಭಂಡಾರನಾಯಕೆ ಯವರನ್ನು ರಾಜಪಕ್ಸೆ ಹುದ್ದೆಯಿಂದ ತೆಗೆದು ತನ್ನ ಚೇಲಾ ಮೋಹನ ಪೆರಿಸ್‌ನನ್ನು ಮುಖ್ಯ ನ್ಯಾಯಾಧೀಶನನ್ನಾಗಿಸಿದ.

ಬಹುಶಃ ನೀವಿದನ್ನು ನಂಬಲಾರಿರೇನೋ, ಈ ಮೋಹನ್ ಪೆರಿಸ್ ಮೊದಲು ದೇಶದ ಅಟಾರ್ನಿ ಜನರಲ್ ಆಗಿದ್ದಾಗ ರಾಜಪಕ್ಸೆ ಸರ್ಕಾರ ನಡೆಸಿದ್ದ ಅನೇಕ ರಾಜಕೀಯ ಕೊಲೆಗಳನ್ನು ಸಮರ್ಥಿಸಿಕೊಳ್ಳುತ್ತಾ ಇದ್ದಾತ.

ಲಂಕಾದಲ್ಲೀಗ ರಾಜಪಕ್ಸೆಯನ್ನು ಟೀಕಿಸುವವರನ್ನು ಜೀವಸಹಿತ ಉಳಿಸುವುದಿಲ್ಲ. ಇವನ ಸರ್ಕಾರದ ದೌರ್ಜನ್ಯ ಭ್ರಷ್ಟಾಚಾರ, ಅಪ್ರಜಾತಾಂತ್ರಿಕ ನಡವಳಿಕೆಗಳತ್ತ ಬೆಟ್ಟು ಮಾಡಿ ತೋರಿಸುತ್ತಿದ್ದ ಪತ್ರಕರ್ತನೊಬ್ಬ ಇತ್ತೀಚೆಗೆ ಕಣ್ಮರೆಯಾದ. ಆತನ ಹೆಣ ಸಿಗುವ ಆಸೆಯನ್ನೂ ಆತನ ಕುಟುಂಬ ಇಟ್ಟುಕೊಂಡಿಲ್ಲ. 'ಸಂಡೇ ಲೀಡರ್' ಪತ್ರಿಕೆಯ ಸಹಾಯಕ ಸಂಪಾದಕಿ ಮಂದನಾ ಎಂಬಾಕೆ ರಾಜಪಕ್ಸೆಯ ರಹಸ್ಯ ಕೊಲೆಗಡುಕ ಪಡೆಗೆ ಹೆದರಿ ದೇಶ ಬಿಟ್ಟು ತಲೆ ಮರೆಸಿಕೊಂಡು ಹೋಗಿದ್ದಾರೆ.

ರಾಜಪಕ್ಸೆ ಅಧ್ಯಕ್ಷನಾದ ನಂತರ ಲಂಕಾದಲ್ಲಿ ಕೊಲೆಯಾಗಿರುವ ಅಥವಾ ನಾಪತ್ತೆಯಾಗಿರುವ ಪತ್ರಕರ್ತರ ಸಂಖ್ಯೆ ಮೂವತ್ತಕ್ಕಿಂತ ಜಾಸ್ತಿ ಇದೆ.

ಈ ಬೆದರಿಕೆ ಹತ್ಯೆಗಳ ಟೆರರ್ ಸಾಲದೆಂಬಂತೆ ರಾಜಪಕ್ಸೆ ಸರ್ಕಾರ ಮೀಡಿಯಾ ಕಾಯ್ದೆಯೊಂದನ್ನು ಜಾರಿಗೆ ತಂದು ಮಾಧ್ಯಮಗಳು ತನ್ನ ಹಾಗೂ ಸರ್ಕಾರದ ವಿರುದ್ಧ ದನಿಯೇ ಎತ್ತದಂತೆ ವ್ಯವಸ್ಥೆ ಮಾಡಿಕೊಂಡಿದ್ದಾನೆ.

ತಮಿಳು ಗೆರಿಲ್ಲಾಗಳ ವಿರುದ್ಧ ಯುದ್ಧ ನಡೆಸಿ ದೇಶದಲ್ಲಿ ಶಾಂತಿ ಸುಭಿಕ್ಷೆ ಸ್ಥಾಪಿಸುತ್ತೇನೆಂದು ಹೇಳಿ ಹೊರಟ ರಾಜಪಕ್ಸೆ ಬಹುಸಂಖ್ಯಾತ ಸಿಂಹಳೀಯರ ಬೆಂಬಲ ಗಳಿಸಿದ್ದ. ಚುನಾವಣೆ ನಡೆದಾಗ ಸಿಂಹಳೀಯರು ರಾಜಪಕ್ಸೆಯನ್ನೇ ಗೆಲ್ಲಿಸಿ ಹಾರ ಹಾಕಿದ್ದರು. ಈಗ ನೋಡಿದರೆ ಜನ ಹಾಕಿದ್ದ ಹೂವಿನ ಹಾರವೇ ಈಗ ಲಂಕಾ ಕೊರಳಿನ ಉರುಳಾಗಿ ಪರಿಣಮಿಸಿದೆ.

ಜಗತ್ತಿನ ಅತಿ ದೊಡ್ಡ ಡೆಮಾಕ್ರಸಿ ಎಂದು ಹೇಳಿಕೊಳ್ಳುವ ಇಂಡಿಯಾ ಈ ವಿಚಾರದಲ್ಲಿ ಏನು ಮಾಡುತ್ತಿದೆಯೆಂದು ಈಗ ನೋಡೋಣ. ದಕ್ಷಿಣ ಏಷ್ಯಾ ಖಂಡದ ದೇಶಗಳ ಪೈಕಿ ಜನಸಂಖ್ಯೆ, ಆರ್ಥಿಕತೆ, ವಿಸ್ತೀರ್ಣ ಹಾಗೂ ಮಿಲಿಟರಿ ಬಲದಲ್ಲಿ ಬಲಿಷ್ಠವಾಗಿರುವ ಇಂಡಿಯಾ ತನ್ನ ವಿದೇಶಾಂಗ ನೀತಿಯಲ್ಲಿ ಎಂದಿಗೂ ಪ್ರಜಾಪ್ರಭುತ್ವ ಹಾಗೂ ನ್ಯಾಯದ ಪರ ನಿಂತ ಉದಾಹರಣೆಗಳಿಲ್ಲ. ಅಫಘಾನಿಸ್ತಾನದಲ್ಲಿ ಅಮೆರಿಕನ್ ಸೇನೆ ನಿತ್ಯ ಕೊಲೆಗಳನ್ನು



ನಡೆಸುತ್ತಿದ್ದರೂ ಅದನ್ನೆಂದೂ ಪ್ರತಿಭಟಿಸದೆ ಅದರ ಬದಲಾಗಿ ಅಲ್ಲಿ ಸಿಗುತ್ತಿರುವ ಸಾವಿರಾರು ಕೋಟಿ ರೂಪಾಯಿಗಳ construction contract ಗಳ ಲಾಭ ದೋಚುವತ್ತ ಭಾರತದ ಉದ್ದಿಮೆದಾರರು ಗಮನ ಹರಿಸಿದ್ದಾರೆ. ಆ ಮೂಲಕ ಅಮೆರಿಕನ್ ಆಕ್ರಮಣಕಾರಿ ಸೇನೆಗೆ ಭಾರತವೂ ಬೆಂಬಲ ಸೂಚಿಸುತ್ತಿದೆ. ಇದು ತಾಲಿಬಾನಿ ಹೋರಾಟ ಗಾರರನ್ನು ರೊಚ್ಚಿಗೆಬ್ಬಿಸಿದ್ದರಿಂದಲೇ ಮುಂಬೈ ದಾಳಿಗೆ ಪ್ರೇರಕೆಯಾಯಿತು. ಹೀಗೆ ಅಮೆರಿಕಾಗೆ ಬೇಷರತ್ ಬೆಂಬಲ ನೀಡಿದ ಕಾರಣದಿಂದಲೇ ಸ್ಪೇನ್, ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳಲ್ಲೂ ತಾಲಿಬಾನಿ ಹಾಗೂ ಅಲ್ ಕೈದಾ ಉಗ್ರರು ಬಾಂಬ್ ದಾಳಿ ನಡೆಸಿದ್ದರು. ಜಗತ್ತಿನ ಮಾಫಿಯಾ ಡಾನ್‌ನಂತೆ ಮೆರೆಯುತ್ತಿರುವ ಅಮೆರಿಕಾದ ಚೇಲಾಗಿರಿ ಮಾಡುತ್ತಿರುವ ಇಂಡಿಯಾ ದಕ್ಷಿಣ ಏಷ್ಯಾದಲ್ಲಿ ಲೋಕಲ್ ದಾದಾನಂತೆ ಸಣ್ಣಪುಟ್ಟ ದೇಶಗಳ ಮೇಲೆ ತನ್ನ ತೋಳ್ಬಲ ತೋರಿಸಲು ಹಿಂಜರಿಯುತ್ತಿಲ್ಲ. ಶ್ರೀಲಂಕಾದಲ್ಲಿ ನಲವತ್ತು ಸಾವಿರ ತಮಿಳರ ಕಗ್ಗೊಲೆಯಾಗಿರುವ ಬಗ್ಗೆ ವಿಶ್ವಸಂಸ್ಥೆಯ ವರದಿಗಳೇ ಹೇಳುತ್ತಿದ್ದಾಗಲೂ ಭಾರತ ಸರ್ಕಾರಕ್ಕೆ ಮಹಿಂದಾ ರಾಜಪಕ್ಸೆ ಒಬ್ಬ ಪ್ರಜಾಪ್ರಭುತ್ವವಾದಿಯಂತೆ ಕಾಣುತ್ತಿರುವುದು ಆಘಾತಕಾರಿಯಾಗಿದೆ. ಕಾಮನ್‌ವೆಲ್ತ್‌ನ ಈಗಿನ ಸಮಾವೇಶವು ಪ್ರತಿಪಾದಿಸಲಿರುವ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರದ ಮೌಲ್ಯಗಳು ಆತಿಥೇಯ ದೇಶವಾಗಿರುವ ಶ್ರೀಲಂಕಾದಲ್ಲೇ ಕಣ್ಮರೆಯಾಗಿ ಹೋಗಿದ್ದರೂ ಅದನ್ನು ಕಾಣದಂತೆ ಮರೆಮಾಚಲಾಗುತ್ತಿದೆ.

ಶ್ರೀಲಂಕಾದಲ್ಲೀಗ ತಮಿಳರ ನ್ಯಾಯಯುತ ಬೇಡಿಕೆಗಳಷ್ಟೇ ಏಕೈಕ ವಿಚಾರವಾಗಿ ಉಳಿದಿಲ್ಲ, ನ್ಯಾಯ ಪ್ರಜಾಪ್ರಭುತ್ವದಂತಹ ವಿಷಯಗಳೂ ಈಗ ಮುಂಚೂಣಿಗೆ ಬಂದಿವೆ. ದೇಶದೊಳಗಿನ ಅಶಾಂತಿಯನ್ನು ನಿವಾರಿಸುವ ಮಾತನ್ನಾಡಿ ಅಧಿಕಾರ ಹಿಡಿದ ರಾಜಪಕ್ಸೆ, ತಾನು ಬದುಕಿರುವವರೆಗೂ ಲಂಕಾವನ್ನು ಆಳಲು ಎಲ್ಲ ವ್ಯವಸ್ಥೆ ಮಾಡಿಕೊಂಡಿರುವುದು ಕಾಣುತ್ತಿದೆ.

ಇದೊಂದು ಅನ್ಯ ದೇಶದ ಆಂತರಿಕ ವಿಚಾರವೆಂದು ಭಾರತೀಯರು ನಿರ್ಲಕ್ಷಿಸು[illegible] ಹಾಗಲ್ಲ. ಏಕೆಂದರೆ ನೆರೆಯ ತಮಿಳುನಾಡು ಮೊದಲಿಂದಲೂ ಲಂಕಾ ತಮಿಳರ ಹೋರಾಟ[illegible] ಬಗ್ಗೆ ಸಹಾನುಭೂತಿ ಹಾಗೂ ಬೆಂಬಲವನ್ನು ತೋರುತ್ತಾ ಬಂದಿದೆ. ಹಾಗಿರುವಾಗ ಶ್ರೀಲಂಕಾದಲ್ಲಿ ಪ್ರಜಾಪ್ರಭುತ್ವವೇ ಅಳಿಸಿ ಹೋದರೆ, ಭಾರತ ಸರ್ಕಾರ ರಾಜಪಕ್ಸೆಯ ಪರ ನಿಂತರೆ ಅದು ಇನ್ನಾವುದೋ ರೂಪದಲ್ಲಿ ಹೊಸ ಹೋರಾಟಗಳಿಗೆ ಪ್ರಚೋದನೆ ನೀಡುವುದು ಖಚಿತ. ಅಂತಹ ಹೋರಾಟಕ್ಕೆ ಶ್ರೀಲಂಕಾ ಸೇನೆಯ ಬಂದೂಕುಗಳು ಅಡ್ಡ ಬಂದರೆ ಅದು ಮುಂದೆಂದೋ ಒಂದು ದಿನ ತಮಿಳುನಾಡಿನಲ್ಲಿ ಸ್ಫೋಟಿಸಬಹುದು. ಏಕೆಂದರೆ ರಾಜಪಕ್ಸೆ ಗೆದ್ದಿರುವುದು ಸಿಂಗಲ್ ಯುದ್ಧವನ್ನೇ ವಿನಃ ಶಾಂತಿಯನ್ನಲ್ಲ.

ಭಾರತಕ್ಕಿದು ಬೇಕೆ?

ಉಗ್ರ ದೇಶಾಭಿಮಾನದ ಮಾತುಗಳಾಡುವ ರಾಜಕಾರ[illegible] ಗಳು, ಹಿಂಸೆಯನ್ನು ಅಜೆಂಡಾ ಆಗಿಸಿಕೊಳ್ಳುವವರ ಕೈ[illegible] ಅಧಿಕಾರ ಸಿಕ್ಕರೆ ಅಲ್ಲಿ ಮೊದಲು ಕೊಲೆಯಾಗುವುದು ನ್ಯಾಯ ಹಾಗೂ ಪ್ರಜಾಪ್ರಭುತ್ವವೇ ಎಂಬುದು ಶ್ರೀಲಂಕಾದ[illegible] ಸಾಬೀತಾಗಿದೆ.

ನರೇಂದ್ರ ಮೋದಿಯು ಮಹಿಂದಾ ರಾಜಪಕ್ಸೆಗಿ[illegible] ಬೇರೆ ತರದವನಲ್ಲ ಎಂಬುದೂ ಈ ಸಂದರ್ಭದಲ್ಲಿ ನ[illegible] ಗಮನದಲ್ಲಿರಬೇಕಿದೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ವಿಚಾರಕ್ಕೆ ಬಂದರೆ 'ಅರ್ಹರಿಗೆ ಮುಂದಿನ ಸಾರಿ' ಎಂಬ ವ್ಯಂಗ್ಯದ ಕಾಮೆಂಟ್‌ಗಳು ಸದಾ ಇರುತ್ತಿದ್ದವು.

ಅದೀಗ ಬದಲಾಗಿದೆ.

ಸಾಹಿತಿ ಯು.ಆರ್. ಅನಂತಮೂರ್ತಿಯವರ ನೇತೃತ್ವದ ಸಮಿತಿ ಈ ಬಾರಿ ಪ್ರಶಸ್ತಿಗೆ ಆರಿಸಿರುವ ಐವತ್ತೆಂಟು ಮಂದಿಯ ಪೈಕಿ ನನಗೆ ಎಲ್ಲರೂ ಪರಿಚಿತರೇನಲ್ಲ. ಆದರೂ ಪಟ್ಟಿಯಲ್ಲಿರುವ ಅನೇಕ ಪರಿಚಿತ ಹೆಸರುಗಳು ಪುಟ್ಟ ಸಂತೋಷ ನೀಡುವಂತಿವೆ. ಕವಿ ಕೆ.ಬಿ. ಸಿದ್ದಯ್ಯ, ಹಾಸನದ ಪತ್ರಕರ್ತ ವೆಂಕಟೇಶ್ ಮೂರ್ತಿ, ಮಂಗಳೂರಿನ ಹರೇಕಳ ಹಾಜಬ್ಬ, ಕಾರ್ಟೂನಿಸ್ಟ್ ಮಹಮದ್ ಹೀಗೆ.

ಈ ಪಟ್ಟಿಯಲ್ಲಿನ ಹೆಸರುಗಳನ್ನು ನೋಡುವಾಗ ಅತಿ ಹೆಚ್ಚಿನ ಖುಷಿ ಅನಿಸಿದ್ದು ಅನಸೂಯಕ್ಕನವರದು.

ಚನ್ನಪಟ್ಟಣದ ಅರಳಾಳುಸಂದ್ರ ಗ್ರಾಮದಲ್ಲಿರುವ ರೈತ ಹೋರಾಟಗಾರ್ತಿ ಅನಸೂಯಕ್ಕನವರ ಮನೆ ಕರ್ನಾಟಕದ ಪ್ರಗತಿಪರರ ಕಾಯಂ ಆಶ್ರಯತಾಣ. ಅವರ ಪತಿ ಸೋಮಲಿಂಗಯ್ಯನವರು ತಮ್ಮಿಡೀ ಜೀವನ ರೈತ ಚಳವಳಿಯ ಹೋರಾಟಕ್ಕೆ ದುಡಿದು ಮಡಿದವರು.

ಲೋಹಿಯಾ-ಅಂಬೇಡ್ಕರ್ ಸಿದ್ಧಾಂತಗಳ ಮಾನವೀಯ



ಅನಸೂಯಕ್ಕ

ಸ್ವರೂಪದಂತಿರುವ ಅನಸೂಯಕ್ಕ ತಮ್ಮ ಹಳ್ಳಿಯ ಪುಟ್ಟ ಕೌಟುಂಬಿಕ ಸಮಸ್ಯೆಯಿಂದ ಹಿಡಿದು ರೈತ ಹೋರಾಟ, ಸಾರಾಯಿ ವಿರೋಧಿ ಆಂದೋಲನ, ಸಾಮಾಜಿಕ ಅನ್ಯಾಯಗಳ ವಿರುದ್ಧದ ಹೋರಾಟಗಳಲ್ಲೂ ನಿರಂತರವಾಗಿ ಜೊತೆ ಸಾಗಿ ಬಂದವರು. ಅವರ ಅಳಿಯ ತುಮಕೂ[illegible] ನಟರಾಜಪ್ಪ ನನ್ನ ಮೊದಲ ಸಮಾಜವಾದಿ ಗುರು. [illegible] ಕೆ.ಬಿ. ನಾಗರಾಜ್ ಕನಕಪುರದ ರೈತ ಹೋರಾಟದ ಪ್ರಮು[illegible] ನಾಯಕ. ಸಹಾಯ, ಸಲಹೆ ಕೇಳಲು ಬರುವ ಎಲ್ಲರ[illegible] ತಾಯಿಯಂತೆ, ಅಕ್ಕನಂತೆ ಸಲಹುವ ಅನಸೂಯ[illegible] ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗುವ ಮೂ[illegible] ನಿಸ್ಸಂಶಯವಾಗಿ ಆ ಪ್ರಶಸ್ತಿಯ ಘನತೆ ಹೆಚ್ಚಿಸಿದ್ದಾರೆ.

ಅವರನ್ನು ಅಭಿನಂದಿಸಲು ಫೋನ್ ಮಾಡಿ "ಅ[illegible] ನಾನು..." ಅಂದೆ.

ಅವರು ನಗುತ್ತಾ "ನಿಮಗೆಲ್ಲಾ ಅಭಿನಂದನೆಗ[illegible] ಅಂದರು...

ಅದು ಎಲ್ಲರಿಗೂ ಸೇರಬೇಕಾದ ಪ್ರಶಸ್ತಿ ಎಂಬ[illegible]

ಅಂದಹಾಗೆ ಈ ಬಾರಿಯ ಪ್ರಶಸ್ತಿಗಳು ಅರ್ಹ[illegible] ಸಂದಿದ್ದರೂ ಕೂಡ ಕಾಂಗ್ರೆಸ್ ಸರ್ಕಾರ ತಪ್ಪು ಮಾಡಿ[illegible] ಇವರೆಲ್ಲಾ ಟೀಕಿಸಲು ಹಿಂಜರಿಯಕೂಡದು... ಏಕೆ[illegible] ಸರ್ಕಾರ ಯಾರದ್ದೇ ಇರಲಿ ಬುದ್ಧಿಜೀವಿ ಬರಹಗಾರರ[illegible] ಒಲಿಸಿಕೊಳ್ಳುವ ಇರಾದೆ ಸರ್ಕಾರಗಳಿಗೆ ಇರು[illegible] ಎಂಬುದನ್ನು ನಾವು ಮರೆಯಕೂಡದು.

ಯಾವ ಪುರುಷಾರ್ಥಕ್ಕೆ ಪೇಜಾವರರಿಂದ ದೀಕ್ಷೆ ಪಡೆಯಬೇಕು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

...ರುಬರಿಗೆ ಬೇಕಾದರೆ ವೈಷ್ಣವ ದೀಕ್ಷೆ ...ುತ್ತೇನೆಂದು ಹೇಳುವ ಮೂಲಕ ಪೇಜಾವರ ಶ್ರೀಗಳು ...ಮ್ಮೆ ಸುದ್ದಿಯಲ್ಲಿದ್ದಾರೆ. "ಯಾರೋ ಪತ್ರಕರ್ತರು ...ಬರಿಗೆ ದೀಕ್ಷೆ ಕೊಡುತ್ತೀರಾ ಎಂದು ಕೇಳಿದ ಪ್ರಶ್ನೆಗೆ ...ುತ್ತೇನೆ' ಎಂದು ಉತ್ತರಿಸಿದೆ. ಈಗ ಅದನ್ನೇ ಕೆಲವರು ...ುತ್ತಿದ್ದಾರೆ. ಕೊಡುವುದಿಲ್ಲ ಎಂದಿದ್ದರೂ ಟೀಕಿಸುತ್ತಿದ್ದರು. ...ು ಟೀಕಿಸುವುದೇ ಕೆಲವರಿಗೆ ನಿತ್ಯದ ಕೆಲಸವಾಗಿದೆ"



...ು ಪೇಜಾವರರು ತಮ್ಮ ಬೇಸರವನ್ನು ...ಡಿಕೊಂಡಿದ್ದಾರೆ.

...ಅವರಿಗೆ ಮತ್ತಷ್ಟು ಬೇಸರ ಮಾಡುವ ಹಲವು ...ಗಳನ್ನು ಇಲ್ಲಿ ದಾಖಲಿಸುವ ಅನಿವಾರ್ಯತೆ ...ಯಾದ್ದರಿಂದ ಈ ಟಿಪ್ಪಣಿ.

...ಷ್ಣ ವೈಷ್ಣವ ಬಿಕ್ಕಟ್ಟು ಸಹಸ್ರಾರು ವರ್ಷಗಳಿಂದ ... ವಾದವಿವಾದಕ್ಕೆ ಈಡಾಗಿರುವುದರಿಂದ ಅದನ್ನು ...ಬದಿಗಿಟ್ಟು ಇತರೆ ವಿಷಯಗಳತ್ತ ಗಮನಹರಿಸೋಣ. ...ವರರು ದೀಕ್ಷೆ ಕೊಡುವ ಬಗ್ಗೆ ಹೇಳಿದಾಗ ಅವರು ...ಂದು ಷರತ್ತನ್ನೂ ಸೇರಿಸಿದರು. ಅದು ಏನೆಂದರೆ ... ಮತ್ತು ಮಾಂಸವನ್ನು ತ್ಯಜಿಸಿದರೆ ಮಾತ್ರ ದೀಕ್ಷೆ."

ಇದನ್ನು ಪೇಜಾವರರು ಮೊದಲ ಬಾರಿಗೆ ಹೇಳಿಲ್ಲ, ಬದಲಾಗಿ ಅವರು ಪ್ರತಿಬಾರಿ ಈ ಷರತ್ತನ್ನು ಹಾಕುತ್ತಾರೆ. ದಲಿತರು ಮದ್ಯ ಮತ್ತು ಮಾಂಸವನ್ನು ತ್ಯಜಿಸಿದರೆ ಮಾತ್ರ ಅವರ ಮನೆಗೆ ಹೋಗಿ ದೀಕ್ಷೆ ನೀಡುವ ಪೇಜಾವರರು ಈಗ ಕುರುಬರಿಗೂ ಅದೇ ಕಂಡೀಷನ್ ಹಾಕಿದ್ದಾರೆ. ಈ ಹಿಂದೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಬಿಸಿ ಊಟದ ಭಾಗವಾಗಿ ಮೊಟ್ಟೆಯನ್ನು ಕೊಡುವ ಪ್ರಸ್ತಾಪ ಇದ್ದಾಗಲೂ ಪೇಜಾವರರು ಅದನ್ನು ತೀವ್ರವಾಗಿ ವಿರೋಧಿಸಿದ್ದರು.

ಇದೆಲ್ಲಾ ಏನನ್ನು ಸೂಚಿಸುತ್ತದೆ? ಈ ದೇಶದ ಬಹುಸಂಖ್ಯಾತರ ಆಹಾರವಾದ ಮಾಂಸಾಹಾರ ಅನಿಷ್ಟವೆಂದೂ, ಅಲ್ಪಸಂಖ್ಯಾತ ಬ್ರಾಹ್ಮಣರ ಆಹಾರವಾದ ಸಸ್ಯಾಹಾರ ಉತ್ತಮವೆಂದೂ ಅವರು ಮತ್ತೆಮತ್ತೆ ಸಾರುತ್ತಿದ್ದಾರೆ ಎಂದಲ್ಲವೇ? ನಮ್ಮ ಸಂವಿಧಾನ ಯಾವ ರೀತಿಯಲ್ಲೂ ಜನಸಮುದಾಯಗಳ ಮಧ್ಯೆ ಮೇಲು-ಕೀಳು ಎಂದು ಭೇದಭಾವ ಮಾಡಬಾರದೆಂದು ಹೇಳಿದ್ದರೂ ಪೇಜಾವರರು ಅದನ್ನು ಪ್ರತಿಬಾರಿ ಉಲ್ಲಂಘಿಸುತ್ತಿದ್ದಾರೆಂದಲ್ಲವೇ? ಬ್ರಾಹ್ಮಣ್ಯದ ಈಗಿನ ಚಿಂತನೆಗಳನ್ನು, ಸಿದ್ಧಾಂತವನ್ನು, ಆಚಾರವಿಚಾರಗಳನ್ನು (ಬ್ರಾಹ್ಮಣರು ಹಿಂದಿನ ಕಾಲದಲ್ಲಿ ಮಾಂಸ ಸೇವನೆ ಮಾಡುತ್ತಿದ್ದರು ಎಂಬುದು ಸಾಬೀತಾಗಿರುವ ಹಿನ್ನೆಲೆಯಲ್ಲಿ) ಅವರು ಭಾರತೀಯ ಸಂಸ್ಕೃತಿಯೊಂದಿಗೆ ಸಮೀಕರಿಸಲು ಯತ್ನಿಸುತ್ತಿದ್ದಾರೆಂದು ಇದು ತೋರುತ್ತಿಲ್ಲವೆ?

ಆಹಾರ ಪದ್ಧತಿ ತೀರ ವೈಯಕ್ತಿಕ ವಿಚಾರ. ಮಾಂಸ, ಮೊಟ್ಟೆ ಇತ್ಯಾದಿಗಳನ್ನು ಸೇವಿಸಬೇಕೋ, ಬೇಡವೋ ಎಂಬುದು ಅವರವರಿಗೆ ಬಿಟ್ಟದ್ದು. ಆದ್ದರಿಂದಲೇ ಮಾಂಸಾಹಾರಿಗಳು ಈ ದೇಶದಲ್ಲಿ ಬಹುಸಂಖ್ಯಾತರಾಗಿದ್ದೂ ತಮ್ಮ ಆಹಾರ ಪದ್ಧತಿಯನ್ನು ಅಲ್ಪಸಂಖ್ಯಾತ ಸಸ್ಯಾಹಾರಿಗಳ ಮೇಲೆ ಹೇರಲು ಯತ್ನಿಸಿಲ್ಲ. ಹಾಗಿರುವಾಗ ಪೇಜಾವರರಂತಹ ಸಸ್ಯಾಹಾರಿಗಳು ಅದ್ಯಾಕೆ ತಮ್ಮ ಆಹಾರ ಪದ್ಧತಿಯನ್ನು ಇತರರ ಮೇಲೆ ಹೇರಲು ಪದೇಪದೇ ಪ್ರಯತ್ನಿಸುತ್ತಾರೆ? ಯಾಕೆ ಮಾಂಸಾಹಾರ ಅನಿಷ್ಟ ಎಂದು ಸಾರುವ ಮೂಲಕ ಬಹುಸಂಖ್ಯಾತರ ಮನಸ್ಸಿಗೆ ನೋವುಂಟುಮಾಡುತ್ತಾರೆ? ವಾಲ್ಮೀಕಿಯೇ ಬರೆದಿರುವಂತೆ ರಾಮ ಕೂಡ ಮಾಂಸ ಸೇವಿಸುತ್ತಿದ್ದ ಮತ್ತು ಮದ್ಯ ಕುಡಿಯುತ್ತಿದ್ದ. ಅದೇ ರಾಮನ ಜಪ ಮಾಡುವ, ಎಲ್ಲರೂ ಮಾಂಸ ಮದ್ಯವನ್ನು ತ್ಯಜಿಸಬೇಕೆಂದು ಹೇಳುವ ಪೇಜಾವರರು ರಾಮನಿಗೆ ಯಾವ ಷರತ್ತನ್ನು ವಿಧಿಸುತ್ತಾರೆ?

ಈಗ ನಮ್ಮ ಸಮಾಜದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಯಾರಾದರೂ ಬ್ರಾಹ್ಮಣ್ಯವನ್ನು ಸರಿಯಾದ ಕಾರಣಗಳಿಗೆ ಟೀಕಿಸಿದರೆ ಬ್ರಾಹ್ಮಣರು ಮಾತ್ರವಲ್ಲ ಶೂದ್ರ ವರ್ಗದ ನವಬ್ರಾಹ್ಮಣರೂ ಲಬೋಲಬೋ ಬಾಯಿಬಡಿದುಕೊಳ್ಳುತ್ತಾರೆ. ಆದರೆ ಪೇಜಾವರರು ಹೀಗೆ ಪ್ರತಿಸಲ ಅಬ್ರಾಹ್ಮಣರಿಗೆ ಅವಮಾನ ಮಾಡಿದರೂ ಎಲ್ಲರೂ ಸುಮ್ಮನಿರುತ್ತಾರೆ.

ಯಾವ ಕಾರಣಕ್ಕೂ ಯಾರ ಆಹಾರ ಪದ್ಧತಿಯನ್ನೂ ಟೀಕಿಸುವ, ಅನಿಷ್ಟ ಎಂದು ಮೂದಲಿಸುವ ಹಕ್ಕು ಪೇಜಾವರರೂ ಸೇರಿದಂತೆ ಯಾರಿಗೂ ಇಲ್ಲ. ಈ ಮಾತನ್ನು ಹೇಳಿ ಒಂದು ಎಚ್ಚರಿಕೆಯನ್ನೂ ಕೊಡಬೇಕಿದೆ. ಇನ್ನು ಮುಂದೆ ಯಾರೇ ಆಗಲಿ ಮಾಂಸಾಹಾರ ಅನಿಷ್ಟ ಎಂದು ಹೇಳಿ ಅಬ್ರಾಹ್ಮಣರ ಮನಸ್ಸಿಗೆ ನೋವು ನೀಡಿದರೆ ಅವರ ವಿರುದ್ಧ ರಾಜ್ಯಾದ್ಯಂತ ಪ್ರಜ್ಞಾವಂತರು ಸಂವಿಧಾನದ ಕಲಂ 295 ಎ ಅಡಿ ದೂರನ್ನು ದಾಖಲಿಸಬೇಕಾಗುತ್ತದೆ. 295 ಎ ಒಂದು ಕೆಟ್ಟ ಕಾನೂನು ಎಂದು ಹೇಳುತ್ತಲೇ ಅಬ್ರಾಹ್ಮಣರ ಆಹಾರ ಪದ್ಧತಿಯನ್ನು ಟೀಕಿಸುವವರ ಬಾಯಿ ಮುಚ್ಚಿಸಲಾದರೂ ಇದು ಉಪಯೋಗವಾಗಲಿ...

ಅಂದಹಾಗೆ, ಸಂಘಪರಿವಾರವಾಗಲಿ, ಅದರ ಭಾಗವಾಗಿರುವ ಪೇಜಾವರರಾಗಲಿ ಯಾವುದನ್ನೇ ಆಗಲಿ ಸುಖಾಸುಮ್ಮನೆ ಮಾಡುವವರಲ್ಲ. ಹಾಗಿರುವಾಗ ಇದ್ದಕ್ಕಿದ್ದಂತೆ ಪೇಜಾವರರು ಕುರುಬರಿಗೆ ವೈಷ್ಣವ ದೀಕ್ಷೆ ಕೊಡಲು ಮುಂದಾಗಿದ್ದರ ಹಿಂದಿನ ಅಜೆಂಡಾ ಏನಿರಬಹುದು?

ನನ್ನ ಪ್ರಕಾರ ಅದು ಕುರುಬ ಸಮುದಾಯದಲ್ಲಿ ಬಿರುಕನ್ನು ಮೂಡಿಸಿ ಬರುವ ಲೋಕಸಭೆ ಚುನಾವಣೆಯಲ್ಲಿ ಆ ಸಮುದಾಯದ ಒಂದಿಷ್ಟು ಜನರಾದರೂ ಬಿಜೆಪಿಗೆ ಓಟು ಕೊಡುವ ಮೂಲಕ ನರಹಂತಕ ನರೇಂದ್ರ ಮೋದಿಯನ್ನು ಪ್ರಧಾನಿಯಾಗಿಸುವ ಹುನ್ನಾರ.

ರಾಜ್ಯದ ಜನಸಂಖ್ಯೆಯಲ್ಲಿ ಶೇ. 8 ರಷ್ಟಿರುವ ಕುರುಬರು ಮೂರನೆ ಅತಿ ದೊಡ್ಡ ಸಮುದಾಯ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಆ ಸಮುದಾಯವು ಸಿದ್ದರಾಮಯ್ಯನವರ ಬೆನ್ನಿಗೆ ನಿಂತು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದು ಎಲ್ಲರಿಗೂ ಗೊತ್ತು. ಇದೇ ಪ್ರವೃತ್ತಿ ಬರುವ ಲೋಕಸಭೆ ಚುನಾವಣೆಯಲ್ಲೂ ಮುಂದುವರೆಯುವುದು ನಿಸ್ಸಂದೇಹ.

ಪರಿಸ್ಥಿತಿ ಹೀಗಿರುವಾಗ ಆ ಸಮುದಾಯದಲ್ಲಿ ಬಿರುಕನ್ನು ಮೂಡಿಸಿ ಹಲವರನ್ನು ತಮ್ಮತ್ತ ಸೆಳೆಯುವುದು ಹೇಗೆ ಎಂದು ಸಂಘ ಪರಿವಾರ ಚಿಂತಿಸಿರಬೇಕು. ಆಗ ಅವರಿಗೆ ತೋಚಿರುವುದೇ ಈ ವೈಷ್ಣವ ದೀಕ್ಷೆ ತರ್ಕ. ಪೇಜಾವರರ 'ಶ್ರೇಷ್ಠತೆ'ಗೆ ಮನಸೋತು ಕುರುಬ ಸಮುದಾಯದವರು ಅವರಿಂದ ವೈಷ್ಣವ ದೀಕ್ಷೆ ಪಡೆದರೆ ಅವರು ಪೇಜಾವರರ ಪ್ರಭಾವಕ್ಕೆ ಒಳಗಾಗುತ್ತಾರೆ, ಆ ಮೂಲಕ ಬಿಜೆಪಿಯ ಅಭ್ಯರ್ಥಿ ಮೋದಿಯ ಬೆಂಬಲಿಗರಾಗುತ್ತಾರೆ. ಇದು ಅವರ ತರ್ಕ ಎಂದು ನನಗನ್ನಿಸುತ್ತಿದೆ.

ಯಾಕೆಂದರೆ ಪೇಜಾವರರಿಂದ ದೀಕ್ಷೆ ಪಡೆದ ಮಾತ್ರಕ್ಕೆ ಕುರುಬರಿಗೆ ನಯಾಪೈಸೆಯ ಲಾಭವಿಲ್ಲ. ಯಾಕೆಂದರೆ ಹಾಗೆ ದೀಕ್ಷೆ ಪಡೆದವರನ್ನು ಪೇಜಾವರರು ತಮ್ಮ ಮಠದೊಳಕ್ಕೆ ಸೇರಿಸಿಕೊಳ್ಳುತ್ತೇವೆ ಎಂದಿಲ್ಲ. ಮಠ ಬಿಡಿ, ತಮ್ಮ ವಿದ್ಯಾಪೀಠದಲ್ಲಾದರೂ ಅಂಥವರಿಗೆ ಮಾಧ್ವ ಯುವಕರಿಗೆ ಕೊಡುವ ಸಂಸ್ಕೃತ ಪಾಠಗಳನ್ನು ಹೇಳಿಕೊಡುತ್ತೇವೆ ಎಂದಿಲ್ಲ. ವೈಷ್ಣವ ದೀಕ್ಷೆ ಪಡೆದಿರುವವರಿಗೆ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಅವರೆಲ್ಲರಿಗೆ ಉಚಿತ ಶಿಕ್ಷಣ ನೀಡುತ್ತೇನೆ ಎಂದಿಲ್ಲ. ಹೀಗಿರುವಾಗ ಯಾವ ಪುರುಷಾರ್ಥಕ್ಕೆ ಕುರುಬರು ಪೇಜಾವರರಿಂದ ದೀಕ್ಷೆ ಪಡೆಯಬೇಕು?

ಇದೆಲ್ಲ ತುಕ್ಕು ಹಿಡಿದಿರುವ ಚಿಂತನೆಗಳ ಪ್ರತಿಪಾದಕ ಮೋದಿಯ ರಾಜಕೀಯ ಲಾಭಕ್ಕಾಗಿ ಅಷ್ಟೇ. ರಾಜ್ಯದ ಕುರುಬರು ಸಂಘಪರಿವಾರದ ಈ ಹುನ್ನಾರವನ್ನು ಅರ್ಥಮಾಡಿಕೊಳ್ಳಬೇಕು...

***

⏭ 12

...ೋದಿ ಸೋಲಿಸಿ ...ಾರತ ಉಳಿಸಿ

...ನವೆಂಬರ್ 17 ರಂದು ನರೇಂದ್ರ ಮೋದಿ ...ಊರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ...ಮು ಸೌಹಾರ್ದ ವೇದಿಕೆಯು ಹಲವು ...ಮಗಳನ್ನು ತೆಗೆದುಕೊಂಡಿದೆ. ಅವುಗಳು ಹೀಗಿವೆ: ... 'ನರಹಂತಕ ನರೇಂದ್ರ ಮೋದಿ - ಹಿಂತಿರುಗು', ...ಾಟಕ ಗುಜರಾತ್ ಅಲ್ಲ', 'ಮೋದಿ ಸೋಲಿಸಿ ...ತ ಉಳಿಸಿ' ಎಂಬ ಘೋಷಣೆಯೊಂದಿಗೆ ...ಬರ್ 16ರಂದು ರಾಜ್ಯಾದ್ಯಂತ ವಿವಿಧ ನಗರಗಳಲ್ಲಿ, ... ಕೇಂದ್ರಗಳಲ್ಲಿ ಎಲ್ಲ ಜನಪರ ಸಂಘಟನೆಗಳು ... ಸಮುದಾಯಗಳನ್ನು ಒಟ್ಟು ಸೇರಿಸಿಕೊಂಡು ...ಶ್ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕು. ... ನವೆಂಬರ್ 17 ರಂದು ಬೆಂಗಳೂರಿನ ಬಸಪ್ಪ ...ನಿಂದ ಟೌನ್ ಹಾಲ್‌ತನಕ ಮೆರವಣಿಗೆ ನಡೆಸಿ ...ಹಾಲ್ ಮುಂದೆ ಸಮಾವೇಶಗೊಳ್ಳಬೇಕು.

... ಪ್ರತಿಭಟನೆ ಕಾರ್ಯಕ್ರಮಗಳಿಗೆ ಪೊಲೀಸರು ...ಮತಿ ನೀಡದಿದ್ದರೂ ಸಹ ಬಂಧನಕ್ಕೊಳಗಾಗಿ ...ಟಿಸಬೇಕು.

ಮೋದಿಯ ಅಭಿವೃದ್ಧಿ ಮಾದರಿಯನ್ನು ...ೋಸ್ ಮಾಡುವ ಕರಪತ್ರ, ಪೋಸ್ಟರ್‌ಗಳು, ...ತರ ಪರಿಣಾಮಕಾರಿ ವಿಧಾನಗಳನ್ನು ...ಡಿಸಬೇಕು.

...ಜ್ಯದ ವಿವಿಧ ಕಡೆಗಳಲ್ಲಿ ನಡೆಯಲಿರುವ ಈ ...ಟನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ...ಬಯಸುವವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

...ಎಲ್.ಅಶೋಕ್: 9448256216

...ಬಿನ್: 8123034361

...ನವೆಂಬರ್ 16 ರಾಜ್ಯಾದ್ಯಂತ
...ವೆಂಬರ್ 17 ಬೆಂಗಳೂರಿನಲ್ಲಿ

...ಬೃಹತ್ ರ್‍ಯಾಲಿ

...ಪ್ರತಿಭಟನೆ ಇಲ್ಲವೆ ಬಂಧನ
ಬನ್ನಿ... ಭಾಗವಹಿಸಿ

ಕರ್ನಾಟಕ ರಾಜ್ಯೋತ್ಸವ ವಿಶೇಷಾಂಕ

ಲೇಖನಗಳಿಗೆ ಆಹ್ವಾನ

ವಿಶೇಷ ರಾಜ್ಯೋತ್ಸವ ಸಂಚಿಕೆ ನವೆಂಬರ್ 8ರಂದು ಬಿಡುಗಡೆ

ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ 'ಲಂಕೇಶ್' ಒಂದು ವಿಶೇಷ ಸಂಚಿಕೆ ರೂಪಿಸಲಿದೆ.

ಕರ್ನಾಟಕ- ಕನ್ನಡ ಹಾಗೂ ಇಲ್ಲಿನ ಜನಸಮುದಾಯಗಳ ಬದುಕು-ಭಾವ-ಭಾಷೆಗಳ ಕುರಿತಂತೆ ಬರಹಗಳು ಈ ಸಂಚಿಕೆಯಲ್ಲಿರುತ್ತವೆ.

ನಮ್ಮ ಓದುಗರಿಗೆ ಬರೆಯಲಿಕ್ಕಾಗಿ ಎರಡು ವಿಷಯಗಳಿವೆ.


1. ಕನ್ನಡ ನನಗೆ ಕೈಕೊಟ್ಟ ಗಳಿಗೆ
2. ಕನ್ನಡ ನನ್ನನ್ನು ಕೈಹಿಡಿದ ಗಳಿಗೆ


- ಇದರಲ್ಲಿ ಯಾವುದಾದರೂ ವಿಷಯದ ಬಗ್ಗೆ ಇನ್ನೂರು ಪದಗಳ ಮಿತಿಯಲ್ಲಿ ನೀವು ಬರೆದು ಕಳುಹಿಸಬಹುದು.

ಉಳಿದಂತೆ ಈಗ ಚರ್ಚಿಸಬಹುದಾದ ಕರ್ನಾಟಕದ ನಾಡುಗಳು-ನುಡಿಗಳು ಹಾಗೂ ಬದುಕಿಗೆ ಸಂಬಂಧಿಸಿರುವ ಬರಹಗಳನ್ನು ದಯಮಾಡಿ ಕಳುಹಿಸಿ. ನಿಮ್ಮ ಬರಹ ನವೆಂಬರ್ 4ನೇ ತಾರೀಖಿನೊಳಗಾಗಿ ನಮಗೆ ತಲುಪಲಿ.

ಇ-ಮೇಲ್ (ನುಡಿ/ಬರಹ) : editorlankesh@gmail.com
ಫ್ಯಾಕ್ಸ್ : 08026604536
ಅಂಚೆ ವಿಳಾಸ : ಸಂಪಾದಕರು, ಲಂಕೇಶ್ ವಾರಪತ್ರಿಕೆ, ನಂ.9, ಇಪಿಟಿ ರಸ್ತೆ, ಬಸವನಗುಡಿ, ಬೆಂಗಳೂರು-560004.

ಅನಂತ್ಮಾಣಿ ಅಬ್ಬರ! ಹುಷಾರ್!! ಬಿಲದಿಂದ ಹೊರಬರುತ್ತಿದೆ ಕಮ್ಯುನಲ್ ಕಾಳಿಂಗ!





ಕೆನರಾಕ್ಕೊಬ್ಬ ಸಂಸದ ಇದ್ದಾನಾ?

ಇಂಥದೊಂದು ಪ್ರಶ್ನೆ ಸದ್ಯ ಲೋಕಸಭಾ ಕ್ಷೇತ್ರದ ಮಂದಿಗೆ ಕೇಳಿದರೆ, "ಊಹುಂ... ಇಲ್ಲ... ನಮಗೆ ಎಂಪಿ ಇದ್ದೂ ಇಲ್ಲ..." ಎಂದು ಅಸಹನೆ-ಸಿಟ್ಟು-ಬೇಸರದಿಂದ ಉದ್ಗರಿಸುತ್ತಾರೆ! ಏಕೆಂದರೆ, ಕಳೆದೈದು ವರ್ಷದಿಂದ ಸ್ಥಳೀಯ ಎಂಪಿ ಅನಂತ್ಮಾಣಿ ಯಾನೆ ಅನಂತಕುಮಾರ್ ಹೆಗಡೆ ಎಂಬ ಅನಾಹುತಕಾರಿ ಹಿಂದೂತ್ವದ ಹಿಕಮತ್ತುದಾರನ ಅಡ್ರೆಸ್ಸೇ ಇಲ್ಲದ್ದಕ್ಕೆ. ಕೆನರಾದ ಜನರು ಅದೆಂತೆಂಥ ಘನ-ಘೋರ ಸಮಸ್ಯೆ-ಸಂಕಟ ಎದುರಿಸಿದಾಗಲೂ ಈ ಸಂಸದ ಸರದಾರ ಬಿಲದಿಂದ ಹೊರಗೆ ಬರಲೇ ಇಲ್ಲ! ಹೀಗಾಗಿ ಸಂಸದ ಇದ್ದೂ ಸತ್ತಂತ ಸ್ಥಿತಿ ಕೆನರಾದ್ದು....

ಯಾವ ಆ್ಯಂಗಲ್‌ನಿಂದ ನೋಡಿದರೂ ಈ ಮತಾಂಧ ಪುಂಡ ಪಾರ್ಲಿಮೆಂಟ್‌ನಂಥ ಹೊಣೆಗಾರಿಕೆ-ಪಾವಿತ್ರ್ಯದ ಸಂಸ್ಥೆಗೆ ಪ್ರತಿನಿಧಿಯಾಗುವ ಯೋಗ್ಯತೆ ಇರುವಾತನೇ ಅಲ್ಲವೆಂಬುದು ಎಂಥವರಿಗೂ ಅರ್ಥವಾಗುತ್ತದೆ. ಭಟ್ಕಳದ ಐತಿಹಾಸಿಕ ಕೋಮು ಗಲಭೆಯ ಉಪ-ಉತ್ಪನ್ನ ಈತ! ಊರಿಗೆಲ್ಲ ಬೆಂಕಿ ಇಕ್ಕುವ ಈತನ ಕ್ರಿಮಿನಲ್ ಪಾತಕ ಪ್ರಾವೀಣ್ಯವೇ ಎಂಪಿಗಿರಿಯ ಅರ್ಹತೆಯಂತೆ ಬಿಜೆಪಿ ಬಾಸ್‌ಗಳಿಗೆ ಕಾಣಿಸಿತು. 1990ರ ದಶಕದಲ್ಲಿ ಜಿಲ್ಲೆಯಲ್ಲಿ ಎದ್ದಿದ್ದ ಮತಾಂಧ ಬಿರುಗಾಳಿಯಲ್ಲಿ ಹಿಂಸಾ ಪರಿವಾರದ ಅನಂತ್ಮಾಣಿ ಸಂಸದನಾಗಿ ಹೋದ! ಆನಂತರ ಈ ನಾಲಾಯಕ್ ಚೆಡ್ಡಿಗೆ ಮತ್ತೆ ಮೂರ್ಮೂರು ಬಾರಿ ಎಂಪಿಯಾಗುವ 'ಭಾಗ್ಯ' ಖುಲಾಯಿಸಿದಿದ್ದರೆ, ಅದು ಕಾಂಗ್ರೆಸ್‌ನ ಮನೆಮುರುಕ ಮ್ಯಾಗಿ ಮತ್ತು ದೇಶಪಾಂಡೆಯ ಮೇಲಾಟದಿಂದಷ್ಟೇ!!

ಸಂಸದನಾಗಿ ಸರಿಸುಮಾರು 17 ವರ್ಷ ಕಳೆದಿರುವ ಅನಂತ್ಮಾಣಿ ಏನಾದರೂ ಒಳ್ಳೆಯದು ಮಾಡಿದ್ದಾನಾ ಎಂದು ಹುಸಿ ಮದ್ದು ಸೂಡಿ ಹಿಡಿದು ಹುಡುಕಿದರೂ ಏನೇನೂ ಸಿಗದು. ಕೋಮು ಕ್ರೌರ್ಯದ ಮದೋನ್ಮತ್ತ ಭಾಷಣ ಬಿಗಿದು ರಾಜಕೀಯ ಆಕಾಂಕ್ಷೆ ಈಡೇರಿಸಿಕೊಂಡಿದ್ದು ಬಿಟ್ಟರೆ ಈತ ಸ್ವ-ಜೀರ್ಣೋದ್ಧಾರ ಮಾತ್ರ ಸಕತ್ತಾಗಿ ಸಾಧಿಸಿಕೊಂಡಿದ್ದಾನೆ. ಎಕರೆಗಟ್ಟಲೆ ಅರಣ್ಯ ಕಬಳಿಸಿ ಭರ್ಜರಿ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಕಂಡಕಂಡಲ್ಲಿ ಬೇನಾಮಿ ಆಸ್ತಿ ಮಾಡಿದ್ದಾನೆ. ಜನೋದ್ಧಾರದ ನೆಪದಲ್ಲಿ 'ಕದಂಬ' ಎಂಬ ಟ್ರಸ್ಟ್ ಸ್ಥಾಪಿಸಿ ಸರ್ಕಾರಿ ಅನುದಾನಕ್ಕೆ ಕನ್ನ ಹಾಕಿದ್ದಾನೆ.

ಈ ದಗಲುಬಾಜಿ ಟ್ರಸ್ಟ್‌ಗೆ ಧರ್ಮಪತ್ನಿಯನ್ನೇ ಧರ್ಮದರ್ಶಿಯಾಗಿ ಮಾಡಿರುವ ಅನಂತ್ಮಾಣಿಯ ಡಾಂಬರ್ ದಂಧೆಯಂತೂ ಲೋಕ ಪ್ರಸಿದ್ಧ! ಪರ್ಸೆಂಟೇಜು ವ್ಯವಹಾರದಲ್ಲಿ ಕಾಸು ಮಾಡಿದ್ದು ಸಾಕಾಗದೇ ಹೆಂಡತಿಯನ್ನೇ ಪಿಎ ಎಂದು ತೋರಿಸಿ ಸರ್ಕಾರಿ ಸಂಬಳ ಸ್ವಾಹಾ ಮಾಡಿದ್ದಾನೆ ಈ ಬುರ್ನಾಸ್ ಆಸೆಬುರುಕ. ಒಂದು ಕಾಲದಲ್ಲಿ ಬುತ್ತಿ ಕಟ್ಟಿಕೊಂಡು ಹಳ್ಳಿ-ಹಳ್ಳಿಗೆ ಹೋಗಿ 'ಚೆಡ್ಡಿ ಪ್ರಸಾರ' ಮಾಡುತ್ತಿದ್ದ ಈ ಅಬ್ಬೇಪಾರಿ ಇವತ್ತು ಕೋಟಿ-ಕೋಟಿಗೆ ತೂಗುವುದು ಹಿಂದೂತ್ವದ ಮಹಿಮೆಯೇ ಸರಿ! ಮತ್ತೊಂದೆಡೆ ಈ ಶೀಲ-ಸಂಪ್ರದಾಯದ ವ್ಯಾಖ್ಯಾನಕಾರನ ರಂಗೀಲಾ ರಗಳೆಗಳೂ ರೋಚಕ ಗುಲ್ಲೆಬ್ಬಿಸುತ್ತಲೇ ಇದೆ.



ಅಡ್ಡ ಕಸುಬಿಂದ ಅಂತಸ್ತು-ಆಸ್ತಿ ವೃದ್ಧಿಸಿಕೊಳ್ಳೋದು, ಶಿವಾನಂದ ನಾಯ್ಕ್, ಕಾಗೇರಿ ಹೆಗಡೆಯಂಥ ಸ್ವ-ಪಕ್ಷದ ಎದುರಾಳಿಗಳ ವಿರುದ್ಧ ನಡುಬೀದಿ ಕಾಳಗ ಮಾಡೋದು, ಎಲೆಕ್ಷನ್ ಬಂದಾಗ ಕೋಮು ಅಮಲು ಕೆರಳಿಸುವ ಕಿತಾಪತಿ ಮಾಡೋದು ಮಾತ್ರ ಸಂಸದಗಿರಿಯ ಆದ್ಯ ಕರ್ತವ್ಯ ಎಂದು ಭಾವಿಸಿರುವ ಅನಂತ್ಮಾಣಿ ನಾಲ್ಕು ಬಾರಿ ಲೋಕಸಭೆಗೆ ಹೋದಾಗಲೂ ಅಲ್ಲಿ ಸೊಂಪಾದ ನಿದ್ದೆ ಹೊಡೆದು ಕಾಲ ಹಾಕಿದ್ದಾನೆ. ಸೀಬರ್ಡ್ ನೌಕಾನೆಲೆ, ಕೊಂಕಣ ರೈಲ್ವೆ, ಕೈಗಾ ಅಣುಸ್ಥಾವರ, ಹೆದರಿಸಿದ್ದ ಹಣಕೋಣ ಮತ್ತು ತದಡಿ ಥರ್ಮಲ್ ವಿದ್ಯುತ್ ಯೋಜನೆ, ಹೆದ್ದಾರಿ ಅಗಲೀಕರಣ ಹೆಮ್ಮಾರಿ, ಮೀನುಗಾರ-ರೈತ-ತೋಟಿಗರ ಬವಣೆ, ಮೆಡಿಕಲ್-ಇಂಜಿನಿಯರಿಂಗ್ ಕಾಲೇಜು ಬೇಡಿಕೆ, ಅಭಿವೃದ್ಧಿಗೆ ಮಾರಕವಾದ ಜಲ್ಲಿಕಲ್ಲು ಗಣಿ-ಮರಳು ಗಣಿನೀತಿ, ಹಾಲಕ್ಕಿ ಒಕ್ಕಲಿಗರ ಮೀಸಲಾತಿ ಜರೂರು, ಅರಣ್ಯ ಅತಿಕ್ರಮಿತರ ಅಹವಾಲು... ಹೀಗೆ ಇಂಥ ಯಾವ ಸಮಸ್ಯೆಗೂ ಸಂಸದನಾಗಿ ಅನಂತ್ಮಾಣಿ ಸ್ಪಂದಿಸಿದ-ಮನುಷ್ಯತ್ವ ತೋರಿಸಿದ ಕುರುಹುಗಳೇ ಕೆನರಾ ಕ್ಷೇತ್ರದ ಉದ್ದಗಲದಲ್ಲಿಲ್ಲ!!

ಹೀಗಾಗಿ ಈ ಬಾರಿ ಈತನಿಗೆ ರಾಜಕಾರಣದಿಂದ ಕಡ್ಡಾಯ ನಿವೃತ್ತಿ ಮಾಡಲು ಮತದಾರರಷ್ಟೇ ಅಲ್ಲ, ಬಿಜೆಪಿಯ ಹಿರಿ-ಮರಿ ಮಂದಿಯೂ ನಿರ್ಧರಿಸಿಬಿಟ್ಟಿದ್ದಾರೆ. ಬೆಳಗಾವಿ ಜಿಲ್ಲೆಯ ಖಾನಾಪುರ ಮತ್ತು ಕಿತ್ತೂರು ಕ್ಷೇತ್ರದಿಂದ ಹಿಡಿದು ಇಡೀ ಉತ್ತರ ಕನ್ನಡದ ಬಿಜೆಪಿಯಲ್ಲಿ ಈತನಿಗೆ ಮತ್ತೆ ಟಿಕೆಟ್ ಕೊಡಕೂಡದೆಂಬ ವಿರೋಧ ಹುಟ್ಟಿಕೊಂಡಿದೆ. ಸಾಫ್ಟ್ ಹಿಂದೂವಾದಿ ಕಾಗೇರಿ ಈ ಉಗ್ರ ಮಾಣಿಗೆ ಬಿಜೆಪಿ ಟಿಕೆಟ್ ತಪ್ಪಿಸಲು ಒಳಗೊಳಗೆ ಮಸಲತ್ತು ಮಾಡುತ್ತಿದ್ದಾರೆ. ಕೆನರಾದ ಮತದಾರರಂತೂ ದ್ರೋಹಿ ಸಂಸದನಿಗೆ ಬುದ್ಧಿ ಕಲಿಸಲು ಎಲೆಕ್ಷನ್‌ಗಾಗಿ ಕಾಯುತ್ತಿದ್ದಾರೆ. ಇದೆಲ್ಲ ಗೊತ್ತಾಗಿರುವ ಅನಂತ್ಮಾಣಿ ಅಡಕತ್ತರಿಯಲ್ಲಿ ಸಿಕ್ಕಂತೆ ಒದ್ದಾಡುತ್ತಿದ್ದಾನೆ. ಸ್ವಯಂಕೃತಾಪರಾಧದಿಂದ ಭರ್ಜರಿ ಡ್ಯಾಮೇಜು ಮಾಡಿಕೊಂಡಿರುವ ಮಾಣಿ ಈಗ ಪೂರ್ವಾಶ್ರಮದ ಕಮ್ಯುನಲ್ ಕುತಂತ್ರಕ್ಕೆ ಸ್ವಿಚ್ ಹಾಕಿಕೊಂಡು ನಿಧಾನಕ್ಕೆ ಬಿಲದಿಂದ ಹೊರಬರುತ್ತಿದ್ದಾನೆ...


ಒಂದೆಡೆ ಪಾರ್ಟಿ ಟಿಕೆಟ್‌ಗೆ ಗುದ್ದಾಡ ಬೇಕಾಗಿರುವ ಅನಂತ್ಮಾಣಿ ಮತ್ತೊಂದೆಡೆ ಕಿಸೆಯಲ್ಲಿ ಹಿಂದೂಗಳ ತಲೆಕೆಡಿಸುವ ಹಿಡನ್ ಅಜೆಂಡಾ ಇಟ್ಟುಕೊಂಡು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಕೆನರಾದ ಉದ್ದಗಲಕ್ಕೆ ಅಂಡಲೆಯುತ್ತಿದ್ದಾನೆ. ಕಳೆದ ಬಾರಿ ಬರೀ 27 ಸಾವಿರ ಮತದಂತರದಿಂದ ಬಚಾವಾಗಿದ್ದ ಶೂನ್ಯ ಸಾಧನೆಯ ಮಾಣಿ ಎಲೆಕ್ಷನ್‌ನಲ್ಲಿ 'ಪ್ರಚಾರ ಸಾಮಗ್ರಿ' ಕೊರತೆಯಾದಾಗೆಲ್ಲ ಅಖಂಡ ಭಾರತ, ಪ್ರಚಂಡ ಹಿಂದೂತ್ವ, ಹುಸಿ ಮತಾಂತರ, ಮುಸ್ಲಿಮ್ ಭಯೋತ್ಪಾದನೆ, ಗೋರಕ್ಷಣೆಯ ತಲೆಬರಹದ ಬೋಗಸ್ ಸಿದ್ಧ ಭಾಷಣ 'ಅಸ್ತ್ರ' ಮಾಡಿಕೊಳ್ಳೋದು ಆತನ ಅಸಲೀ ರಾಜಕಾರಣ. ಜನಪರ ಐಡಿಯಾಗಳೇ ಇಲ್ಲದ ಖಾಲಿ ಬುರುಡೆಯ ಅನಂತ್ಮಾಣಿಗೆ ಮತೋನ್ಮತ್ತ ಭಾಷಣವೇ ಬಂಡವಾಳ.

ಎಲೆಕ್ಷನ್ ಹತ್ತಿರಾದಂತೆ ಕೋಮುದ್ವೇಷದ ಸಣ್ಣ ಕಿಡಿ ಎದ್ದರೂ ಸಾಕು, ಅದನ್ನು ದೊಡ್ಡ ಬೆಂಕಿಯನ್ನಾಗಿಸಲು ಅನಂತ್ಮಾಣಿ ಹವಣಿಸುತ್ತಾನೆ. ಇದಾತನ ಬಾಗಾಯ್ತಿನ ಕರ್ಮ. ಈ ಬಾರಿಯಂತೂ ಆತನಿಗೆ ಮತಾಂಧ ರಾಜಕಾರಣ ಬಿಟ್ಟರೆ ಮತ್ಯಾವ ಈಶ್ಯೂ ನೆರವಿಗೆ ಬರದಂತಾಗಿದೆ. ಜನರಿಗೆ ಮುಖ ತೋರಿಸಲಾಗದ ಸ್ಥಿತಿಯಲ್ಲಿರುವ ಅನಂತ್ಮಾಣಿ ಹಿಂದೂತ್ವದ ಮುಖವಾಡ ಹಾಕಿಕೊಂಡು ಅಖಾಡಕ್ಕಿಳಿವ ಸನ್ನಾಹದಲ್ಲಿದ್ದಾನೆ. ಕಳೆದ ವಾರ ಹೊನ್ನಾವರದಲ್ಲಿ ಹಿಂದೂಗಳ ಗುಂಪೊಂದು 'ಮತಾಂತರದ ಭ್ರಮೆ'ಯಲ್ಲಿ ಮಾಡಿದ ಪ್ರತಿಭಟನೆಯಲ್ಲಿ ಅನಂತ್ಮಾಣಿ ಅಚಾನಕ್ ಠಳಾಯಿಸಿಬಿಟ್ಟಿದ್ದ ಅಲ್ಲಾತ ತನ್ನ ಹಿಂದಿನ ಹೊಡಿ-ಬಡಿ-ಕಡಿ ವರಸೆಯ ಪ್ರವರ ತೋರಿದ್ದಾನೆ. ತನ್ಮೂಲಕ ಬರಲಿರುವ ಎಲೆಕ್ಷನ್‌ನ ಮತ ಬೇಟೆಗೆ ಪೀಠಿಕೆ ಹಾಕಿದ್ದಾನೆ. ಕ್ರಿಶ್ಚಿಯನ್ನರು ಮತಾಂತರ ಮಾಡುತ್ತಿದ್ದಾರೆಂಬ ಹುಸಿ ಗುಮ್ಮ ತೋರಿಸಿ ತಿಪ್ಪರಲಾಗ ಹಾಕಿದ ಅನಂತ್ಮಾಣಿಯ ಮಾತುಗಾರಿಕೆ ಹುಂಬ ಹಿಂದೂಗಳನ್ನು ದಂಗೆಗೆ ಪ್ರಚೋದಿಸುವಂತಿತ್ತು; ಹಿಂದೂಗಳನ್ನು ಮತ ಪ್ರಲೋಭನೆಗೆ ಒಡ್ಡುವಂತಿತ್ತು ಅನಂತ್ಮಾಣಿ ಅವಾಂತರ.

ಹೊನ್ನಾವರದ ಹುಸಿ ಮತಾಂತರ

ಮುಳುಗುವವನಿಗೆ ಹುಲ್ಲು ಕಡ್ಡಿ ಆಧಾರ ಅಂತಾರಲ್ಲ ಹಾಗಾಗಿದೆ ರಾಜಕೀಯವಾಗಿ ಮುಳುಗಿರುವ ಬಿಜೆಪಿಯ ಅನಂತ್ಮಾಣಿ ಮತ್ತು ಜೆಡಿಎಸ್‌ನ ಮಾಜಿ ಶಾಸಕ ದಿನಕರ ಶೆಟ್ಟಿ ಪಾಲಿಗೆ ಹೊನ್ನಾವರದ ಹುಸಿ ಮತಾಂತರದ ರಗಳೆ ರಾದ್ಧಾಂತ. ಕರಾವಳಿಯ ಹೊನ್ನಾವರ ಈಗೀಗ ಮತಾಂತರದ ನೆಪದಲ್ಲಿ ನೆಮ್ಮದಿ ಕಳೆದುಕೊಳ್ಳುತ್ತಿರುವುದರ ಜಾಡು ಹಿಡಿದುಹೋದರೆ ಬಂದು ನಿಲ್ಲುವುದು ಹಿಂದೂತ್ವ ಬಂಡವಾಳ ಮಾಡಿಕೊಂಡು ಅಂಡಲೆಯುತ್ತಿರುವ ಭಂಡ ಪೋರರ, ಗ್ಯಾಂಗಿನ ಅಡ್ಡೆಗೆ. ಈ ಹಿಂದೂತ್ವ ಹೊಟ್ಟೆ ಪಾಡಾಗಿಸಿಕೊಂಡಿರುವ ಹುಚ್ಚು ಹುಡುಗರ ಪಡೆಗೆ ಹಾಲಿ ಪಟ್ಟಣ ಪಂಚಾಯ್ತಿಯ ಜೆಡಿಎಸ್ ಸದಸ್ಯ ಸಿ.ಜೆ. ನಾಯಕ ಮತ್ತು ಮಾಜಿ ಪ.ಪಂ. ಸದಸ್ಯ- ವಿಜಯ ಕಾಮತ ನಾಯಕರು. ಇವರ ಉಪಟಳ ತಡೆಯಲಾಗದೆ ಬಿಜೆಪಿ ಪಾರ್ಟಿಯೇ ಈ ಬಾರಿಯ ಮುನಿಸಿಪಾಲ್ಟಿ ಎಲೆಕ್ಷನ್‌ನಲ್ಲಿ ಈ ಹಿಂದೂ ಹಾರಾಟಗಾರರಿಗೆ ಟಿಕೆಟ್ ಕೊಡದೆ 'ಹಚಾ' ಎಂದಿತ್ತು! ಮಜಾ ಎಂದರೆ, ಹಿಂದೂ ವೀರರಿಬ್ಬರು ಜನಜಂಗುಳಿ ಸೇರಿಸಿದರೆ ಸಂಘ ಪರಿವಾರದ ಮಹಾ ಮಹಿಮರು ಇವರು 'ನಮ್ಮವರು' ಎಂದು ತಬ್ಬಿಕೊಳ್ಳುತ್ತಾರೆ.

ಈ ಹಿಂದೂತ್ವದ ಅಮಲುಕೋರರಿಗೆ ಈಚೆಗೆ ಹೊನ್ನಾವರದ ಹಳ್ಳಿಗಳಲ್ಲಿ-ಪಟ್ಟಣಗಳಲ್ಲಿ ಕ್ರಿಶ್ಚಿಯನ್ನರು ಮತಾಂತರ ಮಾಡುತ್ತಿರುವ 'ಕನಸು' ಬೀಳತೊಡಗಿದೆ. ಮತಾಂತರಗೊಂಡಿರುವ ಹಿಂದೂ ಹುಡುಗರು ಮನೆಯ ತುಳಸಿಕಟ್ಟೆಯನ್ನೇ ಒಡೆದು ಹಾಕಿದ್ದಾರೆಂದು ತಂದೆಯಿಂದಲೇ ಕಂಪ್ಲೇಂಟು ಕೊಡಿಸಿ ಆ ಕುಟುಂಬ ಕಣ್ಣೀರಲ್ಲಿ ಕೈತೊಳೆವಂತೆ ಮಾಡಿದ ಕೀರ್ತಿ ಈ ಹಿಂದೂ ಪಡೆಯದು. ಆ ತಂದೆ ಹಿಂದೂ ಗ್ಯಾಂಗಿನ ಒತ್ತಡಕ್ಕೆ ಬಲಿಯಾಗಿ ಮಗನ ಮೇಲೆ ಪೊಲೀಸು ದೂರು ಕೊಟ್ಟು ಚಡಪಡಿಸಿದ ವೇದನೆಯ ಕತೆ ಹೇಳತೀರದು.



ಹಾಗೆಯೇ ಹೊನ್ನಾವರದ ಹೊರವಲಯದಲ್ಲಿರು ಚಂದ್ರಾಣಿ ಎಂಬ ಹಿಂದುಳಿದ ಬಡವರಾದ 'ಉಪ್ಪಾರ ಕೊಪ್ಪದಲ್ಲಿ ಕ್ರಿಶ್ಚನ್ ಮಿಷನರಿಗಳು ಮತಾಂತ ಮಾಡುತ್ತಾರೆಂಬ ಗುಲ್ಲು ಎಬ್ಬಿಸಲಾಗಿತ್ತು, ಅದೇನಾಯಿ ಹಿಂದೂವಾದಿಗಳಿಗೇ ಗೊತ್ತು. ಆದರೆ ಈಚೆಗೆ ಪ್ರತಿ ಸೇಂಟ್ ಥಾಮಸ್ ಎಂಬ ಶಿಕ್ಷಣ ಸಂಸ್ಥೆಯ ಶಾಲಾಸಮಯದ ನಂತರ ಹುಡುಗರನ್ನಿಟ್ಟುಕೊಂ ಕ್ರಿಶ್ಚಿಯನ್ ಮತ ಪ್ರಸಾರ ನಡೆಸಲಾಗುತ್ತಿದೆಯೆಂದು ಹಿಂದ ರಕ್ಷಕರು ದೊಂಬಿ ಎಬ್ಬಿಸಿದ್ದರು. ಕ್ರಿಶ್ಚಿಯನ್ ಒಬ್ಬ ಹಿಡಿದು ಬಡಿದಿದ್ದರು. ಅದಾದ ಬೆನ್ನಿಗೇ ಹಳದೀಪುರ ಕ್ರಿಶ್ಚಿಯನ್ ಶಾಲೆಯಲ್ಲಿ ಮತಾಂತರ 'ಆಗುತ್ತಿರುವುದ ಜಾಗೃತ ಹಿಂದೂ ಮುಂದಾಳುಗಳಿಗೆ 'ಕಂಡಿತು' ಪ್ರತಿಭಟನೆಗಳೂ ನಡೆದವು. ಆದರೆ ಮರುದಿನ "ಹಳದೀಪುರದ ಎಲ್ಲ ಜಾತಿ-ಧರ್ಮದ ಜನರು ಶಾಲೆಯಲ್ಲಿ ಮತಾಂತರ ನಡೆಯುತ್ತಿಲ್ಲ... ನಮ್ಮೂರ ಮಕ್ಕಳಿಗೆ ಪ್ರಾಮಾಣಿಕವಾಗಿ-ಶ್ರದ್ಧೆಯಿಂದ ಕ್ರಿಶ್ಚಿಯನ್ನರು ಶಿಕ್ಷ ಅನಾದಿಕಾಲದಿಂದ ಕೊಡುತ್ತಿದ್ದಾರೆ" ಎಂದು ಪ್ರತಿ-ಪ್ರತಿಭಟ ಮಾಡಿದ್ದರು.

ಅಲ್ಲಿಗೆ ಈ ಹಿಂದೂ ಹಿರೇಮಣಿಗಳ ಮತಾಂತ ಅಸಲಿಯತ್ತು ಕಳಚಿ ಬಿದ್ದಿತ್ತು. ಆದರೆ ಹೊನ್ನಾವರ ಏನಾದರೊಂದು ಗಲಾಟೆ ಮಾಡಿಯೇ ತೀರಬೇಕೆಂ ಹಟತೊಟ್ಟಿದ್ದ ಸೋಕಾಲ್ಡ್ ಹಿಂದೂ ರಕ್ಷಕರಿಗೆ ತಾಲ್ಲೂ ಗುಡ್ಡಗಾಡು ಪ್ರದೇಶದ 'ಕೆರೆ ಕೋಣ' ಎಂಬ ಹಳ್ಳಿಯ ಹಿಂದೂ ಹೆಂಗಸೇ ಮುಂದಾಗಿ ಕ್ರಿಶ್ಚಿಯನ್ ಧರ್ಮ ಮತಾಂತರ ಮಾಡುವುದು 'ಕಾಣಿಸಿದೆ'! ಹೊನ್ನಾವ

ಇದು ಮತಾಂತರವಾ?

ಹೊನ್ನಾವರದ ಸಂತ ಇಗ್ನೇಷಿಯಸ್ ಆಸ್ಪತ್ರೆ ಹಳೆಯದು. ಕ್ರಿಶ್ಚಿಯನ್ನರು ನಡೆಸುವ ಈ ಆಸ್ಪತ್ರೆ ಹೊನ್ನಾವರದಲ್ಲಿ ಆರೋಗ್ಯ ಸೇವೆಯ ಕೊರತೆಯಿದ್ದಾಗ ಒಂಚೂರು ಹೆಚ್ಚಿಗೆ ಸೌಲಭ್ಯ ಒಳಗೊಂಡಿತ್ತು. ಬಡವರಿಗೆ-ಅಸಹಾಯಕರಿಗೆ ನೆರವಾಗಿತ್ತು, ಇಂದು ಅದು ಸುಸಜ್ಜಿತಗೊಂಡಿದೆ. ಆರೋಗ್ಯ ಶಿಕ್ಷಣ ಕೇಂದ್ರವಾಗಿದೆ. ನರ್ಸಿಂಗ್‌ನಂಥ ಪ್ಯಾರಾ ಮೆಡಿಕಲ್ ಕೋರ್ಸ್‌ಗಳು ಇಲ್ಲಿದೆ. ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯಂತೆ ಸಂತ ಇಗ್ನೇಷಿಯಸ್ ಸಂಸ್ಥೆ ತನ್ನ ಕಾರ್ಯಕ್ರಮಗಳನ್ನು ಗ್ರಾಮೀಣ ಭಾಗಕ್ಕೆ-ಶಿಕ್ಷಣಕ್ಕೆ ವಿಸ್ತರಿಸಿಕೊಂಡಿದೆ. ಹೊನ್ನಾವರದ ಬೇರೆ-ಬೇರೆ ಹಳ್ಳಿಗಳಲ್ಲಿ ಈ ಸಂಸ್ಥೆಯ 14 ಪ್ರೇರಕಿಯರು ಕೆಲಸ ಮಾಡುತ್ತಿದ್ದಾರೆ. ಇವರದು ವಿದ್ಯಾರ್ಥಿಗಳ ಕಲಿಕೆ-ಪರೀಕ್ಷಾ ತಯಾರಿ ಉತ್ತೇಜಿಸುವುದು; ಆಯ್ದ ಬಡ ಮಕ್ಕಳಿಗೆ ಈ ಸಂಸ್ಥೆ ಪಠ್ಯ-ನೋಟ್‌ಬುಕ್, ಸ್ಕೂಲ್ ಬ್ಯಾಗ್, ಛತ್ರಿ ವಿತರಿಸುತ್ತಿದೆ; ವಿವಿಧ ರೋಗಗಳ ಮಾಹಿತಿಯ ತರಬೇತಿ ಸಿಬ್ಬಂದಿಗಳಿಗೆ ಕೊಟ್ಟು ಫಲಾನುಭವಿಗಳಿಗೆ ಅರಿವು ಮೂಡಿಸುತ್ತಿದೆ ಸದ್ರಿ ಸಂಸ್ಥೆ.

ಈ ಸಂಸ್ಥೆ "ಸಂಜೀವಿನಿ" ಎಂಬ ಒಂದು ಪತ್ರಿಕೆ ಹೊರತರುತ್ತಿದೆ. ಅದರಲ್ಲಿ ಸಂಸ್ಥೆಯ ಗ್ರಾಮೀಣಾಭಿವೃದ್ಧಿ ಶೈಕ್ಷಣಿಕ ಪ್ರಗತಿ, ಆರೋಗ್ಯದ ಅರಿವುಗಳ ವಿವರ-ಸುದ್ದಿ ಇರುತ್ತದೆ. ಈ ಪತ್ರಿಕೆಯ ಸಲಹಾ ಸಮಿತಿಯಲ್ಲಿ ಬಿಇಓ ಇದ್ದಾರೆ. ಸಂಪ್ರದಾಯ-ಹಿಂದೂ ದೇವರ ಬಗ್ಗೆ ಭಯ-ಭಕ್ತಿಯಿರುವ ಡಂಬಾಯಗಾರ ಸಾಹಿತಿಯೊಬ್ಬರಿದ್ದಾರೆ. ಹಿಂದೂವೇ ಇದರ ಸಂಪಾದಕ. ಇಂಥ ಪತ್ರಿಕೆಯಲ್ಲಿ ಹಿಂದೂತ್ವದ ವಿರುದ್ಧ ಅಥವಾ ಕ್ರಿಶ್ಚಿಯಾನಿಟಿ ವೈಭವೀಕರಣ ಇರಲು ಸಾಧ್ಯವಾ? ಇದರಲ್ಲಿ ಬಂದ "ಗಣೇಶ ಚತುರ್ಥಿ-ವಿಸರ್ಜನೆ ಸಡಗರ-ಪರಿಸರ ಮಾಲಿನ್ಯ" ಎಂಬ ಶೀರ್ಷಿಕೆ ಮತ್ತು ಅದರಡಿ ಇದ್ದ ಫೋಟೋ ಮತಾಂತರದ ಭೂತವಾಗಿ ಹಿಂದೂ ಜಗಳಗಂಟರಿಗೆ ಕಾಣಿಸಿದೆ. ಬ್ಯಾಂಕ್ ಅಕೌಂಟ್ ತೆರೆಯಲು ಭಾವಚಿತ್ರ ಕೇಳಿದರೆ ಮತಾಂತರದ ಬೊಬ್ಬೆ ಎಬ್ಬಿಸುತ್ತಾರೆ. ಇದೆಂಥ ಕರ್ಮ?!

ಮತಾಂತರಕ್ಕೆ ಆಮಿಷವೊಡ್ಡಿದ ಹಿಂದೂ ರಕ್ಷಕರ ಅಪವಾದಕ್ಕೆ ತುತ್ತಾಗಿರುವ ಶ್ಯಾಮಲಾ ಶೆಟ್ಟಿ ಅಮಾಯಕ ಹೆಣ್ಣು. ಆಕೆ ಯಾವ ಮತಾಂತರಕ್ಕೂ ಪ್ರಯತ್ನಿಸಿಲ್ಲ; ತನ್ನ ಹಿಂದೂ ಧರ್ಮದಿಂದ ಒಂದಿಂಚೂ ಕದಲಲಿಲ್ಲ. ಆಕೆಯ ಕೆಲಸ ಫಲಾನುಭವಿಗಳನ್ನು ಶಿಕ್ಷಣದತ್ತ ಗಮನ ಕೇಂದ್ರೀಕರಿಸಲು ಪ್ರೇರೇಪಿಸುವುದು. ಕೆರೆಕೋಣ ಶಾಲೆಯಿಂದ ಕಾಲೇಜಿನ ತನಕದ 20 ವಿದ್ಯಾರ್ಥಿಗಳು ಆಕೆಯ ಉಸ್ತುವಾರಿಯಲ್ಲಿದ್ದಾರೆ. ಈ ಫಲಾನುಭವಿಗಳಿಗೆ ಆಕೆ ಕ್ಲಾಸ್ ತೆಗೆದುಕೊಳ್ಳೋದೇ ಹಿಂದೂ ದೇವರ ನಾಮಸ್ತುತಿಯೊಂದಿಗೆ. ಆಕೆಯೂ ಹಿಂದೂ ದೇವಾನುದೇವತೆಗಳದೇ ಆರಾಧಕಿ.

ಹೀಗಿರುವಾಗ ಮತಾಂತರದ ಅನುಮಾನ ಎಲ್ಲಿಂದ ಬಂತು ಹಿಂದೂ ಭೂಪರಿಗೆ? ಸುಳ್ಳೇ ಮನೆದೇವರಾಗಿರುವ ಮತಾಂಧರು ಮೊಸರಲ್ಲಿ ಕಲ್ಲು ಹುಡುಕುತ್ತಿದ್ದಾರಷ್ಟೇ. ಪಾಲಿಟಿಕಲ್ ಮೈಲೇಜ್ ಟ್ರಿಕ್ಕು ಇದು!! ಊರಿಗೆ ಬೆಂಕಿಬಿದ್ದರಷ್ಟೇ ಇವರ ಬೇಳೆ ಬೇಯುತ್ತದೆ.

ಯಟ್ ಇಗ್ನೇಷಿಯಸ್ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯಲ್ಲಿ ಕ್ಷಣ ಪ್ರೇರಕಿ'ಯಾಗಿ ಕೆಲಸ ಮಾಡುತ್ತಿರುವ ಶ್ಯಾಮಲಾಶೆಟ್ಟಿ ತಾಂತರಕ್ಕೆ ಆಮಿಷ ಒಡ್ಡುತ್ತಿದ್ದಾರೆಂದು ಆಕೆಯ ಮೇಲೇರಿ ಹೋದ ಹಿಂದೂ ಗ್ಯಾಂಗ್ ಬೆದರಿಸಿದೆ. ಒಂದು ಮೂಲದ ಕಾರ ಹಲ್ಲೆಯೂ ಆಕೆ ಮೇಲಾಗಿದೆ. ಆಕೆ ತಕ್ಷಣ ಲೀಸರಿಗೆ ಹತ್ತು ಹಿಂದೂ 'ಆ್ಯಕ್ಟಿವಿಸ್ಟ್'ಗಳ ಮೇಲೆ ದು ಕೊಟ್ಟಿದ್ದಾರೆ. ಪಿಎಸ್‌ಐ ಜಾಯ್ ಅಂತೋನಿ ರೋಪಿಗಳನ್ನು ಬಂಧಿಸಿದ್ದಾರೆ. ಆಗ ಹಿಂದೂತ್ವದ ಅಸಲೀ ವತಾರ ಅನಾವರಣ ಆಗಿದೆ!

ಅಕಟಕಟಾ.... ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಪಿಎಸ್‌ಐ ದೂಶೂರರ ಬಂಧಿಸುತ್ತಾರೆಂದರೆ ಸುಮ್ಮನಿರಲಾದೀತಾ? ಲೀಸ್ ಠಾಣೆ ಎದುರು ಅಪರಾತ್ರಿಯಲ್ಲಿ ನೂರಾರು ದೂಗಳು ಸೇರಿದರು. ಪಿಎಸ್‌ಐಗೆ ಧಿಕ್ಕಾರ ಕೂಗಿದರು. ತ್ರಿ ಹೈವೆ (66) ಬಂದ್‌ಗೆ ಮುಂದಾದರು. ಆಗ ಟ್ಕಳದಿಂದ ಬಂದ ಸಹಾಯಕ ಪೊಲೀಸ್ ವರಿಷ್ಠ ಲಾಠಿ ಸಲು ಸಿಬ್ಬಂದಿಗೆ ಹೇಳಿದ್ದಾರೆ. ಜನರನ್ನು ಚದುರಿಸಿದ್ದಾರೆ. ಲ್ಲಿಗೆ ಎರಡು ಅವಮಾನ ಹಿಂದೂಗಳಿಗಾದಂತಾಯ್ತೆಂದು ಬೊಬ್ಬೆ ಎದ್ದಿತು. ಒಂದು ಕ್ರಿಶ್ಚಿಯನ್ ಪಿಎಸ್‌ಐ ಹಿಂದೂ ರೋಪಿಗಳ ಬಂಧಿಸಿದ್ದು, ಮತ್ತೊಂದು ಅದೇ ಪಿಎಸ್‌ಐ ದೂ ಗುಂಪಿನ ಮೇಲೆ ಲಾಠಿ ಚಾರ್ಜ್ ಮಾಡಿದ್ದು. ಸಲಿಗೆ ಲಾಠಿ ಚಾರ್ಜ್ ಮಾಡಿದ್ದು ಎಎಸ್‌ಪಿಯೇ ೂರತು ಸಣ್ಣ ನೌಕರ ಪಿಎಸ್‌ಐ ಅಂತೋನಿಯಲ್ಲ.


ಮರುದಿನ ವದಂತಿಗಳದೇ ದರ್ಬಾರು. ಕ್ರಿಶ್ಚಿಯನ್ನರದು ಸ್ತಿಯಾಯ್ತೆಂಬ ಅಪಪ್ರಚಾರ. ತಂಡೋಪತಂಡವಾಗಿ ಚೇರಿ-ಪೊಲೀಸ್ ಠಾಣೆ ಎದುರು ಜನ ಮಾಯಿಸತೊಡಗಿದರು. ಎಲ್ಲೋ ಇದ್ದ ಎಂಪಿ ಅನಂತ್ಕುಮಾರ್ ಬಿಹಿರಿ ಹಿಗ್ಗುತ್ತ ಹೊನ್ನಾವರಕ್ಕೆ ಬಂದರು. ದಿಢೀರ್ ಬದು ಸಂಘ ಪರಿವಾರದ ಪ್ರಚೋದನಾತ್ಮಕ -ಮಾತುಗಾರ ಕ್ರವರ್ತಿ ಸೂಲಿಬೆಲೆ ಪ್ರತ್ಯಕ್ಷವಾದ. ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತ್ತಿಗೆ ಎದುರೇ ಸೋತು ಮೂಲೆ ಸೇರಿದ್ದ ಜೆಡಿಎಸ್‌ನ ಾಜಿ ಶಾಸಕ ದಿನಕರ ಶೆಟ್ಟಿ ಜನಜಂಗುಳಿ ಸೇರಿದ್ದು ಳಿ 'ಹೀರೋ' ಆಗುವ ತೆವಲಿಂದ ಓಡೋಡಿ ಹೊನ್ನಾವರಕ್ಕೆ ಬಂದರು. ಎಲ್ಲ ಮುಖೇಡಿ ಲೀಡರ್‌ಗಳು ರಿ ಜನರನ್ನು ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಮಿ ಮಾಡಿದರು. ಮೂರ್‍ನಾಲ್ಕು ಸಾವಿರ ಜನ ಒಟ್ಟಾಗಿದ್ದರು. ೊಡ್ಡ ಮೈಕ್ ಅಳವಡಿಸಲಾಯ್ತು.


ಕ್ರಿಶ್ಚಿಯನ್ನರ ಮತಾಂತರ ಮೂದಲಿಸುವ ಭರದಲ್ಲಿ ೋನಿಯಾ ಗಾಂಧಿ, ಗೃಹಮಂತ್ರಿ ಕೆ.ಜೆ. ಜಾರ್ಜ್, ಪಿಎಸ್‌ಐ ಂತೋನಿ ಜಾಯ್ ಟಾರ್ಗೆಟ್ ಆದರು. ಕ್ರಿಶ್ಚಿಯನ್ ರ್ಮದ ಈ ಮೂವರನ್ನು ಅನಂತ್ಕುಮಾರ್, ಸೂಲಿಬೆಲೆ ಾಯಿಗೆ ಬಂದಂತೆ ಬೈದು ಎಂಪಿ ಎಲೆಕ್ಷನ್ ಮೈಲೇಜಿಗೆ ಣೆಸಿದರು. ದಿನಕರ ಶೆಟ್ಟಿ ಸಂಘ ಪರಿವಾರದ ಶೈಲಿಯಲ್ಲಿ ಾತಾಡಿ ತಾನೆಂಥವನೆಂದು ತೋರಿಸಿಕೊಂಡರು. ಈ ತಿಭಟನೆಯಲ್ಲಿ 'ಮತಾಂತರ' ಹಿಂದೆ ಸರಿದು, ಪಿಎಸ್‌ಐ ಂತೋನಿಯನ್ನು ಅಮಾನತ್ತು ಮಾಡಬೇಕೆಂಬ ಬೇಡಿಕೆಯೇ ುಖ್ಯವಾಯ್ತು. ಅಂತೋನಿ ಹಿಂದೂ ಗ್ಯಾಂಗಿನ ಮೇಲೆ ರಂತರವಾಗಿ ದಾಳಿ ಮಾಡುತ್ತಿದ್ದಾರೆಂಬ ಸಿಟ್ಟು ಅಲ್ಲಡಗಿತ್ತು. ಅಂತೋನಿ ಮತಾಂತರಕ್ಕೆ ನೆರವಾಗುತ್ತಾರೆಂದು ಬೊಬ್ಬೆ ೊಡೆಯಲಾಯ್ತು. ಎಸ್‌ಐ ಅಮಾನತ್ತಿಗಾಗಿ ಎಂಪಿ ನಂತ್ಕುಮಾರ್ ಹಠ ಹಿಡಿದು ಕೂತು ಆವೇಶದಲ್ಲಿದ್ದ ಿಂದೂಗಳನ್ನು ಪ್ರಚೋದಿಸಿದರು. ಇಡೀ ಹೊನ್ನಾವರ ವರಿಗೆ ಹೆದರಿ ಕಂಗಾಲಾಗಿ ಹೋಯ್ತು.

ಯಾವ ಗಳಿಗೆಯಲ್ಲಿ ಏನಾದೀತೋ ಎಂಬ ಆತಂಕ. ಡಿಷನಲ್ ಎಸ್‌ಪಿ ಬಂದು ತನಿಖೆ ನಡೆಸಿ ಎಸ್‌ಐನನ್ನು ಮಾನತ್ತು ಮಾಡುವುದಾಗಿ ಹೇಳಿದಾಗ ಅನಂತ್ಕುಮಾರ್ ್ಯಾಂಗ್ ತಣ್ಣಗಾಯ್ತು, ಹೊನ್ನಾವರ ನಿಟ್ಟುಸಿರುಬಿಟ್ಟಿತು. ಹಿಂದೂ ಸಮರದ ಹಿಂದೊಂದು ನಿಗೂಢ ಅಡಗಿದೆ. ಎಸ್‌ಐ ಅಂತೋನಿ ಜಾಯ್ ಯಾಕೆ ಹಿಂದೂ ಲಿಮೆಂಟ್‌ಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆಂಬುದೇ ಈ ಹಸ್ಯ. ಎಸ್‌ಐ ಅಂತೋನಿ ಆಗಾಗ ಹೊನ್ನಾವರದಲ್ಲಿ ದಲೆ ಎಬ್ಬಿಸುವ ಹಿಂದೂ ಮುಂದಾಳುಗಳಿಗೊಂದು ಂಕುಶ ಇಟ್ಟಿದ್ದರು. ಹಾಗಂತ ಆತ ಕ್ರಿಶ್ಚಿಯನ್ ಮತಾಂಧನೇನೂ ಅಲ್ಲ, ಸ್ವಭಾವತಃ ವಿಕ್ಷಿಪ್ತ, ಸೂಪರ್ ಾಪ್ ಎಂಬ ಒಣ ಭ್ರಮೆ. ಈ ಈಗೋದಲ್ಲಿ ಮುನ್ನುಗ್ಗುವ ಂತೋನಿ ಹಿಂದೂ ಗ್ಯಾಂಗ್‌ನ್ನು ಸೂಕ್ಷ್ಮವಾಗಿ ಹ್ಯಾಂಡಲ್ ಮಾಡೋದು ಬಿಟ್ಟು ಒರಟಾಗಿ ವರ್ತಿಸಿದ್ದಾರೆ. ಆತನ "ಅವತಾರ"ವೇ ಅನಾಹುತಕ್ಕೆ ಕಾರಣ ಎಂಬಂತಾಗಿದೆ!

ಸದ್ಯಕ್ಕೆ ಹೊನ್ನಾವರವೇನೋ ತಣ್ಣಗಾಗಿದೆ. ಮತಾಂತರದ ಸರಲ್ಲಿ ದಾರಿ ತಪ್ಪಿದ ಒಂದಿಷ್ಟು ಸಂಘ ಪರಿವಾರದ ರಾಕ್ಷಮಿಗಳು ಜನರನ್ನು ದಿಕ್ಕೆಡಿಸುತ್ತಿದ್ದಾರೆಂಬ ಸತ್ಯ ನಿಧಾನಕ್ಕೆ ರಿವಾಗುತ್ತಿದೆ. ಆದರೆ ಎಂಪಿಯಾಗುವ ತೆವಲಲ್ಲಿರುವ ನಂತ ಹೆಗಡೆ ಮತ್ತು ಚಕ್ರವರ್ತಿ ಸೂಲಿಬೆಲೆ ಹೊನ್ನಾವರದ ಹಿಂದೂ ಮೂವ್‌ಮೆಂಟ್" ಮೇಲೆ ನಿಗಾ ಇಟ್ಟಿದ್ದಾರೆ! ಇದು ಜಿಲ್ಲಾಡಳಿತಕ್ಕೆ ಎಷ್ಟು ಬೇಗ ಅರ್ಥ ಾಗುತ್ತದೋ ಅಷ್ಟು ಜಿಲ್ಲೆಗೆ ಕ್ಷೇಮ. ಗುಪ್ತಚರ ಇಲಾಖೆಗೆ ಹೊನ್ನಾವರದ "ಧರ್ಮಸೂಕ್ಷ್ಮ"ದ ಅರಿವಿದೆಯಾ?!

■ ಶುದ್ಧೋಧನ








ಗೋರಿಪಾಳ್ಯದ ಐರನ್ ಮಾಫಿಯಾ

ಕಾನೂನಿಗೇ ಚಳ್ಳೆಹಣ್ಣು ತಿನ್ನಿಸಿದ ಇಮ್ರಾನ್



ಸ್ಕ್ರ್ಯಾಪ್ ಮಾಫಿಯಾ ದೊರೆ ಗೋರಿಪಾಳ್ಯದ ಇಮ್ರಾನ್ ಕೋರ್ಟಿಗೂ, ಪೊಲೀಸರಿಗೂ ಒಟ್ಟೊಟ್ಟಿಗೆ ಚಳ್ಳೆಹಣ್ಣು ತಿನ್ನಿಸಿದ್ದಾನೆ!

ನಮ್ಮ ಪೊಲೀಸ್ ವ್ಯವಸ್ಥೆಗೆ ಕನ್ನಡಿ ಹಿಡಿದಂತೆ ಅಪರಾಧಿಯೊಬ್ಬ ತನ್ನದೇ ಹೆಸರಿನ ಬೇರೊಬ್ಬನನ್ನು ಕೋರ್ಟಿಗೆ ಶರಣಾಗಿಸಿ ತಾನು ಸಲೀಸಾಗಿ ಕಾನೂನಿನ ಕುಣಿಕೆಯಿಂದ ಬಚಾವಾದ ಪ್ರಸಂಗ ಬಹುಶಃ ಇದೇ ಮೊದಲಿರಬೇಕು.

ಸ್ಕ್ರ್ಯಾಪ್ ಮಾಫಿಯಾ ಕುರಿತಂತೆ ಪತ್ರಿಕೆ ಎರಡು ವಾರಗಳ ಹಿಂದೆ ಸವಿಸ್ತಾರ ವರದಿ ಪ್ರಕಟಿಸಿತ್ತು. ಅದು ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ನಂಜುಂಡೇಗೌಡರು ನಡೆಸಿದ ವೀರೋಚಿತ ಕಾರ್ಯಾಚರಣೆ ಆಗಿತ್ತು. ಬಳ್ಳಾರಿಯ ಐರನ್ ಫೌಂಡ್ರಿಗಳಿಂದ ಬೆಂಗಳೂರಿನ ಬಿಲ್ಡರ್‌ಗಳು ತರಿಸುತ್ತಿದ್ದ ಕಬ್ಬಿಣದ ಕಂಬಿಗಳನ್ನು ಮಾರ್ಗಮಧ್ಯೆಯೇ ಅರ್ಧಕ್ಕರ್ಧ ದೋಚಿ ಉಳಿಕೆ ಕಬ್ಬಿಣವನ್ನು ವೇಬ್ರಿಡ್ಜ್‌ಗಳ ಸಿಬ್ಬಂದಿಗಳನ್ನು ಬುಟ್ಟಿಗೆ ಹಾಕಿಕೊಂಡು ಒಂದಕ್ಕೆರಡು ಕಳ್ಳ ತೂಕದ ಬಿಲ್ಲು ಹಾಕಿ ಲಪಟಾಯಿಸುವುದು ಗೋರಿಪಾಳ್ಯದ ಪಾತಕಿ ಇಮ್ರಾನ್ ನಡಸಿಕೊಂಡು ಬಂದಿದ್ದ ದಂಧೆಯಾಗಿತ್ತು.

ಈ ಬಗ್ಗೆ ಖಚಿತ ಮಾಹಿತಿ ಹಿಡಿದೇ ಸೆಪ್ಟೆಂಬರ್ 13ರ ರಾತ್ರಿ ಸಂಪಿಗೆಹಳ್ಳಿ ಉಪವಿಭಾಗದ ಎಸಿಪಿ ಜಗದೀಶ್ ಮತ್ತು ಇನ್ಸ್‌ಪೆಕ್ಟರ್ ನಂದಾಗೌಡರ ಖಾಕಿ ಪಡೆ ನಾಗವಾರ ರಿಂಗ್‌ರಸ್ತೆಯ ಲುಂಬಿನಿಗಾರ್ಡನ್ ಎದುರಿನ ಸಿಆರ್‌ವೇ ಬ್ರಿಡ್ಜಿನ ಮೇಲೆ ನಡೆಸಿದ ದಾಳಿಗೆ ಇಮ್ರಾನ್ ಗ್ಯಾಂಗಿನ ನಾಲ್ವರು ರೌಡಿಗಳು ಸಿಕ್ಕಿಬಿದ್ದಿದ್ದರು. ಆದರೆ ಗೋರಿಪಾಳ್ಯದ ಇಮ್ರಾನ್ ಮಾತ್ರ ತನ್ನ ಸಹಚರರ ಸಮೇತ ಪೊಲೀಸರಿಗೆ ಸಿಗದೇ ಪರಾರಿಯಾಗಿದ್ದ. ಅಷ್ಟಕ್ಕೂ ನಾಲ್ವರ ಪೈಕಿ ಪ್ರಮುಖನಾಗಿದ್ದವನು ಇಮ್ರಾನ್‌ನ ಬಲಗೈ ಬಂಟ ಮತ್ತು ಗೋರಿಪಾಳ್ಯದ ಹಳೇ ರೌಡಿ ಷೀಟರ್ ಪಯಾಜ್ ಬಿನ್ ಅಬ್ದುಲ್ ಸಮದ್ ಅಲಿಯಾಸ್ ಡಿಶುಂ ಫಯಾಜ್.

ಡಿಶುಂ ಫಯಾಜ್ ನೀಡಿದ ಮಾಹಿತಿಯನ್ನಾಧರಿಸಿಯೇ ಎಫ್‌ಐಆರ್ ದಾಖಲಿಸಿದ ಸಂಪಿಗೆಹಳ್ಳಿ ಇನ್ಸ್‌ಪೆಕ್ಟರ್ ನಂಜುಂಡೇಗೌಡರು ಡಕಾಯಿತಿ ಯತ್ನ, ಅಕ್ರಮ ಕೂಟ, ಮಾರಕಾಸ್ತ್ರದಂಥ ಗುರುತರ ಪ್ರಕರಣಗಳಡಿ ಪರಾರಿಯಾಗಿದ್ದ ಇಮ್ರಾನ್‌ನನ್ನು ಆರೋಪಿಯನ್ನಾಗಿ ನಮೂದಿಸಿದ್ದರು. ಅದೇ ಅವಸರಕ್ಕೆ ಬಿದ್ದ ಗೋರಿಪಾಳ್ಯದ ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಮಗ ಇಮ್ರಾನ್ ಪಾಷಾನ ರೌಂಡಿಂಗ್ ಕೂಡ ಶುರುವಿಟ್ಟರು. ಈ ಮಧ್ಯೆ ಈಶಾನ್ಯ ಡಿಸಿಪಿ ಟಿ.ಆರ್. ಸುರೇಶ್ ತಮ್ಮ ಟೀವಿ ಸಂದರ್ಶನದಲ್ಲಿ ಇಮ್ರಾನ್‌ನ ನಟೋರಿಟಿ ಕುಖ್ಯಾತಿ ಆತನ ವಿರುದ್ಧ ಜಗಜೀವನರಾಂನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಹದಿನಾಲ್ಕಕ್ಕೂ ಅಧಿಕ ಕ್ರಿಮಿನಲ್ ಕೇಸುಗಳು, ಆತನ ವಿರುದ್ಧ ಇರುವ ರೌಡಿಷೀಟ್ ಇತ್ಯಾದಿಗಳನ್ನೆಲ್ಲ ಸುಮಾರಾಗಿ ವಿವರಿಸಿ ಇನ್ನೇನು ಐರನ್ ಮಾಫಿಯಾ ಜಾಲವನ್ನೇ ಹಿಡಿದು ಹಾಕುತ್ತೇವೆಂದು ಘೋಷಿಸಿಬಿಟ್ಟರು. ಅಲ್ಲಿಗೆ ಪಾತಕಿ ಇಮ್ರಾನ್‌ನ ವಿರುದ್ಧದ ಪೊಲೀಸ್ ಕಾರ್ಯಾಚರಣೆ ಚುರುಕಾಯಿತೆಂದೇ ಎಲ್ಲರೂ ಭಾವಿಸಿದ್ದರು.

ಆದರೆ ಇದೇ ಹೊತ್ತಿಗೆ ಸಂಪಿಗೆಹಳ್ಳಿ ಇನ್ಸ್‌ಪೆಕ್ಟರ್ ನಂಜುಂಡೇಗೌಡರು ಎತ್ತಂಗಡಿಯಾಗಿ ಆ ಜಾಗಕ್ಕೆ ಕೇಶವಮೂರ್ತಿ ಬಂದರಲ್ಲ; ಪಾತಕಿ ಇಮ್ರಾನ್‌ಗೆ ಇಷ್ಟೇ ಸಾಕಾಯಿತು. ಹೊಸ ಇನ್ಸ್‌ಪೆಕ್ಟರ್ ಚಾರ್ಜ್ ವಹಿಸಿಕೊಳ್ಳುವುದನ್ನೇ ಕಾದು ತನ್ನದೇ ಹೆಸರಿನ ಬೇರೊಬ್ಬನನ್ನು ರೆಡಿ ಮಾಡಿದ್ದೇ ಸಿಎಂಎಂ ಕೋರ್ಟಿಗೆ ಸರೆಂಡರ್ ಮಾಡಿಸಿಬಿಟ್ಟ. ಈ ರೀತಿ ಇಮ್ರಾನ್ ಪಾಷಾನ ಬದಲಿಗೆ ಕೋರ್ಟಿಗೆ ಶರಣಾದವನು 24ರ ಹರೆಯದ ಇಮ್ರಾನ್ ಖಾನ್ ಬಿನ್ ನಬಿಖಾನ್!

ಇದೇ ಗೋರಿಪಾಳ್ಯದ ನಬಿಖಾನ್ ಮಗ ಇಮ್ರಾನ್ ಖಾನ್ ತನಗೊಂದು ಅಲಿಯಾಸ್ ಹೆಸರಿದೆಯೆಂದೂ ಅದು ಇಮ್ರಾನ್ ಪಾಷಾ ಎಂದೂ ಕಾನೂನಿನ ಕಣ್ಣಿಗೆ ಮಣ್ಣೆರಚಿದ್ದೂ ಅಲ್ಲದೆ ತನ್ನ ಜೊತೆ ಪರಾರಿಯಾಗಿದ್ದ ಎನ್ನಲಾದ ಇಮ್ರಾನ್ ಶೇಕ್ ಎಂಬ ಮತ್ತೊಬ್ಬನನ್ನೂ ಜೊತೆಗೇ ಸರೆಂಡರ್ ಮಾಡಿಸಿದ್ದ. ಅಲ್ಲಿಗೆ ಸಂಪಿಗೆಹಳ್ಳಿ ಸಿಆರ್ ನಂಬರ್ 280/13ರ ಕೇಸಿನಿಂದಲೇ ಇಮ್ರಾನ್ ನುಣುಚಿಕೊಂಡಂತಾಗಿತ್ತು. ಎಫ್‌ಐಆರ್‌ನಲ್ಲಿದ್ದ 28 ವರ್ಷದ ಇಮ್ರಾನ್ ಪಾಷಾ ಅದ್ಹೇಗೆ 24ರ ಇಮ್ರಾನ್ ಖಾನ್ ಆಗಲು ಸಾಧ್ಯ ಎಂದಾಗಲಿ, ರೌಡಿಶೀಟ್ ಆಗಿದ್ದ ಇಮ್ರಾನ್ ಅದ್ಯಾವ ಮಾಯೆಯಿಂದ ಯಾವುದೇ ಕ್ರಿಮಿನಲ್ ಹಿನ್ನೆಲೆಯಿಲ್ಲದ ಇಮ್ರಾನ್ ಖಾನ್ ಆದ ಎಂಬ ಬಗ್ಗೆಯಾಗಲಿ ಪೊಲೀಸರೂ ತಲೆಕೆಡಿಸಿಕೊಳ್ಳಲಿಲ್ಲ ಪಬ್ಲಿಕ್ ಪ್ರಾಸಿಕ್ಯೂಟರ್‌ಗೂ ಗೊತ್ತಾಗಲಿಲ್ಲ.


ಯಾವತ್ತು ಇಮ್ರಾನ್‌ನ ಬೆನ್ನಿಗೆ ಬಿದ್ದಿದ್ದ ಕ್ರೈಂ ಪೇದೆಗಳು ಗೋರಿಪಾಳ್ಯಕ್ಕೆ ಬಂದು ಇಮ್ರಾನ್ ಅಡ್ಡೆಯ ಬಳಿ ಹೊಂಚು ಹಾಕಲಾರಂಭಿಸಿದರೋ ಅದನ್ನು ಸೂಕ್ಷ್ಮವಾಗೇ ಗಮನಿಸಿದ ಪಾತಕಿ ಇಮ್ರಾನ್ ತಾನೇ ಬೇರೆ, ಕೇಸಿನಲ್ಲಿರುವವರೇ ಬೇರೆ ಎಂದು ದಬಾಯಿಸತೊಡಗಿದನೋ ಆಗ ಪೊಲೀಸರಿಗೆ ಯಾಮಾರಿದ್ದು ಗೊತ್ತಾಗಿದೆ. ಹೋಗಿ ಕೋರ್ಟಿನಲ್ಲಿ ಪರಿಶೀಲಿಸಿದರೆ ಸರೆಂಡರ್ ಆದವನೇ ಬೇರೆ ಇಮ್ರಾನ್. ಇದು ಈಶಾನ್ಯ ಡಿಸಿಪಿ ಸುರೇಶ್ ಗಮನಕ್ಕೆ ಬಂದಿದ್ದೇ ತಡ ತಾವು ಯಾಮಾರಿದ್ದು ಎಲ್ಲಿ ಎಂದು ತಲೆಕೆಡಿಸಿಕೊಂಡಿದ್ದಾರೆ. ಆ ವೇಳೆಗಾಗಲೇ ಇಮ್ರಾನ್ ಬದಲಿಕೆಗೆ ಸರೆಂಡರ್ ಆಗಿದ್ದ ಖಾನ್ ಸೇಫಾಗಿ ಜೈಲು ಸೇರಿಕೊಂಡಿದ್ದ.

ಕೊಳ್ಳೆ ಹೋದ ನಂತರ ಎಚ್ಚೆತ್ತವರಂತೆ ಡಿಸಿಪಿ ಸುರೇಶ್ ಈಗ ಇಡೀ ಪ್ರಕರಣದ ತನಿಖೆಗೆ ಆದೇಶಿಸಿದ್ದಾರೆ. ಹೊಸ ಇನ್ಸ್‌ಪೆಕ್ಟರ್ ಕೇಶವಮೂರ್ತಿ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಏನು ಪ್ರಯೋಜನ? ಕೋರ್ಟು-ಪೊಲೀಸ್ ಎರಡಕ್ಕೂ ಇಮ್ರಾನ್ ಒಟ್ಟೊಟ್ಟಿಗೇ ಚಳ್ಳೆಹಣ್ಣು ತಿನ್ನಿಸಿದ್ದಾನೆ. ಇಮ್ರಾನ್ ಕೇವಲ ಐರನ್ ಮಾಫಿಯಾ ದೊರೆಯಷ್ಟೇ ಆಗಿದ್ದರೆ ಆ ಮಾತು ಬೇರೆ. ಕಾಂಗ್ರೆಸ್ ನಾಯಕ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ನಡುರಸ್ತೆಯಲ್ಲಿ ಕೊಚ್ಚಿಕೊಂದವನು, ಕುಖ್ಯಾತ ಮೊಬೈಲ್ ಕಳ್ಳರ ತಂಡವೊಂದನ್ನು ರೂಪಿಸಿದವನು, ಲೈವ್ ಬ್ಯಾಂಡ್ ಹುಡುಗಿಯರನ್ನು ಎತ್ತೊಯ್ದು ಮುಕ್ಕಿದವನು, ಇಡೀ ಗೋರಿಪಾಳ್ಯಕ್ಕೆ ಕಂಟಕನಂತಿರುವವನು ಕೋರ್ಟು ಪೊಲೀಸರನ್ನು ಅಷ್ಟು ಸುಲಭಕ್ಕೆ ವಂಚಿಸಲು ಹೇಗೆ ತಾನೇ ಸಾಧ್ಯ?

ಈ ಬಗ್ಗೆ ತನಿಖೆ ಮಾಡುವವರ್‍ಯಾರು? ಪೊಲೀಸರೆಂದರೆ ಪಾತಕಿಗಳಿಗೆ ಈ ಪಾಟಿ ಚೆಲ್ಲಾಟವೆ?

■ ರಾ. ಸೋಮನಾಥ್

ಕಪಾಲಿ ಮೋಹನ್ ಸ್ಪಷ್ಟೀಕರಣ



ಮಾನ್ಯರೇ,

ಈ ವಾರದ ಲಂಕೇಶ್‌ನಲ್ಲಿ 'ರಾಜ್ ಕುಟುಂಬಕ್ಕೆ ಅಂಟಿಕೊಂಡಿರುವ ಕಪಾಲಿ ಮೋಹನ್' ಎಂಬ ವರದಿಯಲ್ಲಿ ನನ್ನ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದೀರಿ.


ಈ ವರದಿಯು ನನ್ನ ಮನಸ್ಸಿಗೆ, ನನ್ನ ಕುಟುಂಬ ಹಾಗೂ ಮಿತ್ರರಿಗೆಲ್ಲಾ ಬಹಳ ನೋವುಂಟುಮಾಡಿದೆ.

ನಾನು ರಾಜ್ ಕುಟುಂಬಕ್ಕೆ ಹತ್ತಿರದವನು ನಿಜ. ಅನೇಕ ವರ್ಷಗಳ ಪರಿಚಯ ಹಾಗೂ ಒಡನಾಟದಿಂದ ಆಪ್ತತೆ ಏರ್ಪಟ್ಟಿದೆ. ನಾನಿದನ್ನು ನನ್ನ ಜೀವನದ ಸೌಭಾಗ್ಯ ಎಂದು ಭಾವಿಸಿದ್ದೇನೆ.

ಕರಾವಳಿ ಪ್ರಾಂತ್ಯದವನಾದ ನಾನು ಚಿಕ್ಕಂದಿನಿಂದಲೂ ಕಷ್ಟಪಟ್ಟು ದುಡಿದು ಮೇಲಕ್ಕೆ ಬಂದಿದ್ದೇನೆ. ಹಾಗಾಗಿ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದದ್ದು ಇತ್ಯಾದಿ ವಿಚಾರಗಳನ್ನು ನಾನು ಅವಮಾನ ಎಂದು ಭಾವಿಸಿಲ್ಲ. ಕಪಾಲಿ ಬಾರ್ ಮಾಲೀಕರು ಒಂದು ಕಾಲದಲ್ಲಿ ನನಗೆ ಅನ್ನ- ಆಶ್ರಯ ನೀಡಿ ಕೆಲಸ ನೀಡಿದ್ದವರು. ಅಂತಹವರ ಮೇಲೆ ನಾನು ಕೈ ಮಾಡಿದೆ ಎಂದು ಬರೆದಿರುವುದು ನಿಜವಾದ ಸಂಗತಿಯಲ್ಲ. ಬೆಂಗಳೂರಿನ ನೂರಾರು ಹೋಟೆಲ್ ಮಾಲೀಕರು ನನ್ನ ಬಳಿ ಚೀಟಿ ವ್ಯವಹಾರ ನಡೆಸುತ್ತಿದ್ದಾರೆ ನಿಜ. ಅದು ನಾನು ಅವರ ವಿಶ್ವಾಸ ಗಳಿಸಿರುವುದಕ್ಕೆ ಸಾಕ್ಷಿಯಾಗಿದೆ. ಇನ್ನು ನೀವು ಬರೆದಿರುವಂತೆ ನಾನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಇಲ್ಲ. ನನಗೆ ನನ್ನದು ಹಾಗೂ ಪಾಲುದಾರಿಕೆಯಲ್ಲಿ ಕೆಲವು ಹೋಟೆಲ್‌ಗಳಿವೆ ಅಷ್ಟೆ.

ರಾಘವೇಂದ್ರ ರಾಜಕುಮಾರ್ ನನ್ನ ಆತ್ಮೀಯ ಗೆಳೆಯರಾಗಿದ್ದಾರೆ. ಅವರಿಗೆ ವ್ಯವಹಾರದಲ್ಲಿ ನನ್ನಿಂದ ಯಾವುದೇ ವಂಚನೆಯಾಗಿಲ್ಲ. ಅವರಿಗೆ ಅನಾರೋಗ್ಯವಾಗಿರುವ ಸಂದರ್ಭದಲ್ಲಿ ಪ್ರಕಟವಾದ ಈ ವರದಿಯಿಂದ ನಮಗೆಲ್ಲಾ ಬಹಳ ನೋವಾಗಿದೆ.

- ಕಪಾಲಿ ಮೋಹನ್, ಬೆಂಗಳೂರು



ಅಂಬಿ ಭಂಟ ಅಮರಾವತಿ ಚಂದ್ರಶೇಖರ್‌ನ ಸೈಟು ಪುರಾಣ

ಸ್ವಂತದೊಂದು ಮನೆ ಕಟ್ಟಿಕೊಳ್ಳಬೇಕೆಂದು ಕಷ್ಟಪಟ್ಟು ದುಡಿದಿದ್ದ ಉಳಿತಾಯ ಮಾಡಿದ್ದ ಹಣವನ್ನೆಲ್ಲಾ ಒಟ್ಟು ಗೂಡಿಸಿದ ಮಂಡ್ಯ ಪೊಲೀಸರು ಹಾಗೂ ಶಿಕ್ಷಕರು ಅದನ್ನೆಲ್ಲ ಒಯ್ದು ವಸತಿ ಸಚಿವ ಅಂಬರೀಶ್‌ನ ಬಲಗೈ ಭಂಟ ಅಮರಾವತಿ ಡೆವಲಪರ್ಸ್‌ನ ಚಂದ್ರಶೇಖರನ ಕೈಗೆ ಕೊಟ್ಟು ಹಲವು ವರ್ಷಗಳೇ ಕಳೆದಿವೆ. ಆದರೂ ಇಲ್ಲಿಯವರೆಗೂ ಮನೆ ಕಟ್ಟಿಸಿಕೊಳ್ಳುವ ಮಾತಿರಲಿ ಅವರ ಕೈಗಳಿಗೆ ಸೈಟೇ ಸಿಕ್ಕಿಲ್ಲ. ಎಲ್ಲಿ ತಾವು ಸಂಪಾದಿಸಿದ್ದ ಲಕ್ಷಾಂತರ ಹಣವೆಲ್ಲ ಮಂಗಮಾಯವಾಗುತ್ತದೋ ಎಂದು ಅವರೆಲ್ಲ ಈಗ ಕೈಕೈ ಹಿಸುಕಿಕೊಳ್ಳುತ್ತಾ ತೇಲುಗಣ್ಣು-ಮೇಲುಗಣ್ಣು ಬಿಡುತ್ತಿದ್ದಾರೆ.

ಇದೇ ಹೊತ್ತಿನಲ್ಲಿ ಸಾಮಾಜಿಕ ಕಾರ್ಯಕರ್ತ ಕೆ.ಆರ್. ರವೀಂದ್ರ ಅವರು ಮಂಡ್ಯ ಜಿಲ್ಲಾ ಪೊಲೀಸ್ ಗೃಹ ನಿರ್ಮಾಣ ಪತ್ತಿನ ಸಹಕಾರ ಸಂಘದಿಂದ ಪೊಲೀಸ್ ಹಾಗೂ ಸಿಬ್ಬಂದಿಯವರಿಗೆ ನಿವೇಶನ ನೀಡುವಲ್ಲಿ ಅಕ್ರಮ ನಡೆದಿದೆ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಲಾಲ್ ರುಖಾವೋ ಪಚಾವೋರವರಿಗೆ ದೂರು ನೀಡಿದ್ದಾರೆ. ಇದಾದದ್ದೇ ತಡ ಸೈಟಿಗಾಗಿ ಹಣ ಕಟ್ಟಿರುವವರೆಲ್ಲಾ ಬಾಯಿಬಾಯಿ ಬಡಿದುಕೊಳ್ಳುವಂತಾಗಿದೆ.

ಸ್ವಂತ ಮನೆ ಹೊಂದಬೇಕೆಂಬುದು ಪ್ರತಿಯೊಬ್ಬರ ಕನಸು. ಆದರಲ್ಲೂ ಸರ್ಕಾರಿ ನೌಕರಿಯಲ್ಲಿರುವವರಿಗೆ ಅದು ತಮ್ಮ ಜೀವನದ ಮಿನಿಮಮ್ ಸಾಧನೆ. ಹಾಗಾಗಿಯೇ ಸೈಟು ಖರೀದಿಸಿ ಮನೆಕಟ್ಟಿಕೊಳ್ಳುವ ಆಸೆಯಿಂದ ಸುಮಾರು 700 ಪೊಲೀಸರು ಮಂಡ್ಯ ಜಿಲ್ಲಾ ಪೊಲೀಸ್ ಗೃಹ ನಿರ್ಮಾಣ ಪತ್ತಿನ ಸಹಕಾರ ಸಂಘದ ಸದಸ್ಯರಾಗಿ ಹಣ ಕಟ್ಟಿದ್ದರೆ, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 350 ಶಿಕ್ಷಕರು ಸದಸ್ಯರಾಗಿ ಸೈಟಿಗೆ ಹಣ ಕಟ್ಟಿದ್ದಾರೆ.

ಆತ ಅಮರಾವತಿ ಚಂದ್ರಶೇಖರ್

ಎಲ್ಲವೂ ಸರಿಯಾಗಿ ನಡೆದಿದ್ದರೆ ಪೊಲೀಸ್ ಗೃಹ ನಿರ್ಮಾಣ ಸಂಘ ಹಾಗೂ ಪ್ರೌಢಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಂಘಗಳು ಇಷ್ಟು ಹೊತ್ತಿಗಾಗಲೇ ನಗರದ ಹೊರವಲಯದಲ್ಲಿ ಜಮೀನು ಖರೀದಿಸಿ, ಅದನ್ನು ಸೈಟುಗಳಾಗಿ ವಿಂಗಡಿಸಿ ತಮ್ಮ ತಮ್ಮ ಸದಸ್ಯರಿಗೆ ಕೊಡಬೇಕಿತ್ತು, ಆದರೆ ಆಗ ಈ ಎರಡೂ ಸಂಘಗಳಿಗೆ ಎಂಟ್ರಿ ಕೊಟ್ಟವನೇ ಅಮರಾವತಿ ಚಂದ್ರಶೇಖರ್.

ನಗರದ ಹೊರವಲಯದಲ್ಲಿರುವ ಶ್ರೀನಿವಾಸಪುರ ಗೇಟ್‌ನಲ್ಲಿ ಅಮರಾವತಿ ಹೋಟೆಲ್, ಅಮರಾವತಿ ಬಾರ್ ಅಂಡ್ ರೆಸ್ಟೋರೆಂಟ್, ಅಮರಾವತಿ ಪೆಟ್ರೋಲ್ ಅಂಡ್ ಗ್ಯಾಸ್‌ಬಂಕ್ ತೆರೆದಿರುವ, ಅವುಗಳ ಜೊತೆಗೆ ಪುರಾಣದ ಇಂದ್ರನ ವಾಸಸ್ಥಾನ ಅಮರಾವತಿಯನ್ನು ಹೋಲುವ ಭವ್ಯಬಂಗಲೆಯನ್ನೂ ಕಟ್ಟಿಕೊಂಡಿರುವವನೇ ಈ ಅಮರಾವತಿ ಚಂದ್ರಶೇಖರ್.. ಹೋಟೆಲ್, ಬಾರ್, ಬಂಕ್ ಎಂದೆಲ್ಲ ಇದ್ದ ಈತನ ಸಾಮ್ರಾಜ್ಯ ಕಳೆದ ಹಲವು ವರ್ಷಗಳಿಂದ ದಿನೇ ದಿನೇ ವಿಸ್ತರಿಸುತ್ತಲೇ ಬಂದಿದೆ. ಕೆಲವರ್ಷಗಳ ಹಿಂದೆಯಷ್ಟೇ ರಿಯಲ್ ಎಸ್ಟೇಟ್ ಸಾಮ್ರಾಜ್ಯಕ್ಕೆ ಕಾಲಿಟ್ಟ ಅಮರಾವತಿ ಚಂದ್ರಶೇಖರ್ ಹಾಲಿ ವಸತಿ ಸಚಿವ ಅಂಬರೀಶ್‌ನ ಬಲಗೈ ಭಂಟ. ಅಂಬರೀಶ್ ಆಶೀರ್ವಾದದಿಂದಲೇ ಕೋಟಿ ಕುಳ ಆಗಿದ್ದಾನೆ.

ಜಿಲ್ಲಾ ಪೊಲೀಸ್ ಗೃಹನಿರ್ಮಾಣ ಸಂಘ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಘ ಸದಸ್ಯರಿಗೆ ಸೈಟು ಕೊಡಬೇಕಿದ್ದ ವಿಷಯ ಮೊದಲು ತಿಳಿದುಕೊಂಡ ಅಮರಾವತಿ ಚಂದ್ರಶೇಖರ್ ನಗರದ ಹೊರವಲಯದಲ್ಲಿರುವ ಜಮೀನು ತೋರಿಸಿ ಎರಡೂ ಸಂಘಗಳ ಪದಾಧಿಕಾರಿಗಳನ್ನು ತನ್ನ ಬಲೆಗೆ ಕೆಡವಿಕೊಂಡ. ಅಮರಾವತಿ ಚಂದ್ರಶೇಖರ್ ತೋರಿಸಿದ ಜಮೀನನ್ನು ನೋಡಿದ ಎರಡೂ ಸಂಘಗಳ ಸದಸ್ಯರು ಕೂಡ ಎಸ್ ಎಂದುಬಿಟ್ಟರು.

19.50 ಕೋಟಿ ಹಣ


ಜಿಲ್ಲಾ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೇ ಅಧ್ಯಕ್ಷರು. ಅದರಂತೆ ಅಮರಾವತಿ ಡೆವಲಪರ್ಸ್‌ನ ಚಂದ್ರಶೇಖರ್‌ನೊಂದಿಗೆ ಒಪ್ಪಂದ ಮಾಡಿಕೊಂಡ ಸಂದರ್ಭದಲ್ಲಿ ಜಿಲ್ಲಾ ಎಸ್ಪಿಯಾಗಿದ್ದವರು ಕೌಶಲೇಂದ್ರಕುಮಾರ್. ಆರಂಭದಲ್ಲಿ ಪೊಲೀಸ್ ಸಿಬ್ಬಂದಿಗೆ ಸೈಟುಗಳನ್ನು ನೀಡಲು ಸಂಘದ ವತಿಯಿಂದ 10 ಕೋಟಿ ರೂ.ಗಳನ್ನು ಅಮರಾವತಿ ಚಂದ್ರಶೇಖರ್‌ಗೆ ನೀಡಲಾಗಿತ್ತು.

ಅದಾದನಂತರವೂ ಸಂಘದಿಂದ ಚಂದ್ರಶೇಖರ ಇನ್ನೂ ಎರಡು ಕೋಟಿಗಳನ್ನು ಕೇಳಿದಾಗ "ಮೊದಲು ಸೈಟ್ ಕೊಡಿ, ನಂತರ ಉಳಿದ ಹಣ ಪಾವತಿಸುತ್ತೇವೆ" ಎಂದು ಹೇಳಿದ ಕೌಶಲೇಂದ್ರ ಕುಮಾರ್ ಅವರು ಹೆಚ್ಚುವರಿ ಹಣವನ್ನು ಕೊಡಲು ನಿರಾಕರಿಸಿದ್ದರು. ಆದರೆ ಅದಾದನಂತರ ಕೌಶಲೇಂದ್ರಕುಮಾರ್ ಅವರು ಶಿವಮೊಗ್ಗ ಎಸ್ಪಿಯಾಗಿ ವರ್ಗಾವಣೆಗೊಂಡರು. ಅವರ ನಂತರ ಮಂಡ್ಯ ಎಸ್ಪಿಯಾಗಿ ಭೂಷಣ್‌ರಾವ್ ಬೊರಸೆ ಬಂದರು.

ಆಗಷ್ಟೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಅಂಬರೀಶ್ ವಸತಿ ಸಚಿವರಾಗಿದ್ದರು. ಜೊತೆಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದರು. ಅಂಬರೀಶ್ ಬಲಗೈ ಭಂಟನಂತೆ ಸದಾ ಅವರ ಹಿಂದೆಮುಂದೆ ಠಳಾಯಿಸುತ್ತಿದ್ದ ಅಮರಾವತಿ ಚಂದ್ರಶೇಖರ್ ಎಸ್ಪಿ ಬೊರಸೆ ಬಳಿ 'ಪೊಲೀಸ್ ಸಿಬ್ಬಂದಿಗೆ ಹಂಚ ಬೇಕಿರುವ ಸೈಟುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಮಾಡಬೇಕಿರುವುದರಿಂದ ನನಗೆ ಎರಡು ಕೋಟಿ ನೀಡಿ' ಎಂದು ಮನವಿ ಇಟ್ಟ.

ಅಂಬರೀಶ್ ಭಂಟ ಕೇಳಿದ ಮೇಲೆ ಇಲ್ಲವೆನ್ನಲಾದಿತೇ? ಎಸ್ಪಿ ಭೂಷಣ್ ಬೊರಸೆ ಸಂಘದ ಹಣ ಎರಡು ಕೋಟಿ ರೂಪಾಯಿಗಳನ್ನು ಚಂದ್ರಶೇಖರ್‌ಗೆ ಕೊಟ್ಟು 'ಆದಷ್ಟು ಬೇಗ ಪೊಲೀಸರಿಗೆ ಸೈಟು ಕೊಡಿ' ಎಂದುಬಿಟ್ಟರು. ಈ ಹಿಂದೆ ಕೌಶಲೇಂದ್ರಕುಮಾರ್ ಎರಡು ಕೋಟಿ ರೂಪಾಯಿಗಳನ್ನು ಚಂದ್ರಶೇಖರ್ ಕೈಗೆ ಕೊಡಲು ಹಿಂದೇಟು ಹಾಕಿದ್ದೇಕೆ ಎಂದು ಬೊರಸೆ ಅವರು ಆಲೋಚಿಸಬೇಕಿತ್ತು.

ಸುಮಾರು 700 ಮಂದಿ ಸದಸ್ಯರಿಗೆ ಸೈಟುಗಳನ್ನು ನೀಡಲು ಎಷ್ಟು ಜಮೀನು ಖರೀದಿ ಮಾಡಲಾಗಿದೆ? ಖರೀದಿಸಿರುವ ಜಮೀನಿನಲ್ಲಿ ಕಾನೂನು ಅಡೆತಡೆ ಏನಾದರೂ ಇದೆಯೇ? ಎಂದೆಲ್ಲ ಎಸ್ಪಿ ಪರಿಶೀಲಿಸಿದ್ದರೆ, ಎರಡು ಕೋಟಿ ಹಣ ಕೊಡುವ ಬದಲು 'ಸೈಟು ಕೊಟ್ಟ ಮೇಲೆ ಹಣ' ಎಂದು ಹೇಳುವಂತಾಗುತ್ತಿತ್ತು.





ಅಷ್ಟೇ ಅಲ್ಲ, ಸಂಘದ ನಿಯಮದಂತೆ ಎರಡು ಕೋಟಿ ಹಣ ಕೊಡಬೇಕಾದರೆ ಸಂಘದ ಪದಾಧಿಕಾರಿಗಳ ಸಭೆ ಕರೆದು ಅವರೆಲ್ಲರ ಒಪ್ಪಿಗೆ ಪಡೆಯಬೇಕಿತ್ತು. ಆದರೆ ಎಸ್ಪಿ ಬೊರಸೆ ಹಾಗೆ ಮಾಡಲಿಲ್ಲ. ಹೀಗಾಗಿ ಹಣ ನೀಡಿದ ಬಗ್ಗೆ ಆಡಿಟ್‌ನಲ್ಲೂ ತಕರಾರು ಮಾಡಲಾಗಿದೆ.

ಈಗಾಗಲೇ ಪೊಲೀಸ್ ಗೃಹ ನಿರ್ಮಾಣ ಸಂಘದಿಂದ 12 ಕೋಟಿ ರೂ.ಗಳನ್ನು ಅಮರಾವತಿ ಚಂದ್ರಶೇಖರ್ ಪಡೆದಿದ್ದಾರೆ. ಇದರ ಜೊತೆಗೆ ಪ್ರೌಢಶಾಲಾ ಶಿಕ್ಷಕರ ಗೃಹನಿರ್ಮಾಣ ಸಂಘದಿಂದಲೂ 7.50 ಕೋಟಿ ರೂಪಾಯಿಗಳನ್ನು ಪಡೆದಿದ್ದಾರೆ. ಅಂದರೆ ಚಂದ್ರಶೇಖರ್ ಈಗಾಗಲೇ ಒಟ್ಟಾರೆ 19.50 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದಾರೆ. ಆದರೂ ಒಬ್ಬರಿಗೂ ಇದುವರೆಗೂ ಸೈಟ್ ಸಿಕ್ಕಿಲ್ಲ.

ಪ್ರತಿ ಸದಸ್ಯರಿಂದ 30x40 ಸೈಟಿಗೆ ಪ್ರತಿ ಕಂತಿಗೆ 1.5 ಲಕ್ಷದಂತೆ 3 ಕಂತಿನ ಹಣ 3.15 ಲಕ್ಷ ಕಟ್ಟಲಾಗಿದೆ. 4ನೇ ಕಂತು ಕಟ್ಟದ 15 ತಿಂಗಳ ನಂತರ ಸದಸ್ಯರಿಗೆ ಸೈಟ್ ರಿಜಿಸ್ಟರ್ ಮಾಡಬೇಕಿದೆ. ಸದಸ್ಯರು 4ನೇ ಕಂತಿನ ಹಣವನ್ನು ಕಟ್ಟಲು ರೆಡಿ ಇದ್ದರೂ ಅದನ್ನು ಕಟ್ಟಿಸಿಕೊಳ್ಳಲು ಸಂಘಗಳು ಮೀನಾಮೇಷ ಎಣಿಸುತ್ತಿವೆ.

ಅಷ್ಟು ಜಮೀನೇ ಇಲ್ಲ

30x40 ಸೈಟಿಗೆ 4.20 ಲಕ್ಷ, 30x50 ಸೈಟಿಗೆ 5.25 ಲಕ್ಷ ಹಾಗೂ 60x40 ಸೈಟಿಗೆ 8.40 ಲಕ್ಷ ಹಣವನ್ನು ಕಟ್ಟಿಸಿಕೊಳ್ಳಲಾಗಿದೆ. ಅಮರಾವತಿ ಡೆವಲಪರ್ಸ್‌ನ ಚಂದ್ರಶೇಖರ್ ಹೊರಡಿಸಿ ರುವ ಬ್ರೋಚರ್‌ನಲ್ಲಿ 700 ಪೊಲೀಸರಿಗೆ ಹಾಗೂ 350 ಶಿಕ್ಷಕರಿಗೆ ಮಂಡ್ಯ- ಮೈಸೂರು ಹೆದ್ದಾರಿಯಲ್ಲಿರುವ ಶ್ರೀನಿವಾಸಪುರದಲ್ಲಿ ನಿವೇಶನ ನೀಡಲು 45 ಎಕರೆ ಜಾಗವನ್ನು ಖರೀದಿಸಲಾಗಿದ್ದು ಕೆಲವೇ ತಿಂಗಳಲ್ಲಿ ಮುಕ್ತಾಯವಾಗಲಿದೆ ಎಂದು ಹೇಳಲಾಗಿದೆ. ಆದರೆ ಅಲ್ಲಿ ಅಷ್ಟು ಪ್ರಮಾಣದ ಜಮೀನು ಖರೀದಿ ನಡೆದಿಲ್ಲ. ಅಮರಾವತಿ ಡೆವಲಪರ್ಸ್ ರೈತರಿಂದ ಜಮೀನು ಖರೀದಿ ಮಾಡಿರುವುದು ಕೇವಲ 25 ರಿಂದ 28 ಎಕರೆ ಮಾತ್ರ. ಅಲ್ಲದೆ ನಿವೇಶನಗಳನ್ನು ಹಂಚಿಕೆ ಮಾಡಲು ಈ ಜಮೀನನ್ನು ಯಾವುದೇ ರೀತಿಯಲ್ಲೂ ಅಭಿವೃದ್ಧಿ ಪಡಿಸಿಲ್ಲ. ಗಿಡಗಂಟಿಗಳು ಬೆಳೆದು ಕಾಡಿನ ರೀತಿಯಲ್ಲೇ ಇದೆ.


ಕೇವಲ ಪೊಲೀಸರು ಮತ್ತು ಶಿಕ್ಷಕರಿಗೆ ಮಾತ್ರವಲ್ಲದೆ ಇದೇ ಜಮೀನನ್ನು ತೋರಿಸಿ ಸಾರ್ವಜನಿಕರಿಂದಲೂ ನಿವೇಶನಕ್ಕಾಗಿ ಅಮರಾವತಿ ಚಂದ್ರಶೇಖರ್ ಹಣ ಪಡೆದಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ. ಅಮರಾವತಿ ಡೆವಲಪರ್ಸ್‌ನ ಪ್ರಧಾನ ಕಚೇರಿ ಅಮರಾವತಿ ಹೋಟೆಲ್ ಶ್ರೀನಿವಾಸಪುರ ಇಲ್ಲಿದ್ದರೆ, ಬ್ರಾಂಚ್ ಆಫೀಸ್ ಕೇರ್ ಆಫ್ ಲಕ್ಷ್ಮಿಟ್ರೈರ್ಸ್, 3ನೇ ಮುಖ್ಯರಸ್ತೆ, ಅಶೋಕನಗರ ಮಂಡ್ಯ ಇಲ್ಲಿದೆ. ಸಾರ್ವಜನಿಕರಿಂದ ಎಷ್ಟು ನಿವೇಶನಕ್ಕಾಗಿ ಹಣ ಪಡೆಯಲಾಗಿದೆ ಎಂಬ ಬಗ್ಗೆ ತನಿಖೆ ನಡೆಸಬೇಕಿದೆ.

ಕಾನೂನುಬಾಹಿರ

ಅಮರಾವತಿ ಡೆವಲಪರ್ಸ್‌ನವರು ಶ್ರೀನಿವಾಸ್‌ಪುರ ಸಮೀಪ ಬೂದನೂರು ಸರ್ವೇ ನಂ 334, 33

ವಿದ್ಯಾಸಂಸ್ಥೆ ಹೆಸರಿನಲ್ಲಿ ಭೂಪರಿವರ್ತನೆ ಮಾಡಿಸಿರುವ ಜಮೀನು





ಅಂಬಿ ದೂರ ಇಡಲಿ


ಇಂದು ಮಂಡ್ಯ ಜಿಲ್ಲೆಯಲ್ಲಿ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್‌ಗಿಂತ ಹೆಚ್ಚು ಸುದ್ದಿ ಮಾಡುತ್ತಿರುವುದು ಅವರ ಭಂಟ ಅಮರಾವತಿ ಚಂದ್ರಶೇಖರ್. ಸರ್ಕಾರಿ ಅಧಿಕಾರಿಗಳು ಅಂಬರೀಶ್ ಅವರಿಗಿಂತ ಹೆಚ್ಚು ಆಪ್ತರಾಗಿರುವುದು ಈ ಅಮರಾವತಿ ಚಂದ್ರಶೇಖರ್ ಜೊತೆಗೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಅಂಬರೀಶ್‌ಗಿಂತಲೂ ಹೆಚ್ಚಾಗಿ ಮಿಂಚುವ ಅಮರಾವತಿ ಚಂದ್ರಶೇಖರ್‌ಗೆ ಕಾಂಗ್ರೆಸ್ ಮುಖಂಡನಾಗಿ ಸರ್ಕಾರಿ ವೇದಿಕೆಗಳನ್ನು ಹತ್ತಬಾರದೆಂಬ ಕಾಮನ್‌ಸೆನ್ಸೂ ಇಲ್ಲ. ಶಿಷ್ಟಾಚಾರದ ಬಗ್ಗೆ ಚಂದ್ರಶೇಖರ್‌ಗೆ ಹೇಳುವ ಧಮ್ ಜಿಲ್ಲೆಯ ಅಧಿಕಾರಿಗಳಿಗಂತೂ ಇಲ್ಲವೇ ಇಲ್ಲ.

ಸರ್ಕಾರಿ ಕಡತಗಳನ್ನು ಅಮರಾವತಿ ಚಂದ್ರಶೇಖರ್‌ನ ಮನೆಗೆ ಕೊಂಡೊಯ್ದು ಚರ್ಚಿಸುವ ಮಟ್ಟಕ್ಕೆ ಅಧಿಕಾರಿಗಳು ತಲುಪಿದ್ದಾರೆ. ಸಚಿವ ಸ್ಥಾನವನ್ನು ಸರಿಯಾಗಿ ನಿಭಾಯಿಸದ ಅಂಬರೀಶ್ ಎಲ್ಲವನ್ನೂ ಅಮರಾವತಿ ತೆಕ್ಕೆಗೆ ಹಾಕಿರುವುದರಿಂದ ಅಮರಾವತಿ ಚಂದ್ರಶೇಖರ್‌ನನ್ನೇ ಡಿಫ್ಯಾಕ್ಟೋ ಮಿನಿಸ್ಟರ್ ಅಂದುಕೊಂಡಿರುವ ಅಧಿಕಾರಿಗಳು ಆತನಿಗೆ ಸೆಲ್ಯೂಟ್ ಹೊಡೆಯುತ್ತಿದ್ದಾರೆ.

ವರ್ಗಾವಣೆ ಸೀಸನ್‌ನಲ್ಲಿ ಚೆನ್ನಾಗಿ ಕಮಾಯಿ ಮಾಡಿಕೊಂಡ ಆಪಾದನೆಗಳು ಅಮರಾವತಿ ಚಂದ್ರಶೇಖರ್ ವಿರುದ್ಧ ಕೇಳಿಬರುತ್ತಿದೆ. ಜಿ.ಪಂ. ಇಲಾಖೆಯ ಇಂಜಿನಿಯರ್ ಒಬ್ಬರು ತಾವಿರುವ ಸ್ಥಾನದಲ್ಲಿ ಉಳಿಯಲು 30 ಲಕ್ಷ ನೀಡಿದರೆ, ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು 50 ಲಕ್ಷ ನೀಡಿದ್ದಾರಂತೆ. ಹಾಗೆಯೇ ಜಿಲ್ಲಾ ಪಂಚಾಯತ್‌ನ ಮುಖ್ಯ ಅಧಿಕಾರಿಯೊಬ್ಬರಿಂದ ತಿಂಗಳಿಗೆ ಮಾಮೂಲಿ ಫಿಕ್ಸ್ ಮಾಡಿದ್ದಾರೆಂಬ ಮಾತುಗಳು ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಗಮನಕ್ಕೆ ಬರದೇ ಈ ವರ್ಗಾವಣೆ ದಂಧೆ ನಡೆದಿದೆಯೇ? ಎಂಬ ಮಾತುಗಳು ವ್ಯಾಪಕವಾಗಿದೆ. ಅಂಬರೀಶ್ ಈತನಿಗೆ ಉಸ್ತುವಾರಿ ವಹಿಸಿರುವುದು, ಎಲ್ಲವೂ ಈತನ ಮರ್ಜಿಯಲ್ಲೇ ನಡೆಯುತ್ತಿರುವುದು ಅಂಬಿ ಆಪ್ತ ವಲಯದ ಹಲವರ ಅಸಮಾಧಾನಕ್ಕೆ ಕಾರಣವಾಗಿದೆ. ಆದಷ್ಟು ಶೀಘ್ರ ಇದು ಸ್ಫೋಟಿಸುವ ಎಲ್ಲಾ ಲಕ್ಷಣಗಳೂ ಕಾಣುತ್ತಿದೆ.

ಅಂಬಿ ಅಮರಾವತಿ ಚಂದ್ರಶೇಖರ್‌ನನ್ನು ದೂರವಿಡದಿದ್ದರೆ ಸ್ವತಃ ಅಂಬಿಗೇ ಕೆಸರು ಮೆತ್ತಿಕೊಳ್ಳುವುದು ಗ್ಯಾರಂಟಿ.



ಲೇಔಟ್ ಬಗ್ಗೆ ಡಿಸಿ ಪತ್ರ

336/1, 336/2, 337, 338, 349ರಲ್ಲಿ ಎಕರೆಗೆ 5ರಿಂದ 10 ಲಕ್ಷದವರೆಗೆ (ಒಂದು ...ಗೆ 12.500 ರಿಂದ 25,000) ಹಣ ನೀಡಿ ...ದ ಜಮೀನನ್ನು ಕ್ರಯ ಮಾಡಿಸಿಕೊಂಡಿದ್ದಾರೆ. ... ಬಂಡವಾಳ ಇಲ್ಲದ ಅಮರಾವತಿ ಡೆವಲಪರ್ಸ್ ಪೊಲೀಸ್ ಗೃಹ ನಿರ್ಮಾಣ ಸಂಘ ಹಾಗೂ ಗೃಹ ನಿರ್ಮಾಣ ಸಹಕಾರ ಸಂಘ ಒಪ್ಪಂದ ...ಕೊಂಡಿದ್ದೇ ಕಾನೂನುಬಾಹಿರ.

...ಲ್ಲದೆ ರೈತರಿಂದ ಕ್ರಯ ಮಾಡಿರುವ ಜಮೀನನ್ನು ...ರಡೂ ಸಂಘಗಳ ಜೊತೆ ಜಂಟಿ ಪಾಲುದಾರಿಕೆಯಲ್ಲಿ ...ಖಸಿ ಆ ಎರಡೂ ಸಂಘಗಳ ಹೆಸರಿಗೆ ರಿಜಿಸ್ಟರ್ ...ಬೇಕಿತ್ತು. ಆದರೆ ಅಮರಾವತಿ ಡೆವಲಪರ್ಸ್ ಮಾಲೀಕ ಸಿ.ಚಂದ್ರಶೇಖರ್ ಹಾಗೂ ಆತನ ಸಹೋದರರಾದ ಸಿ.ನಾಗರಾಜು, ಸಿ.ಅನಂತಕುಮಾರ್, ಸಿ. ಅಶ್ವಥ್ ಹೆಸರಿಗೆ ಕ್ರಯ ಮಾಡಿಸಲಾಗಿದೆ. ಇದೂ ಕೂಡ ಕಾನೂನುಬಾಹಿರವಾಗಿದೆ.

'ಅಮರಾವತಿ ಚಂದ್ರಶೇಖರ್ ಅವರ ಸಹೋದರ ಸಿ.ನಾಗರಾಜು ಅವರು ನಮ್ಮ ತಾಯಿ ಸುಶೀಲಮ್ಮ ಎಂಬುವವರಿಗೆ ಕಡಿಮೆ ಹಣ ನೀಡಿ ಅವರಿಂದ 1.5 ಎಕರೆ ಜಮೀನನ್ನು 5.62 ಲಕ್ಷಕ್ಕೆ ಖರೀದಿಸಿದ್ದಾರೆ' ಎಂದು ಸುಶೀಲಮ್ಮನ ಮಕ್ಕಳಾದ ರಮೇಶ್ ಮತ್ತು ಜಗದೀಶ್ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಕುಂಟೆಗೆ 3 ಲಕ್ಷಕ್ಕೂ ಹೆಚ್ಚು ಮೌಲ್ಯವಿದ್ದು, 1 ಎಕರೆಗೆ 1.20 ಕೋಟಿ ಮೌಲ್ಯವಿದೆ. ಹಾಗಾಗಿ ಜಮೀನು ಕೊಟ್ಟವರಲ್ಲಿ ಒಂದಿಬ್ಬರು ನ್ಯಾಯಾಲಯದ ಮೆಟ್ಟಿಲನ್ನು ಹತ್ತಿದ್ದಾರೆ.

ವಿದ್ಯಾಸಂಸ್ಥೆಯೇ ಇಲ್ಲ

ಅಮರಾವತಿ ಡೆವಲಪರ್ಸ್‌ನ ಚಂದ್ರಶೇಖರ್ ತಾಯಿ ಸರಸ್ವತಮ್ಮ ಕೋಂ ಚನ್ನೇಗೌಡರ ಹೆಸರಿನಲ್ಲಿದ್ದ ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ. **130/5**ರಲ್ಲಿ **6-21** ಗುಂಟೆ ಹಾಗೂ **129/1**ರಲ್ಲಿ **7.18** ಎಕರೆ ಸೇರಿದಂತೆ **16-1** ಗುಂಟೆ ಕೃಷಿ ಜಮೀನನ್ನು ಭೂಪರಿವರ್ತನೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ಕೃಷಿ ಜಮೀನನ್ನು ಭೂಪರಿವರ್ತನೆ ಮಾಡಲು ಸಾಧ್ಯವಿಲ್ಲ. ಅದರಬದಲು ವಿದ್ಯಾಸಂಸ್ಥೆ ಹೆಸರಿನಲ್ಲಿ ಬಂದರೆ ಮಾಡಿಕೊಡುವುದಾಗಿ ಜಿಲ್ಲಾಧಿಕಾರಿಯ ಕಚೇರಿಯ ಯಾರೋ ಐಡಿಯಾ ಕೊಟ್ಟಿದ್ದಾರೆ. ಅದರಂತೆ ಅಮರಾವತಿ ಡೆವಲಪರ್ಸ್ ವಿದ್ಯಾಸಂಸ್ಥೆ ಉದ್ದೇಶಕ್ಕಾಗಿ ಒಂದು ಅರ್ಜಿಯನ್ನು ಗುಜರಾಯಿಸಿದ್ದರು. ಆಗಿನ ಜಿಲ್ಲಾಧಿಕಾರಿ ಜಾಫರ್ ಇದು ಯಾವ ವಿದ್ಯಾಸಂಸ್ಥೆ ಎಂದೆಲ್ಲ ನೋಡದೆ **3-9-2011** ಹಾಗೂ **21-10-2011**ರಂದು ಅನ್ಯಕ್ರಾಂತ ಮಂಜೂರು ಮಾಡಿಕೊಟ್ಟಿದ್ದರು.

ನಿಯಮಗಳ ಪ್ರಕಾರ ವಿದ್ಯಾಸಂಸ್ಥೆಯ ಉದ್ದೇಶಕ್ಕೆಂದು ಕೃಷಿ ಜಮೀನನ್ನು ಅನ್ಯಕ್ರಾಂತ ಮಾಡುವಾಗ ವಿದ್ಯಾಸಂಸ್ಥೆ ಹೆಸರು, ಟ್ರಸ್ಟ್ ಮಾಡಿಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕಿತ್ತು, ಆದರೆ ಹಾಗೆ ಮಾಡದಿರುವುದು ಕಾನೂನು ಬಾಹಿರವಾಗಿದೆ. ಹಾಗೆಯೇ ವಿದ್ಯಾಸಂಸ್ಥೆಗೆ ಭೂಪರಿವರ್ತನೆ ಮಾಡಿಕೊಟ್ಟಿದ್ದ ಜಮೀನಿನಲ್ಲಿ ವಿದ್ಯಾಸಂಸ್ಥೆಯ ಸಿಬ್ಬಂದಿಗೆ ವಸತಿಗೃಹ ನಿರ್ಮಿಸುವ ಉದ್ದೇಶಕ್ಕಾಗಿ **130/1** ರ **7.18** ಗುಂಟೆ ಜಮೀನನ್ನು ಉದ್ದೇಶ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆ.



ಷರತ್ತಿನ ಪ್ರಕಾರ ಎರಡು ವರ್ಷಗಳ ನಂತರ ಯಾವ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿದೆಯೋ ಆ ಉದ್ದೇಶಕ್ಕೆ ಬಳಸಿಕೊಳ್ಳಲು ವಿಫಲವಾದಲ್ಲಿ ಆದೇಶ ರದ್ದಾಗಲಿದೆ ಎಂದು ಜಿಲ್ಲಾಧಿಕಾರಿಗಳೇ ಆದೇಶ ನೀಡಿದ್ದರು. "ಆ ಷರತ್ತಿನ ಪ್ರಕಾರ ಎರಡು ವರ್ಷಗಳಾದರೂ ವಿದ್ಯಾಸಂಸ್ಥೆ ಪ್ರಾರಂಭವಾಗಿಲ್ಲದ ಕಾರಣ ಅನ್ಯಕ್ರಾಂತ ರದ್ದುಗೊಂಡಿರುತ್ತದೆ" ಎಂದು ಸಾಮಾಜಿಕ ಕಾರ್ಯಕರ್ತ ರವೀಂದ್ರ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ. ಅಷ್ಟೇ ಅಲ್ಲದೆ ಆಗಿನ ಜಿಲ್ಲಾಧಿಕಾರಿ ಹಾಗೂ ಸಿಬ್ಬಂದಿ ಕಾನೂನುಬಾಹಿರವಾಗಿ ಅನ್ಯಕ್ರಾಂತ ಮಂಜೂರು ಮಾಡಿದ್ದಾರೆಂದು ಆರೋಪಿಸಿ ಲೋಕಾಯುಕ್ತರಿಗೆ ದೂರು ಕೊಡಲು ನಿರ್ಧರಿಸಿದ್ದಾರೆ.


ಇವೆಲ್ಲವುಗಳ ಹಿನ್ನೆಲೆಯಲ್ಲಿ ಗುತ್ತಲು ಸರ್ವೆ.ನಂ. **54**ರಲ್ಲಿ **4** ಎಕರೆ ಜಮೀನನ್ನು ಅನ್ಯಕ್ರಾಂತ ಮಾಡಲು ಅಮರಾವತಿ ಚಂದ್ರಶೇಖರ್ ಸಹೋದರರು ಅರ್ಜಿ ಸಲ್ಲಿಸಿದ್ದು, ಅದನ್ನು ಈಗಿನ ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ ತಿರಸ್ಕರಿಸಿರುವುದು ದೊಡ್ಡ ಓಗ್ಗೆಡೆಯಾಗಿದೆ.

ಪೊಲೀಸರು ಮತ್ತು ಶಿಕ್ಷಕರಿಗೆ ಅಮರಾವತಿ ಡೆವಲಪರ್ಸ್ ನೀಡಲು ಉದ್ದೇಶಿಸಿರುವ ಲೇಔಟನ್ನು ಸ್ವತಃ ಅಂಬರೀಶ್‌ರವರೇ ಏಪ್ರಿಲ್ 8, 2012ರಂದು ಉದ್ಘಾಟನೆ ಕೂಡ ಮಾಡಿದ್ದರು. ಈಗ ನೋಡಿದರೆ ಅಮರಾವತಿ ಡೆವಲಪರ್ಸ್‌ನ ಚಂದ್ರಶೇಖರ್ ವಿರುದ್ಧವೇ ಅವ್ಯವಹಾರ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಲಾಗಿದೆ.

ದೂರು ದಾಖಲಾದ ನಂತರ ಅಮರಾವತಿ ಚಂದ್ರಶೇಖರ್ "ಒಪ್ಪಂದ ಮಾಡಿಕೊಂಡಂತೆ ಎಲ್ಲಾ ಹೂಡಿಕೆದಾರರಿಗೂ ಸೈಟು ನೀಡುತ್ತೇವೆ. ಆತಂಕಗೊಳ್ಳುವುದು ಬೇಡ. ಸಾರ್ವತ್ರಿಕ ಚುನಾವಣೆ, ಉಪಚುನಾವಣೆಯ ಸಂದರ್ಭದಲ್ಲಿ ನೀತಿಸಂಹಿತೆ ಇದ್ದು ದ್ದರಿಂದ ಅನ್ಯಕ್ರಾಂತ ಮಂಜೂರಾಗುವುದು ತಡವಾಯಿತು" ಎಂದೆಲ್ಲಾ ಹೇಳಿಕೆ ನೀಡುತ್ತಾ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ.

ಅಮರಾವತಿ ಚಂದ್ರಶೇಖರ್ ಅಂಬಿ ಶಿಷ್ಯನಾಗಿರುವುದರಿಂದ ಆತನ ವಿರುದ್ಧ ಕೇಳಿಬಂದಿರುವ ಎಲ್ಲಾ ಆರೋಪಗಳನ್ನು ನಿವಾರಿಸಿಕೊಳ್ಳಬಹುದು. ಆದರೆ ನಿವೇಶನಕ್ಕಾಗಿ ಕಾದು ಕುಳಿತಿರುವ ಪೊಲೀಸರ ಹಾಗೂ ಶಿಕ್ಷಕರ ಮತ ಪಡೆದಿರುವ ಅಂಬರೀಶ್ ತನ್ನ ಆಪ್ತ ಶಿಷ್ಯ ಚಂದ್ರಶೇಖರ್ ಮಾಡಿರುವ ಸೈಟು ಭಾನಗಡಿಯನ್ನು ನಿವಾರಿಸದಿದ್ದರೆ ಅವರಿಗೂ ಕಳಂಕ ತಗಲುವುದು ಖಚಿತ. ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ ಮತ್ತು ಎಸ್ಪಿ ಭೂಷಣ್ ಬೊರಸೆ ಕೂಡ ಪೊಲೀಸ್ ಸಿಬ್ಬಂದಿಗೆ ಮತ್ತು ಶಿಕ್ಷಕರಿಗೆ ವಂಚನೆಯಾಗದಂತೆ ಕ್ರಮಕೈಗೊಳ್ಳಬೇಕಿದೆ.

■ **ನಾಗೇಶ್**



ಆಧುನಿಕ ಬಸವಣ್ಣ ಅಂತೆ ಚಿದಾನಂದಮೂರ್ತಿ- ಅಂಗಡಿ ಉವಾಚ!!

...ಜೂನ್ 2ರಂದು ಮಿಥಿಕ್ ಸೊಸೈಟಿಯಲ್ಲಿ ನಡೆದ ...ಪ್ರದಾನ ಸಮಾರಂಭದಲ್ಲಿ ಡಾ. ಎಸ್.ಎಸ್. ಅಂಗಡಿ ...ತ "ವಚನ ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ 149 ...ಟ ಪುಸ್ತಕ ಬಿಡುಗಡೆಯಾಯಿತು. (ಪ್ರ: ಪ್ರಿಯದರ್ಶಿನಿ ...ನ, ಬೆಂಗಳೂರು). ಆ ಪ್ರಶಸ್ತಿಯನ್ನು ಪಡೆದ ಸುಂದರ ... ಸಂಶೋಧನೆಗಳಿಗೂ ಈ ಪುಸ್ತಕಕ್ಕೂ ಏನೇನೂ ...ಧವಿರಲಿಲ್ಲ. ಒಂದೇ ಒಂದು ಚಿಕ್ಕ ಸಂಬಂಧವೆಂದರೆ, ...ಶಸ್ತಿಯ ಹೆಸರು ಚಿದಾನಂದ ಪ್ರಶಸ್ತಿ ಮತ್ತು ಆ ...ರಂಭದಲ್ಲಿ ಚಿ.ಮೂ. ಸಪತ್ನೀಕರಾಗಿ ಉಪಸ್ಥಿತರಾಗಿದ್ದು.

...ಸವಣ್ಣ ಮತ್ತು ಚಿ.ಮೂ 'ಸಾಮ್ಯತೆ'

...ಪ್ಪತ್ತನೆಯ ಶತಮಾನದ 70-80 ರ ದಶಕದಲ್ಲಿ ...ಟಕದ ಕೆಲ ಭ್ರಷ್ಟ ರಾಜಕಾರಣಿಗಳನ್ನು ಇಪ್ಪತ್ತನೆಯ ...ಮಾನದ ಬಸವಣ್ಣ ಎಂದು ಭಟ್ಟಂಗಿಗಳು ಕರೆದರು. ... ಡಾ. ಅಂಗಡಿಯವರು ನೇರವಾಗಿ ಹಾಗೆಂದು ...ದೆ ಅದೇ ಅರ್ಥಬರುವಂತೆ ಸದರಿ ಪುಸ್ತಕದಲ್ಲಿ ...ದ್ದಾರೆ. ಉದಾಹರಣೆಗೆ ಒಂದನೆಯ ಅಧ್ಯಾಯದಲ್ಲಿ ...ವಣ್ಣನವರು ಮತ್ತು ಚಿದಾನಂದಮೂರ್ತಿ, ತೌಲನಿಕ ...ನ" (ಪು. 1-9) ಮತ್ತು 10 ನೇ ಅಧ್ಯಾಯದಲ್ಲಿ ...ರೋಹ'ದಲ್ಲಿ (ಪುಟ 85-87) ಹೀಗೆಂದು ಸ್ಪಷ್ಟವಾಗಿ ...ದ್ದಾರೆ. ಈ ಅಧ್ಯಾಯಗಳೇ ಈ ಲೇಖನದ ...ವನ್ನು.

...ಅಂಗಡಿಯವರ ಪ್ರಕಾರ "ವೀರಶೈವರಿಗೆ, ...ಧಕರಿಗೆ ಅವರಿಬ್ಬರೂ '(ಅಂದರೆ ಬಸವಣ್ಣ ಮತ್ತು ...ಮೂ.) ದೈವದ ಅವತಾರ; ಆಧುನಿಕ ದೃಷ್ಟಿಯವರಿಗೆ ...ಬ್ಬರೂ ಮಹಾ ಮಾನವತಾವಾದಿಗಳು" (ಪು. 9). ...ಥ ಹೋಲಿಕೆ!! ಅಂತ್ಯಜರಿಂದ ಮೊದಲ್ಗೊಂಡು ...ವರೆಗೂ ಎಲ್ಲರನ್ನೂ ಅಪ್ಪಿಕೊಂಡ ಬಸವಣ್ಣನವರನ್ನು ... ಅಂಗಡಿ ಚಿ.ಮೂ. ಅವರಿಗೆ ಹೋಲಿಸು... ...ವರ ಬಗ್ಗೆ? ಇವರಿಬ್ಬರನ್ನು ಸಮಾನರೆಂದು ... ಅಂಗಡಿಯವರ ಮೌಢ್ಯತೆಗೆ ಗೋಡಿ ನನಗೆ ಕರುಣೆ ಬರುತ್ತದೆ.

ಸ್ವತಃ ಚಿ.ಮೂ. ಅವರೇ ನಾನು ಆರೆಸ್ಸೆಸ್ ವಿಚಾರಧಾರೆಯನ್ನು ಒಪ್ಪುತ್ತೇನೆ ಎಂದು ಹೇಳಿದ್ದಲ್ಲದೆ ಮುಸ್ಲಿಮರನ್ನು-ಕ್ರಿಶ್ಚಿಯನ್ನರನ್ನು ತಮ್ಮ ಹಲವು ಭಾಷಣಗಳಲ್ಲಿ ಟೀಕಿಸಿದ್ದಾರೆ. ಇದೇ ಕಾರಣಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯ ನೀಡ ಬಯಸಿದ್ದ ಗೌರವ ಡಾಕ್ಟರೇಟನ್ನು ಕುಲಾಧಿಪತಿಗಳು ತಡೆ ಹಿಡಿದಿದ್ದರು. ಆ ಸಂದರ್ಭದಲ್ಲಿ ಚಿ.ಮೂ. ಅವರು ರಾಜಭವನವನ್ನು ಹಿಂಬಾಗಿಲಿನಿಂದ ಪ್ರವೇಶಿಸಿ ಕುಲಾಧಿಪತಿಗಳನ್ನು ಬೇಡಿಕೊಂಡು ಗೌರವ ಡಾಕ್ಟರೇಟ್ ಪದವಿಯನ್ನು ಪಡೆದರು. ಇದೊಂದು ಖಂಡಿತವಾಗಿಯೂ ಅಗೌರವದ ಪದವಿ!!

ಚಿಮೂ ಜಾತಿವಾದಿ ಹಾಗೂ ಕ್ರೂರಿ

"ಬಸವ, ಗಾಂಧೀಜಿ ಅವರ ತತ್ವಾನುಯಾಯಿಯಾದ ಚಿ.ಮೂ. ಅವರಲ್ಲಿ ಜಾತೀಯತೆಯ ಸಂಕುಚಿತ ಭಾವನೆಗಳಿಗೆ ಎಡೆಯಿಲ್ಲ" (ಪು. 4) ಎಂದು ಅಂಗಡಿ ಬರೆದಿದ್ದಾರೆ. ಇದಕ್ಕೆ ಉತ್ತರವಾಗಿ ನಾನು ಅಂಗಡಿಯವರನ್ನು ಒಂದು ನೇರ ಪ್ರಶ್ನೆ ಕೇಳಬಯಸುತ್ತೇನೆ (ದಿ ಚಿ.ಮೂ ಅವರ ಕೌಟುಂಬಿಕ ಪ್ರಶ್ನೆಯಾದರೂ ಅವರ ಜಾತಿವಾದಿ ಮತ್ತು ಸಂಕುಚಿತ ದೃಷ್ಟಿಯನ್ನು ಸಾಬೀತುಪಡಿಸುವುದರಿಂದ ಕೇಳಬೇಕಿದೆ. ಚಿ.ಮೂ. ಅವರ ಮಗ ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಲು ಬಯಸಿದಾಗ ಚಿ.ಮೂ. ಯಾಕೆ ವಿರೋಧಿಸಿದರು? ತಮ್ಮ ಮಗನ ಹಾಗೂ ಆ ಬ್ರಾಹ್ಮಣ ಕನ್ಯೆಯ ಜೀವನವನ್ನು ಹಾಳುಮಾಡಿದ್ದಲ್ಲದೆ, ಒತ್ತಾಯದಿಂದ ಮದುವೆ ಮಾಡಿ ತಂದುಕೊಂಡಿದ್ದ ಸೊಸೆಯನ್ನು ಆಕೆಯ ತವರುಮನೆಗೆ ಯಾಕೆ ಕಳಿಸಿದರು? ಇದು ಜಾತೀಯತೆ ಹಾಗೂ ಸಂಕುಚಿತ ಭಾವನೆಗಳಿಗೆ ಸಾಕ್ಷಿ ಅಲ್ಲವೇ? ಚಿ.ಮೂ. ಅವರ ಕ್ರೌರ್ಯಕ್ಕೂ ಸಾಕ್ಷಿ ಅಲ್ಲವೇ??

ಗೋಕಾಕ್ ಚಳವಳಿ

"ಬಸವಣ್ಣನವರಂತೆ ಕನ್ನಡ ಚಳವಳಿಯನ್ನು ಸಮರ್ಥವಾಗಿ ನೆರವೇರಿಸಿದರು ಚಿ.ಮೂ." (ಪು.4) ಎಂದೂ ಅಂಗಡಿಯವರು ಬರೆದಿದ್ದಾರೆ. ಚಿ.ಮೂ ಅವರ 'ಕನ್ನಡ ಶಕ್ತಿ ಕೇಂದ್ರ'ದ ಇತಿಹಾಸ ಎಲ್ಲರಿಗೂ ಗೊತ್ತು. ಬೆಂಗಳೂರಿನಲ್ಲಿದ್ದ 'ಸಾಹಿತಿಗಳ ಕಲಾವಿದರ ಬಳಗ'ವನ್ನು ಚಿ.ಮೂ ಸೇರಿ ಅದರ ಸಮಾಧಿಯ ಮೇಲೆ ತಮ್ಮ ಶಕ್ತಿ ಕೇಂದ್ರವನ್ನು ಕಟ್ಟಿ ತಮ್ಮನ್ನು ತಾವೇ ಕಾಯಂ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಆರಂಭದಲ್ಲಿಯೇ ಅವರ ಸಂಕುಚಿತ ಹಾಗೂ ಕೋಮುವಾದಿತನವನ್ನು ಗಮನಿಸಿದ ಡಾ. ಚೆನ್ನವೀರ ಕಣವಿ ಅವರು ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆಗ ಪಾಟೀಲ್ ಪುಟ್ಟಪ್ಪನವರು "ಚಿ.ಮೂ. ಅವರಿಗೆ ಕೇವಲ ಬೆಂಗಳೂರು ಮಾತ್ರ ಕರ್ನಾಟಕ" ಎಂದು ಟೀಕಿಸಿದ್ದರು.

ಗೋಕಾಕ್ ಚಳವಳಿ ಆರಂಭಗೊಂಡಾಗ ಚಿ.ಮೂ. ಎಲ್ಲಿದ್ದರು? ಗೋಕಾಕ್ ಚಳವಳಿ ಆರಂಭಗೊಂಡದ್ದು ಧಾರವಾಡದ ಸಾಹಿತಿಗಳಿಂದ. ಇದನ್ನೇಕೆ ಮುಚ್ಚಿಹಾಕಿದ್ದೀರಿ ಅಂಗಡಿಯವರೆ?

ಅಪ್ರಾಮಾಣಿಕ ಸಂಶೋಧಕ

ಸಂಶೋಧಕರಿಗೆ ಚಿ.ಮೂ. ದೈವದ ಅವತಾರ ಹೇಗಾಗುತ್ತಾರೆ? ಚಿ.ಮೂ. ಅವರು ತಮ್ಮದೇ ಸಂಶೋಧನೆಗಳು ಎಂದು ಹೇಳಿಕೊಳ್ಳುವ ಸಂಶೋಧನೆಗಳ ಹಿಂದಿರುವ ಕೇವಲ ಒಂದೆರಡು ಉದಾಹರಣೆಗಳಿಂದ ಅವರು ಹೇಳುವುದು ಸುಳ್ಳು ಎಂದು ಸಾಬೀತುಪಡಿಸುತ್ತೇನೆ.

ಇತ್ತೀಚೆಗೆ ಇಂಗಳೇಶ್ವರದ ಕುಲಕರ್ಣಿಯವರು ಬಸವಣ್ಣನವರ ಪೂರ್ವಜರೆಂದು ತಾವೇ ಕಂಡುಹಿಡಿದುದಾಗಿ ಚಿ.ಮೂ ಹೇಳಿಕೊಂಡಿದ್ದಾರೆ. ಆದರೆ **1989** ರಲ್ಲಿ (ಬಸವಪಥ ಸಂಪುಟ 1, ಸಂಚಿಕೆ 6) ಸಿದ್ದಯ್ಯ ಪುರಾಣಿಕರು "ಇಂಗಳೇಶ್ವರ ಕುಲಕರ್ಣಿಯವರ ಮನೆತನದ ವಂಶಾವಳಿ" ಎಂಬ ಸಂಶೋಧನಾ ಲೇಖನವನ್ನು ಪ್ರಕಟಿಸಿದ್ದರು. ಈ ಲೇಖನದ ವಿಷಯವನ್ನು 'ಧರ್ಮಕಾರಣ' ಕಾದಂಬರಿ ವಿವಾದದ ಸಂದರ್ಭದಲ್ಲಿ ಚಿ.ಮೂ. ಅವರು "ಇದನ್ನು ನಾನು ಒಪ್ಪುವುದಿಲ್ಲ" ಎಂದು ಹೇಳಿದ್ದರು. ಆದರೆ ಈಗ ಇದೇ ಚಿ.ಮೂ. ಅವರು "ಹಿಂದಿನ ಕವಿ ಶ್ರೇಷ್ಠರ ಇಂದಿನ ವಂಶಸ್ಥರು" ಎಂಬ ಲೇಖನದಲ್ಲಿ ಸಿದ್ಧಯ್ಯ ಪುರಾಣಿಕರ ಸಂಪ್ರಬಂಧವನ್ನು ಉಲ್ಲೇಖಿಸದೆ ತಮ್ಮದೇ ಸಂಶೋಧನೆ ಎಂದು ಹೇಳಿಕೊಳ್ಳುತ್ತಾರೆ.

ಅಣ್ಣಿಗೇರಿಯಲ್ಲಿಯ ಪಂಪನ ವಂಶಸ್ಥರ ಬಗ್ಗೆ ಕಲಬುರ್ಗಿಯವರು ಸುಮಾರು **20-25** ವರ್ಷಗಳ ಹಿಂದೆಯೇ ಬರೆದಿದ್ದರು. ಈ ದೇಶಪಾಂಡೆಯವರ, ಅಣ್ಣಿಗೇರಿಯ ಮನೆಯನ್ನು ನಾನು ಸಂದರ್ಶಿಸಿ ಹಲವಾರು ಚಿತ್ರಗಳನ್ನು **1994** ರ ಸುಮಾರಿನಲ್ಲಿ ತೆಗೆದಿದ್ದೇನೆ. ಹೀಗಿರುವಾಗ **2010** ರಲ್ಲಿ ಚಿ.ಮೂ. ಬರೆದ ಸ್ವಯಂಘೋಷಿತ ಸಂಶೋಧನೆಗೆ ಯಾವ ಬೆಲೆ?

ಇದರಂತೆಯೇ ಬೆಂಗಳೂರಿನ ಹೆಸರಿನ ಉತ್ಪತ್ತಿಯ ಬಗ್ಗೆ ಕೆ.ವಿ. ರಮೇಶರು (1991) 'ಬೆಂಗುಳಲುಬಾರದ' ಎಂದು ಬರೆದಿದ್ದರು. ಆದರೆ ಏಪ್ರಿಲ್ 12, 2011 ಚಿ.ಮೂ ಅವರು ತಾವೇ ಈ ಬಗ್ಗೆ ಮೊದಲು ಸಂಶೋಧನೆ ಮಾಡಿದವರೆಂದು ಹೇಳಿ ಬೆಂಗಳೂರಿನ ಹೆಸರಿನ ವ್ಯುತ್ಪತ್ತಿಗೆ ಬೆಂಗುಳಲು ಕಾರಣವೆಂದು ಹೇಳಿದರು. ವಾಸ್ತವವೆಂದರೆ ಭೂವೈಜ್ಞಾನಿಕವಾಗಿ ಇಬ್ಬರ ಈ ಹೇಳಿಕೆ (ಸಂಶೋಧನೆ) ತಪ್ಪು. (ನೋಡಿ ಇತಿಹಾಸದ ಪುಟಗಳು 14, ಜುಲೈ-ಸೆಪ್ಟೆಂಬರ್ 2012). ಇಂಥ ಹಲವು ಉದಾಹರಣೆಗಳನ್ನು ನಾನು ನೀಡಬಲ್ಲೆ. ಇಂಥ ಅಪ್ರಾಮಾಣಿಕ ಸಂಶೋಧಕರು ಇತರ ಸಂಶೋಧಕರಿಗೆ ಹೇಗೆ ಮಾದರಿಯಾಗಲು ಸಾಧ್ಯ? ಅಂಗಡಿಯವರೇ ಉತ್ತರಿಸಬೇಕು.

ಬಸವಣ್ಣನವರು ಸದ್ಬುದ್ಧಿ ಕರುಣಿಸಲಿ

ಸ್ಥಳಾವಕಾಶದ ದೃಷ್ಟಿಯಿಂದ ಲೇಖನವನ್ನು ಲಂಬಿಸಿದೆ. ಬಸವಣ್ಣನವರನ್ನು ಕುಬ್ಜಗೊಳಿಸುವುದೇ ಚಿ.ಮೂ. ಅವರ ಪರಮಧ್ಯೇಯ ಎಂದು ನಾನು ಖಚಿತವಾಗಿ ಹೇಳುತ್ತೇನೆ.


ಚಿ.ಮೂ. ಅವರು ಎನ್.ಬಿ.ಟಿ.ಗಾಗಿ ಇಂಗ್ಲಿಷಿನಲ್ಲಿ 'ಬಸವಣ್ಣ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದನ್ನು **Dirty Book** ಎಂದು ಹಿಂದೆಯೇ ಕರೆದಿದ್ದೇನೆ: ಯಾಕೆಂದರೆ ಈ ಪುಸ್ತಕದ ಕನ್ನಡ ಅನುವಾದದಲ್ಲಿ "ರಾಜ್ಯದ ಸಂಪತ್ತಿನ ಒಂದು ಭಾಗವನ್ನು ಮಾತ್ರ ಬಸವಣ್ಣ ತನ್ನ ಧಾರ್ಮಿಕ ಉದ್ದೇಶಗಳಿಗಾಗಿ ಬಳಸಿಕೊಂಡಿರಬಹುದು" (ಪು. 42) ಎಂದು ಚಿ.ಮೂ. ಅವರು ಆರೋಪಿಸಿದ್ದಾರೆ. ಬಸವಣ್ಣನವರೇ ತಮ್ಮ ಒಂದು ವಚನದಲ್ಲಿ "ಊರ ಮುಂದೆ ಹಾಲಹಳ್ಳ ಹರಿಯುತಿರಲು, ಒರೆಯಾವಿನ ಬೆನ್ನಹರಿಯಲೇಕಯ್ಯ? ಲಜ್ಜೆಗೆಡಲೇಕೆ? ನಾಣುಗಿಡಲೇಕೆ? ಕೂಡಲಸಂಗಮ-ದೇವನುಳ್ಳನ್ನಕ್ಕ ಬಿಜ್ಜಳನ ಭಂಡಾರವೇನಿಗೇಕಯ್ಯಾ?" ಎಂದು ಹೇಳುತ್ತಾರೆ.

ಹೀಗಿದ್ದರೂ ಚಿ.ಮೂ ತಮ್ಮ ಪುಸ್ತಕದ ಇನ್ನೊಂದು ಪುಟದಲ್ಲಿ (ಪು. 50) "ಅವರ (ಬಸವಣ್ಣನವರ) ಅನುಯಾಯಿಗಳು ಹಾಗೂ ಸಂಗಡಿಗರು ಬಡವರಾಗಿದ್ದರಿಂದ ದೇವಾಲಯಗಳನ್ನು ಬಹಿಷ್ಕರಿಸುವುದಲ್ಲದೆ ಬೇರಾವ ಮಾರ್ಗವೂ ಬಸವಣ್ಣನವರಿಗೆ ಉಳಿದಿರಲಿಲ್ಲ" ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಕರ್ನಾಟಕ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ "ನೀವು ಈ ನಿಮ್ಮ ಆರೋಪವನ್ನು ಸಿದ್ಧಪಡಿಸಿದರೆ ನಾನು ಈ ರೋಡಿನ ಮೇಲೆ ನಿಮಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತೇವೆ; ಇಲ್ಲವಾದರೆ ಇನ್ನು ಮುಂದೆ ನೀವು ಬಸವಣ್ಣನವರ ಬಗ್ಗೆ ಅಥವಾ ವಚನ ಸಾಹಿತ್ಯದ ಬಗ್ಗೆ ಬರೆಯಬಾರದು" ಎಂದು ಚಾಲೆಂಜ್ ಹಾಕಿದ್ದೆ. ಆದರೆ ಇದುವರೆಗೂ ಇದಕ್ಕೆ ಚಿ.ಮೂ. ಉತ್ತರಿಸಿಲ್ಲ; ಉತ್ತರಿಸುವುದೂ ಇಲ್ಲ. ಇಂತಹ ಚಿ.ಮೂ. ಅವರ ಪಾದ ಪದ್ಮಾರಕಧಾರರಾಗಿರುವ ಅಂಗಡಿಯವರು ಉತ್ತರಿಸುವರಾ?

ನಾನು ಚಿ.ಮೂ. ಅವರಿಗೆ ಹಿಂದೊಂದು ಸಲ ಪತ್ರ ಬರೆದು ಅದರಲ್ಲಿ "ನೀವು ಇದುವರೆಗೆ ಮಾಡಿರುವ ಸಂಶೋಧನೆ ಮತ್ತು ಸಾಧನೆಯ ಬಗ್ಗೆ ನನಗೂ ನನ್ನಂಥವರಿಗೂ ಗೌರವ ಇದೆ. ಆದರೆ ಇತ್ತೀಚೆಗೆ ಬುದ್ಧಿಯ ಸನ್ನಿಯಿಂದ ಪೀಡಿತರಾಗಿ ಅವೈಜ್ಞಾನಿಕವಾದ, ಅವಾಸ್ತವಿಕವಾದ ಮತ್ತು ಪ್ರಚೋದನಾಕಾರಿಯಾದ ಹೇಳಿಕೆಗಳನ್ನು ನೀಡುತ್ತಿದ್ದೀರಿ; ಹೀಗೆಲ್ಲ ಹೇಳಬೇಡಿ. ನಿಮ್ಮನ್ನು ಆ ಸ್ಥಾನದಿಂದ ಕೆಳಗಿಳಿಸಲು ನನಗಂತೂ ನೋವಾಗುತ್ತದೆ" ಎಂದು ಹೇಳಿದ್ದೆ. ಈಗಲೂ ಆ ಮಾತನ್ನು ಪುನರುಚ್ಚರಿಸುತ್ತೇನೆ.

ಅಂಗಡಿ ಅವರಿಗೂ, ಅವರ ಆರಾಧ್ಯ ದೈವವಾಗಿರುವ ಮಹಾ ಚಿದಾನಂದಮೂರ್ತಿ ಅವರಿಗೂ ಬಸವಣ್ಣನವರು ಸದ್ಬುದ್ಧಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ.

■ ಡಾ.ಎಚ್.ಚಂದ್ರಶೇಖರ, ಬೆಂಗಳೂರು



ದೇವೇಗೌಡ · ಕುಮಾರಸ್ವಾಮಿ · ಜಗದೀಶ್ ಶೆಟ್ಟರ್ · ಇ. ಕೃಷ್ಣಪ್ಪ · ಶ್ರೀನಿವಾಸ ಮೂರ್ತಿ · ನಂಜುಂಡಯ್ಯ · ಅಶ್ವತ್ಥ್ ನಾರಾಯಣ್ · ಮಂಜುನಾಥ್ ರಾಜು

ಬಿಜೆಪಿ-ಜೆಡಿಎಸ್ ಜಂಟಿ ಭೂ ಡಕಾಯಿತಿ

500 ಕೋಟಿಯ ಸೊತ್ತು ನೆಲಗಳ್ಳರ ಪಾಲು

ಒಂದಲ್ಲ, ಎರಡಲ್ಲ ಅದು 225 ಎಕರೆಗಳಷ್ಟು ಸರ್ಕಾರಿ ಭೂಮಿಯ ನಿರ್ಲಜ್ಜ ದರೋಡೆ.

ತೆನೆ ಹೊತ್ತ ರೈತ ಮಹಿಳೆಯನ್ನೇ ತನ್ನ ಲಾಂಛನವಾಗಿಸಿಕೊಂಡ ಜೆಡಿಎಸ್ ಮತ್ತು ಕೋಮುವಾದಿ ಬಿಜೆಪಿ ಜಂಟಿ ಸರ್ಕಾರಗಳ 'ರೈತ ಕಾಳಜಿ'ಯ ಭೀಕರ ಪರಿಣಾಮಗಳ ಪೈಕಿ ಇದು ಯಾರ್ಯಾರನ್ನು ಜೈಲಿಗೆ ಕಳುಹಿಸುತ್ತದೋ ಗೊತ್ತಿಲ್ಲ. ಲೂಟಿಯಾಗಿರುವ 225 ಎಕರೆ ಸರ್ಕಾರಿ ಭೂಮಿಯೇನಾದರೂ ಇವತ್ತು ಉಳಿದಿದ್ದರೆ ಇಡೀ ಏಷ್ಯಾ ಖಂಡದಲ್ಲೇ ವಿನೂತನವಾದ 'ರೈತ ಸಂತೆ'ಯೊಂದು ಬೆಂಗಳೂರಿನ ಮಗ್ಗುಲಲ್ಲೇ ತಲೆ ಎತ್ತುತ್ತಿದ್ದದ್ದಂತೂ ಸತ್ಯ. ಅಂಥಾದ್ದೊಂದು ವಿನೂತನ ಕೃಷಿ ಉತ್ಪನ್ನ ಮಾರುಕಟ್ಟೆಯ ಕನಸನ್ನು ಬಿಜೆಪಿ-ಜೆಡಿಎಸ್ ರಿಯಲ್ ಎಸ್ಟೇಟ್ ರಾಜಕಾರಣಕ್ಕೆ ಬಲಿಯಾಯಿತು.

ಇವತ್ತು ಬೆಂಗಳೂರಿನ ಯಶವಂತಪುರದ ಎಪಿಎಂಸಿ ಯಾರ್ಡ್‌ಗೆ ಪ್ರತಿನಿತ್ಯ ಕಮ್ಮಿಯೆಂದರೂ 1500 ಲಾರಿಗಳು ಬರುತ್ತವೆ. ದೂರದ ಪೂನಾ, ಅಹಮದಾಬಾದ್‌ನಿಂದ ಹಿಡಿದು ಕರ್ನಾಟಕದ ಬಿಜಾಪುರ, ಬೆಳಗಾವಿ, ಗುಲ್ಬರ್ಗ, ಚಿತ್ರದುರ್ಗ, ಹಾಸನಗಳಿಂದಲೂ ತಮಿಳುನಾಡು, ಆಂಧ್ರಗಳಿಂದಲೂ ಈರುಳ್ಳಿ, ಆಲೂಗಡ್ಡೆ, ಧಾನ್ಯಗಳನ್ನು ಹೊತ್ತು ತರುವ ಅಸಂಖ್ಯಾತ ಲಾರಿಗಳ ಭರಾಟೆಗೆ ಬೆಂಗಳೂರು-ತುಮಕೂರು ರಸ್ತೆಯ ಪೀಣ್ಯಾ, ಗೊರಗುಂಟೆಪಾಳ್ಯದಂಥ ಏರಿಯಾಗಳೇ ಟ್ರಾಫಿಕ್ ಝಾಮ್‌ನಿಂದ ನರಳಬೇಕು.

ಇದನ್ನು ಮನಗಂಡೇ ಆವತ್ತು ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ಇಡೀ ದೇಶಕ್ಕಷ್ಟೇ ಅಲ್ಲ, ಏಷ್ಯಾ ಖಂಡಕ್ಕೆ ಬೃಹತ್ತಾದ ಕೃಷಿ ಉತ್ಪನ್ನ ಮಾರುಕಟ್ಟೆಯೊಂದನ್ನು ನಿರ್ಮಿಸುವ ಕನಸು ಕಂಡದ್ದು ಅವರದೇ ಮಕ್ಕಳ ಮೂಲಕ ಮಣ್ಣು ಪಾಲಾಯಿತು!

ಸರ್ಕಾರಿ ಭೂಮಿಯನ್ನು ಜೊತೆಗೆ 188.09 ಎಕರೆ ರೈತರ ಖಾಸಗಿ ಜಮೀನನ್ನೂ ಗುರುತಿಸಲಾಯ್ತು.

354 ಎಕರೆ

ರೈತರ ಭೂಮಿ ಮತ್ತು ಸರ್ಕಾರಿ ಭೂಮಿಗಳೆರಡೂ ಸೇರಿಬಿಟ್ಟರೆ ಅದೇ 357 ಎಕರೆಯಾಗುತ್ತದೆ. ಅಂದಾಜು 400 ಎಕರೆ ಅಗತ್ಯವಾಗಿತ್ತಾದರೂ ಸಲೀಸಾಗಿ 357 ಎಕರೆಯಂತೂ ಲಭ್ಯವಿತ್ತು. ಸರ್ಕಾರಿ ಭೂಮಿಯ ಪೈಕಿ ಹೊನ್ನಸಂದ್ರ ಸರ್ವೆ ನಂ. 12, 13, 26ರಲ್ಲಿದ್ದ 13 ಎಕರೆ, ಪಿಳ್ಳಹಳ್ಳಿಯ ಸ.ನಂ. 52, 53, 54ರಲ್ಲಿದ್ದ 63 ಎಕರೆ, ಮುತ್ತಹಳ್ಳಿಯ ಸ.ನಂ. 40, 41, 42ರಲ್ಲಿದ್ದ 57 ಎಕರೆ, ವಡೇರಹಳ್ಳಿಯ ಸ.ನಂ. 50, 25ರಲ್ಲಿದ್ದ 34.18 ಎಕರೆಗಳಷ್ಟು ಸರ್ಕಾರಿ ಭೂಮಿಯೇ 168.27 ಎಕರೆಗಳಷ್ಟಾದ್ದರಿಂದ ಇದರ ಸ್ವಾಧೀನಕ್ಕೆ ಯಾವುದೇ ಅಧಿಸೂಚನೆಯ ಅಗತ್ಯವಿರಲಿಲ್ಲ.

ಆದರೆ ರೈತರು ಹೊಂದಿದ್ದ ಖಾಸಗಿ ಜಮೀನಿತ್ತಲ್ಲ ಅದೇ 188.09 ಎಕರೆಗಳಷ್ಟಿದ್ದರಿಂದ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗಳು ದಿನಾಂಕ 27.12.1999 ರಂದು ಕಲಂ 4(1) ಅಧಿಸೂಚನೆಯ ಮೂಲಕ ಪ್ರಾಥಮಿಕ ಭೂಸ್ವಾಧೀನ ಪ್ರಕ್ರಿಯೆ ಮುಗಿಸಿಬಿಟ್ಟರು. ಮುಂದೆ 2001ರ

ಕಣ್ಣಾ ಡೆವಲಪರ್ಸ್ ಧಣಿ ನಂಜುಂಡಯ್ಯನ 150 ಎಕರೆಗಳ ಕಣ್ಣಾ ಗಾರ್ಡನ್ ಸಿಟಿ ಹೆಸರಿನ ಖಾಸಗಿ ಲೇಔಟ್, ಮಲ್ಲೇಶ್ವರಂ ಶಾಸಕ ಅಶ್ವತ್ಥ್ ನಾರಾಯಣ ಮತ್ತು ಬಿಬಿಎಂಪಿ ಕೌನ್ಸಿಲರ್ ಮಂಜುನಾಥ್ ರಾಜು ಪಾಲುದಾರಿಕೆಯ ಮತ್ತೊಂದು ಲೇಔಟು, ಚಲುವರಾಯಸ್ವಾಮಿಯ ಅಣ್ಣ ಲಕ್ಷ್ಮೀಕಾಂತ್‌ನ ಇನ್ನೊಂದು ಲೇಔಟ್; ಇತ್ಯಾದಿಗಳೆಲ್ಲ ಹೇಗೆ ತಲೆಎತ್ತಲು ಸಾಧ್ಯ?

ಇದೇ ಯಾರಿಗೂ ಅರ್ಥವಾಗದ ಪ್ರಶ್ನೆ. 168.27 ಎಕರೆ ಸರ್ಕಾರಿ ಭೂಮಿಯನ್ನು ಹೊರತುಪಡಿಸಿದಂತೆ ಉಳಿಕೆ 185.12 ಎಕರೆ ಖಾಸಗಿ ಭೂಮಿಯ ಪರಿಹಾರ ಮೊತ್ತವೆಂದು ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ದಿನಾಂಕ 25.06.2007ರಂದು ಒಟ್ಟು 13,01,47,090 ರೂಪಾಯಿಗಳನ್ನು ಠೇವಣಿಯಾಗಿ ಸರ್ಕಾರಕ್ಕೆ ಪಾವತಿಸಿಯೂ ಆಗಿತ್ತು. ಹೀಗೆ ಠೇವಣಿಯಿಟ್ಟ 13,01,47,090 ರೂಪಾಯಿ ಕೂಡ ರೈತರದ್ದೆ.

ಆದರೆ ಬಿಜೆಪಿ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಜೆಡಿಎಸ್ ನಾಯಕ ಚಲುವರಾಯಸ್ವಾಮಿಯ ರಿಯಲ್ ಎಸ್ಟೇಟ್ ನೆಂಟಸ್ತಿಕೆಯೇ ಜಂಟಿ ಸರ್ಕಾರಕ್ಕೆ ಮುಖ್ಯವಾಯಿತು. ಜೆಡಿಎಸ್-ಬಿಜೆಪಿ

ಅಲ್ಲಿಗೆ ದೇವೇಗೌಡರ ದೈತ್ಯ ಕೃಷಿ ಮಾರ್ಕೆಟ್ಟಿನ ಕನ[...] ಮಣ್ಣುಗೂಡಿಸಿ ಇಡೀ ಭೂಸ್ವಾಧೀನ ಪ್ರಕ್ರಿಯೆಯ[...] ಅಸಿಂಧುಗೊಳಿಸುವ ಕಾರಸ್ಥಾನಕ್ಕೆ ಚಾಲನೆ ಸಿಕ್ಕಂತಾಯಿ[...] 400 ಎಕರೆ ಅಂದಾಜಿನ 356 ಎಕರೆಗಳಷ್ಟು ಸರ್ಕಾ[...] ಭೂಮಿಯಲ್ಲಿ ತಲೆ ಎತ್ತಬೇಕಿದ್ದ ಮೆಗಾ ಮಾರ್ಕೆಟ್ ಅ[...] ಕೇವಲ 69 ಎಕರೆಗೆ ಕುಗ್ಗಿಸಲಾಯಿತು. ಅದರಲ್ಲಿ [...] ಎಕರೆ ಮಾತ್ರವನ್ನೇ ಬಳಸಿ 241 ಮಳಿಗೆಗಳನ್ನು ನಿರ್ಮಿ[...]ಲಾಯಿತು. ಉಳಿಕೆ 32 ಎಕರೆಯನ್ನು ಖಾಲಿ ಬಿಡಲಾಯ[...] ಈ ರೀತಿ 241 ಮಳಿಗೆಗಳ ನಿರ್ಮಾಣಕ್ಕೊಂ[...] ಎಪಿಎಂಸಿಯಿಂದ 10 ಕೋಟಿ ರೂಪಾಯಿಗಳನ್ನು ವ್ಯಯ[...] ಕಳಪೆ ಕಾಮಗಾರಿ, ಅಡ್ಡಾದಿಡ್ಡಿ ಮಳಿಗೆಗಳು, ಭವಿ[...] ಯೋಜನೆಯೇ ಇಲ್ಲದ ಮಾರುಕಟ್ಟೆ ನಿರ್ಮಿಸಲಾಯ[...]

ರಿಯಲ್ ಎಸ್ಟೇಟ್ ದರೋಡೆಯ ಕಾರಣಕ[...] ತಲೆಎತ್ತಿದ ಈ ಕಾಟಾಚಾರದ ಮಾರುಕಟ್ಟೆಗೆ ಹೋಲಿಸಿ[...] ಈಗಿರುವ ಯಶವಂತಪುರದ ಎಪಿಎಂಸಿ ಯಾರ್ಡೇ ಸಾ[...] ಪಾಲು ವಾಸಿ! ಈ ಪುರುಷಾರ್ಥಕ್ಕೆ ದಾಸನಪುರದ ಹ[...] ಮಾರುಕಟ್ಟೆಯ ಅಗತ್ಯವಾದರೂ ಏನಿತ್ತು?

225 ಎಕರೆ ಲೂಟಿ

ಈಗ ತಲೆ ಎತ್ತಿರುವ ಹೊಸ ಮಾರುಕಟ್ಟೆಯ ದುರ[...]



ನೂತನ ಎಪಿಎಂಸಿ ಯಾರ್ಡ್



ಕಣ್ಣಾ ಸಿಟಿ



ಹಳೆ ಎಪಿಎಂಸಿ ಯಾರ್ಡ್

ದೇವೇಗೌಡರ ಕನಸು!

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಏನೆಲ್ಲ ಡಿನೋಟಿಫಿಕೇಷನ್‌ಗಳಾದವೋ ಅವುಗಳ ಸಾಲಿಗೆ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯ ಮತ್ತಹಳ್ಳಿ, ಹುಸ್ಕೂರು, ಪಿಲ್ಲಹಳ್ಳಿ ಮತ್ತು ವಡೇರಹಳ್ಳಿ ಗ್ರಾಮಗಳಿಗೆ ಸೇರಿದ 227 ಎಕರೆ ಸರ್ಕಾರಿ ಭೂಮಿಯೂ ಸೇರುತ್ತದೆ. ಅದು ತಂದೆ ದೇವೇಗೌಡರು ಅಖಂಡ ಏಷ್ಯಾದಲ್ಲೇ ಬೃಹತ್ತಾದ ಮೆಗಾ ಮಾರ್ಕೆಟ್ಟಿನ ರೈತನ ಪಾಲಿನ ಭೂಮಿ!

ಬೆಂಗಳೂರು ಬೆಳೆದು ಯಶವಂತಪುರದ ಎಪಿಎಂಸಿ ಯಾರ್ಡ್ ಅಂದರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಳಿಗೆ ಸಂಕೀರ್ಣ ಇಕ್ಕಟ್ಟಾಗುತ್ತಿದ್ದಂತೆಯೇ 1995ರಲ್ಲಿ ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ಬೆಂಗಳೂರಿನ ಹೊರವಲಯದಲ್ಲಿ ಬೃಹತ್ ಕೃಷಿ ಮಾರ್ಕೆಟ್ ಯಾರ್ಡ್ ಒಂದನ್ನು ಸ್ಥಾಪಿಸುವ ಘೋಷಣೆ ಮಾಡಿಬಿಟ್ಟರು. ರಿಂಗ್‌ರೋಡ್, ಪೆರಿಫೆರಲ್ ರೋಡ್‌ಗಳನ್ನೆಲ್ಲ ದಾಟಿ ಬೆಂಗಳೂರು ಹೊರವಲಯದಲ್ಲೇ ದೈತ್ಯ ಮಾರುಕಟ್ಟೆ ಸಂಕೀರ್ಣ ಸ್ಥಾಪನೆಯಾಯಿತೆಂದರೆ ಗ್ರಾಮೀಣ ಭಾಗದ ರೈತರಿಗೆಲ್ಲ ಯಶವಂತಪುರಕ್ಕೆ ಬರುವ ತಾಪತ್ರಯ ತಪ್ಪುತ್ತದೆ. ಲಾರಿ ಬಾಡಿಗೆಯೂ ಸೇರಿದಂತೆ ಪ್ರತಿ ಲೋಡು ಕೃಷಿ ಉತ್ಪನ್ನವನ್ನು ನೆಲಮಂಗಲದಿಂದ ಯಶವಂತಪುರ ಯಾರ್ಡಿಗೆ ಸಾಗಿಸುವಲ್ಲಿ ತಗಲುವ 3 ಸಾವಿರ ರೂಪಾಯಿ ರೈತನಿಗೆ ಉಳಿತಾಯವಾಯಿತೆಂದರೆ ಅದು ಸಣ್ಣ ಸಂಗತಿಯೇನಲ್ಲ.

ಇದನ್ನೆಲ್ಲ ಮನಗಂಡೇ ಬೃಹತ್ ಕೃಷಿ ಮಾರುಕಟ್ಟೆಯ ಘೋಷಣೆ ಮಾಡಿದ್ದ ದೇವೇಗೌಡರ ಯೋಜನೆಗೆ ಜೀವ ಬಂದಿದ್ದು 1998ರಲ್ಲಿ. ಕಂದಾಯ ಇಲಾಖೆ, ಸಹಕಾರ ಇಲಾಖೆ, ಕೃಷಿ ಮಾರುಕಟ್ಟೆ ಇಲಾಖೆಗಳ ಜಂಟಿ ನಿರ್ದೇಶನದ ಮೇರೆಗೆ 400 ಎಕರೆಗಳ ವಿಸ್ತೀರ್ಣದ ಮೆಗಾ ಮಾರ್ಕೆಟ್ ಯೋಜನೆ ರೂಪುಗೊಂಡಿತು. ಅದಕ್ಕೆಂದು ತುಮಕೂರು ರಸ್ತೆಯ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿಯ ಹೊನ್ನಸಂದ್ರ, ಪಿಳ್ಳಹಳ್ಳಿ, ವಡೇರಹಳ್ಳಿ, ಮುತ್ತಹಳ್ಳಿ, ಶೀಹಗಿರಿಪಾಳ್ಯ ಗ್ರಾಮಗಳಲ್ಲಿನ 168.27 ಎಕರೆ

ಮಾರ್ಚ್ 20ರಂದು ಚೊರುಪಾರು ಭೂಮಿಯನ್ನು ಕೈಬಿಟ್ಟು ಒಟ್ಟು 185.12 ಎಕರೆಗಳಷ್ಟು ರೈತರ ಭೂಮಿಯನ್ನು ಕಂದಾಯ ಸಚಿವಾಲಯದ ಮೂಲಕ ಇದೇ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗಳು ಕಲಂ 6(1) ಅಂತಿಮ ಅಧಿಸೂಚನೆಯನ್ನು ಹೊರಡಿಸಿಬಿಟ್ಟರು.

ಅಲ್ಲಿಗೆ ಒಟ್ಟು 354 ಎಕರೆ ಭೂಮಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದೈತ್ಯ ಯಾರ್ಡ್‌ಗೆಂದು ಲಭ್ಯವಾದಂತಾಗಿತ್ತು. ಈ ಪ್ರಕಾರವೇ ಅಲ್ಲಿ ಬೃಹತ್ ಮಾರುಕಟ್ಟೆ ನಿರ್ಮಾಣಗೊಂಡಿದ್ದರೆ ಅದು ಕೇವಲ ದೇಶದಲ್ಲಷ್ಟೇ ಅಲ್ಲ ಇಡೀ ಏಷ್ಯಾ ಖಂಡಕ್ಕೇ ವಿಶಿಷ್ಟ ಮತ್ತು ವಿನೂತನ ಕೃಷಿ ಮಾರುಕಟ್ಟೆಯಾಗುತ್ತಿತ್ತು. ಆದರೆ ಹಾಗಾಗಲಿಲ್ಲ.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದೇ ತಡ ಅವರ ಜಂಟಿ ಭಾಗೀದಾರ ಬಿಜೆಪಿಯ ರಿಯಲ್ ಎಸ್ಟೇಟ್ ಖದೀಮರ ಗುಂಪೊಂದು ಇಡೀ ಮಾರುಕಟ್ಟೆಯ ಕನಸಿಗೇ ಕೊಳ್ಳಿಯಿಡುವ ಷಡ್ಯಂತ್ರ ರೂಪಿಸಿತ್ತು. ಮಲ್ಲೇಶ್ವರದ ಶಾಸಕ ಅಶ್ವತ್‌ನಾರಾಯಣ, ಅವರ ರಿಯಲ್ ಎಸ್ಟೇಟ್ ಪಾರ್ಟನರ್ ಮತ್ತು ಕಾಡು ಮಲ್ಲೇಶ್ವರ ವಾರ್ಡಿನ ಬಿಬಿಎಂಪಿ ಕೌನ್ಸಿಲರ್ ಮಂಜುನಾಥ್ ರಾಜು, ಕುಖ್ಯಾತ ಕಣ್ಣಾ ಡೆವಲಪರ್ಸ್ ಧಣಿ ನಂಜುಂಡಯ್ಯ, ಕುಮಾರಣ್ಣನ ಪರಮಾಪ್ತ ಮುಂಗಾರು ಮಳೆ ಕೃಷ್ಣಪ್ಪ, ಆಗ ಕೃಷಿ ಮಾರುಕಟ್ಟೆ ಮಂತ್ರಿಯಾಗಿದ್ದ ತಂಗಡಗಿ ಮತ್ತು ಸಾರಿಗೆ ಮಂತ್ರಿಯಾಗಿದ್ದ ಚಲುವರಾಯಸ್ವಾಮಿಯ ಖಾಸಾ ಅಣ್ಣ ಲಕ್ಷ್ಮಿಕಾಂತ್ ಜೊತೆಗೆ ಕಂದಾಯ ಮಂತ್ರಿಯಾಗಿದ್ದ ಜಗದೀಶ್ ಶೆಟ್ಟರ್ ತಮ್ಮ ಪ್ರದೀಪ್ ಶೆಟ್ಟರ್ ಸೇರಿದಂತೆ ಬಲಾಢ್ಯರ ಹಿಂಡೇ ಕೃಷಿ ಮಾರುಕಟ್ಟೆಯ ಭೂಮಿಗೆ ನಾಲಿಗೆ ಚಾಚಿತ್ತು.

ಶೆಟ್ಟರ್ ಷಡ್ಯಂತ್ರ

ಕಾಯ್ದೆ ಪ್ರಕಾರ ಒಮ್ಮೆ 6(1) ಅಧಿಸೂಚನೆಗೊಳಪಟ್ಟ ಯಾವ ಭೂಮಿಯನ್ನು ಸರ್ಕಾರವಾಗಲಿ, ಸಚಿವ ಸಂಪುಟವಾಗಲಿ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟೇ ಸ್ಪಷ್ಟ ತೀರ್ಪಿತ್ತಿದೆ. ಹಾಗಿದ್ದೂ ಕೃಷಿ ಮಾರುಕಟ್ಟೆಗೆಂದು ಸ್ವಾಧೀನಗೊಂಡಿದ್ದ ಜಮೀನಿನಲ್ಲಿ

ಪ್ರಭುತ್ವ ಪತನಗೊಂಡು ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದೇ ಇಡೀ ಮಾರ್ಕೆಟ್ ಯಾರ್ಡಿನ ಯೋಜನೆಯನ್ನೇ ಅಪ್ರಸ್ತುತಗೊಳಿಸಿ ಮಾರುಕಟ್ಟೆಗೆ ಈಪಾಟಿ ಭೂಮಿಯೇ ಅಗತ್ಯವಿಲ್ಲವೆಂದೂ, ಅನಗತ್ಯವಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಕೂಡದೆಂದೂ ತಕರಾರು ಹುಟ್ಟು ಹಾಕಲಾಯಿತು.

ಇ.ಕೆ. ಎಂಟ್ರಿ

ಇಂಥ ರಿಯಲ್ ಎಸ್ಟೇಟ್ ಷಡ್ಯಂತ್ರದ ಫಲವಾಗೇ ನೆಲಗಳ್ಳರೆಲ್ಲ ಪರಸ್ಪರ ಕೈಮಿಲಾಯಿಸಿ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಇ.ಕೆ. ಅಲಿಯಾಸ್ ಮುಂಗಾರು ಮಳೆ ಕೃಷ್ಣಪ್ಪನನ್ನು ಅಧ್ಯಕ್ಷಗಾದಿಗೆ ತಂದರು. 2007ರ ಸೆಪ್ಟೆಂಬರ್ 20ರಂದು ನಡೆದ ಎಪಿಎಂಸಿ ಚುನಾವಣೆಯಲ್ಲಿ ರೈತರ ವಿರೋಧವನ್ನು ಲೆಕ್ಕಿಸದೇ ಗೆದ್ದು ಅಧ್ಯಕ್ಷನಾದ ಮುಂಗಾರು ಮಳೆ ಕೃಷ್ಣಪ್ಪ ಮಾಡಿದ ಮೊದಲ ಕೆಲಸವೇ ಹೊಸ ಮಾರುಕಟ್ಟೆಯ ರೂಪುರೇಷೆಯನ್ನು ಬದಲಾಯಿಸಿದ್ದು!

2008ರ ಮೇ 20ರಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸರ್ವ ಸದಸ್ಯರ ಸಭೆ ಕರೆದ ಮುಂಗಾರು ಮಳೆ ಕೃಷ್ಣಪ್ಪ ಮೆಗಾ ಮಾರ್ಕೆಟ್ಟಿಗೆ ಇಷ್ಟೊಂದು ಭೂಮಿಯ ಅಗತ್ಯವೇ ಇಲ್ಲವೆಂದೂ ಇದಕ್ಕೊಂದು ಸಮಿತಿಯಿಂದ ಠೇವಣಿಯಿಟ್ಟಿದ್ದ 13 ಕೋಟಿಯಷ್ಟನ್ನು ವಾಪಸ್ಸು ಪಡೆಯುವಂತೆಯೂ ನಿರ್ಣಯ ಮಂಡಿಸಿದರು. ಆವತ್ತು ಸಮಿತಿಗೆ ಆಯ್ಕೆಯಾಗಿದ್ದ ಮನೋಹರ್, ಅಬ್ಬಯ್ಯಣ್ಣ, ಕೆಂಚಪ್ಪ ರಾಜಗೋಪಾಲ್, ಶಿವಣ್ಣ ಮಾದೇವಯ್ಯ, ಆಂಜನಪ್ಪ ಮುಂತಾದವರೆಲ್ಲರೂ ರಿಯಲ್ ಎಸ್ಟೇಟ್ ಖದೀಮರೇ. ಚಲುವರಾಯಸ್ವಾಮಿಯ ಅಣ್ಣ ಲಕ್ಷ್ಮಿಕಾಂತ್‌ನನ್ನು ಜೊತೆ ಹಾಕಿಕೊಂಡು ಮುಂಗಾರು ಮಳೆಯ ಕೃಷ್ಣಪ್ಪನ ಮೂಲಕ ಇವರೆಲ್ಲರಿಗೂ ತಲಾ ಒಂದೊಂದು ಕೋಟಿಯಷ್ಟು ಕಮೀಷನ್ ಮೊತ್ತವನ್ನು ಆಂಧ್ರಾ ಮೂಲದ ಕಂಟ್ರಾಕ್ಟರ್ ರವಿಕುಮಾರ್‌ರೆಡ್ಡಿ ತಲುಪಿಸಿದ್ದ!

ಕಂಡ ವ್ಯಾಪಾರಿಗಳ್ಯಾರೂ ಅತ್ತ ತಲೆ ಹಾಕುತ್ತಿಲ್ಲ. [...] ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದ 356 ಎಕರೆಗಳ [...] ಅಂತಿಮವಾಗಿ ಹಸ್ತಾಂತರಗೊಂಡಿದ್ದು 296 ಎಕರೆ ಮ[...] ಈ ಪೈಕಿ 69 ಎಕರೆಗೆ ಕಾಂಪೌಂಡು ಬಿದ್ದಿದೆ. ಉ[...] 225 ಎಕರೆಗಳಲ್ಲಿ 150 ಎಕರೆಗಳಲ್ಲಿ ಕಣ್ಣಾ ಗಾಡ[...] ಸಿಟಿ ಲೇಔಟು ತಲೆ ಎತ್ತಿದೆ. ಇದಲ್ಲದೆ ಭೂಸ್ವಾ[...]ಗೊಂಡಿದ್ದ ಭೂಮಿಯ ಮತ್ತೊಂದು ಭಾಗದಲ್ಲಿ ಮಲ್ಲೇ[...] ಶಾಸಕ ಅಶ್ವತ್ಥ್ ನಾರಾಯಣ ಮತ್ತು ಕಾಡು ಮಲ್ಲೇ[...] ವಾರ್ಡಿನ ಕೌನ್ಸಿಲರ್ ಮಂಜುನಾಥ್ ರಾಜು ಪಾ[...]ದಾರಿಕೆಯ ಮತ್ತೊಂದು ಲೇಔಟ್ ಎಲೆ ಎತ್ತಿದೆ. ಮುಂ[...] ಮಳೆ ಕೃಷ್ಣಪ್ಪನ ಇ.ಕೆ. ಎನ್‌ಕ್ಲೇವ್, ಜಗದೀಶ್ ಶೆ[...] ತಮ್ಮ ಪ್ರದೀಪ್ ಶೆಟ್ಟರ್‌ನ 25 ಎಕರೆಗಳ ಇನ್ನೊ[...] ಲೇಔಟ್, ಮಾಜಿ ಕೃಷಿ ಮಾರುಕಟ್ಟೆ ಮಂತ್ರಿ ಶಿವ[...] ತಂಗಡಗಿಯ ಬೇನಾಮೀ ಫ್ಲಾಟ್‌ಗಳೆಲ್ಲ ಕೃಷಿ ಮಾರು[...]ಯಿಂದ ಕಬಳಿಸಿದ ಜಮೀನಿನಲ್ಲಿ ತಲೆಎತ್ತಿದೆ.

ಪ್ರಶ್ನೆಯೆಂದರೆ ಒಮ್ಮೆ ಭೂಸ್ವಾಧೀನಗೊಂಡು [...] ಅಂತಿಮ ಅಧಿಸೂಚನೆಯಾದ ಮೇಲೂ ಸಕ[...] ಜಮೀನೆಂದು ಪರಿಗಣಿಸಲ್ಪಟ್ಟ 225 ಎಕರೆ ಭೂಮಿ[...] ಖಾಸಗಿ ಲೇಔಟುಗಳು ತಲೆಎತ್ತಿದ್ದಾದರೂ ಹೇಗೆ? ಶ[...] ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಇ[...] ಡಿನೋಟಿಫಿಕೇಷನ್ ನಡೆದಿದೆಯೇ? ಅಥವಾ ಕುಮಾರ[...] ಮುಖ್ಯಮಂತ್ರಿಯಾಗಿದ್ದಾಗ ಮಾರುಕಟ್ಟೆಯ ಗಾತ್ರ ತ[...] ಮೂಲಕ ಈ ಪ್ರಕ್ರಿಯೆಗೆ ಚಾಲನೆ ಸಿಕ್ತೆ? ಇ[...]ಯಡ್ಡಿ ಸರ್ಕಾರದ ಪಾತ್ರವೇನು? ಮಾಜಿ ಕೃಷಿ ಮಾರ[...] ಮಂತ್ರಿ ಶಿವರಾಜ್ ತಂಗಡಗಿಗೆ ಸಿಕ್ಕ ಕಮೀಷನ್ ಎ[...] ಈ ಬಗ್ಗೆ ಮಾಹಿತಿ ಕೋರಿದ ಯಾವ ಅರ್ಜಿಯ[...] ಅಧಿಕಾರಿಗಳು ಮನ್ನಿಸುತ್ತಿಲ್ಲ ಏಕೆ?


ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಲಿ. ಲಕ್ಷ[...] ರೈತರ ಜೀವನಾಡಿಯಾದ ಬೃಹತ್ ಮಾರುಕಟ್ಟೆಯ ನೂ[...] ಎಕರೆಗಳನ್ನು ದೋಚಿದ ಜೆಡಿಎಸ್-ಬಿಜೆಪಿ ಖದೀಮ[...] ಜೈಲು ಕಾಯಮ್ಮಾಗಲಿ.

■ ರಾ.ಸೋಮನಾ[...]

ದಲಿತ ಹಕ್ಕುಗಳ ಬಗ್ಗೆ ದುಂಡುಮೇಜಿನ ಸಭೆ

ಹಾಸನ ನಗರದಲ್ಲಿ 2013 ರ ಅಕ್ಟೋಬರ್ 27 ರಂದು ದಲಿತ ಹಕ್ಕುಗಳ ಸಮಿತಿ-ಸಿಪಿಐ (ಎಂ)ನ ವತಿಯಿಂದ 'ದುಂಡುಮೇಜಿನ ಸಭೆಯನ್ನು' ಆಯೋಜಿಸಲಾಗಿತ್ತು. ಅಸ್ಪೃಶ್ಯತೆ, ಜಾತಿ ತಾರತಮ್ಯ, ಪಂಕ್ತಿ ಭೇದ, ಮಡೆಸ್ನಾನ, ಸಾಮಾಜಿಕ ತಾರತಮ್ಯಗಳ ಕುರಿತು ಆ ಸಭೆಯಲ್ಲಿ ಚರ್ಚೆ ನಡೆಸಲು ಉದ್ದೇಶಿಸಲಾಗಿತ್ತು. 2013 ರ ಡಿಸೆಂಬರ್ 8 ರಿಂದ ದಲಿತ ಹಕ್ಕುಗಳ ಸಮಿತಿಯು ನಡೆಸಲು ಉದ್ದೇಶಿಸಿರುವ ಎರಡು ದಿನಗಳ ಅಹೋರಾತ್ರಿ ಸಾಮೂಹಿಕ ಧರಣಿಯ ಹಿನ್ನೆಲೆಯಲ್ಲಿ ಜಿಲ್ಲೆಯ ಅನೇಕ ಪ್ರಗತಿಪರ ಸಂಘ, ಸಂಸ್ಥೆ ಮತ್ತು ವ್ಯಕ್ತಿಗಳನ್ನು ಈ ಸಂವಾದದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿತ್ತು.

ಈ ಬಗ್ಗೆ ದಲಿತರ ಕಷ್ಟ-ನಷ್ಟಗಳಿಗೆ ಸ್ಪಂದಿಸುವ ಪರಿಹಾರ ಸೂಚಿಸುವಂತಹ ಜವಾಬ್ದಾರಿ ಆ ಸಮುದಾಯದ ಹೊಣೆಗಾರಿಕೆ ಮಾತ್ರ ಎಂದು ಭಾವಿಸಿದ್ದಲ್ಲಿ ಅದು ತೀರಾ ಸಂಕುಚಿತವಾದ ಮತ್ತು ಅನಾಗರಿಕವಾದ ಅಭಿಪ್ರಾಯವಾಗುತ್ತದೆ. ಬದಲಿಗೆ ಅದು ಇಡೀ ಸಮಾಜದ ಹೊಣೆಗಾರಿಕೆಯಾಗಿದೆ.



ದಲಿತ ಸಮುದಾಯದ ಮೇಲೆ ಮತ್ತು ದಲಿತ ಮಹಿಳೆಯರ ಮೇಲೆ ನಡೆಯುವ ಅನ್ಯಾಯ ಮತ್ತು ಹಿಂಸೆಯ ಬಗ್ಗೆ ಇಡೀ ಸಮಾಜದ ದಿವ್ಯ ನಿರ್ಲಕ್ಷ್ಯವಿದೆ. ಬದ್ಧತೆಯನ್ನು ಹೊಂದಿರುವ ಕೆಲವೇ ಕೆಲವು ಮಂದಿಯನ್ನು ಬಿಟ್ಟರೆ ಉಳಿದವರು ಯಾರು ಕೂಡ ಈ ಬಗ್ಗೆ ಪ್ರತಿಕ್ರಿಯೆಯನ್ನು ಸೂಚಿಸುತ್ತಿಲ್ಲ.

ಮೌಢ್ಯವನ್ನು ಮತ್ತು ಮೂಢನಂಬಿಕೆಗಳನ್ನು ಬಿತ್ತುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಇವುಗಳ ವಿರುದ್ಧ ಸಶಕ್ತ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಹಾಗೂ ಸಾಮಾಜಿಕ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಸಮೂಹ ಮಾಧ್ಯಮಗಳನ್ನು ಸಕ್ರಿಯವಾಗಿ ಬಳಸಿಕೊಳ್ಳಬೇಕಾಗಿದೆ. ಸಮಾಜದ ಮನಃಪರಿವರ್ತನೆ ಮಾಡುವಂತಹ ಕ್ರಿಯೆಯು ಒಂದು ದಿನದ ಕಾರ್ಯಕ್ರಮವಾಗಬಾರದು ಬದಲಿಗೆ ಆ ಸದುದ್ದೇಶದ ಕಾರ್ಯಕ್ರಮದಲ್ಲಿ ನಿರಂತರತೆ ಇದ್ದಾಗ ಮಾತ್ರ ಸಫಲತೆಯನ್ನು ಕಾಣಲು ಸಾಧ್ಯ. ಆ ಮೂಲಕ ಶೋಷಕ ಶಕ್ತಿಗಳು ಮತ್ತು ಶೋಷಿತರು ಉಭಯತ್ರರ ನಡುವೆ ವಿಚಾರವನ್ನು ಮಂಡಿಸುವುದರ ಮೂಲಕ ಒಂದು ವಿಶಿಷ್ಟ ಬಾಂಧವ್ಯವನ್ನು ಮೂಡಿಸಬೇಕಾಗುತ್ತದೆ ಹಾಗೂ ಈ ಕೆಲಸವನ್ನು ಅತ್ಯಂತ ಪ್ರೀತಿಯಿಂದ ಮಾಡಬೇಕಾಗುತ್ತದೆ.

ಮಹಿಳೆಯರ ಸಮಸ್ಯೆಗಳಿಗೆ ವಿಶೇಷ ಆದ್ಯತೆಯನ್ನೇ ನೀಡಬೇಕಾಗುತ್ತದೆ ಹಾಗೂ ತುಂಬಾ ಸೂಕ್ಷ್ಮವಾಗಿ ಅವಲೋಕಿಸಬೇಕಾಗುತ್ತದೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಲೈಂಗಿಕ ಕಾರ್ಯಕರ್ತೆಯರನ್ನು ದಾಖಲಿಸುವ ಕಾರ್ಯಕ್ರಮ ನಡೆಯುತ್ತಿದೆ. ಆಕೆಗೆ ಪುನರ್ವಸತಿಯನ್ನು ಕಲ್ಪಿಸುವ ದೃಷ್ಟಿಯಿಂದ ಈ ಸರ್ವೆ ನಡೆಯುತ್ತಿದೆ. ಆತಂಕದ ಸಂಗತಿಯೆಂದರೆ ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ಜಾಗತೀಕರಣದ ದೆಸೆಯಿಂದ ಭರಾಟೆಯಿಂದ ಸಾಗುತ್ತಿರುವ ನಗರೀಕರಣದ ಕ್ರಿಯೆಯಿಂದ ಈ ಸಾಮಾಜಿಕ ಅನಿಷ್ಟಗಳು ಹೆಚ್ಚಾಗುತ್ತಿವೆ. ಬಾಲ್ಯವಿವಾಹ ಕೂಡ ಹೆಚ್ಚಿಗೆ ನಡೆಯುತ್ತಿದೆ.

ಮಾಧ್ಯಮದಲ್ಲಿ ದಿನನಿತ್ಯ ಪ್ರಸಾರಗೊಳ್ಳುವ ಶಾಸ್ತ್ರ ಭವಿಷ್ಯ ಮೊದಲಾದವುಗಳನ್ನು ಕೇಳಿಸಿಕೊಂಡಲ್ಲಿ ಕೌಟುಂಬಿಕ ಬದುಕುಗಳು ಛಿದ್ರವಾಗುತ್ತಿವೆ. ಈ ಅನಿಷ್ಟ ಅನಾಚಾರಗಳನ್ನು ನಾವು ಮೂಕವಾಗಿ ನೋಡುವಂತಹ ದುರವಸ್ಥೆ ಬಂದೊದಗಿದೆ. ಸೌಜನ್ಯಾಳ ಕೊಲೆ ಪ್ರಕರಣ ನಡೆಯುವುದಕ್ಕಿಂತಲೂ ಮೊದಲು ಧರ್ಮಸ್ಥಳದಲ್ಲಿ ಅನೇಕ ಕೊಲೆಗಳು ನಡೆದಿರುವ ಬಗ್ಗೆ ಬಹುತೇಕ ಪತ್ರಿಕೆಯಲ್ಲಿ ವರದಿಯಾಗಿದೆ. ಮಡೆಸ್ನಾನದಂತಹ ದುರಂತಗಳ ವಿರುದ್ಧ ಸಾಮೂಹಿಕವಾಗಿ ಕಾರ್ಯಕ್ರಮವನ್ನು ರೂಪಿಸಿ ಧರಣಿ ನಡೆಸಬೇಕು ಮತ್ತು ಆ ಹೋರಾಟದಲ್ಲಿ ನಿರಂತರತೆಯನ್ನು ಕಾಯ್ದು ಕೊಳ್ಳಬೇಕು. ಈ ನಾಡಿನ ವಿದ್ಯಾವಂತ ಸಮುದಾಯವೇ ಜಾತಿಪದ್ಧತಿಯನ್ನು ಜೀವಂತವಾಗಿ ಇಟ್ಟಿದೆ. ಎಲ್ಲಾ ಪ್ರಗತಿಪರ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ಒಟ್ಟುಗೂಡುವ ಅವಶ್ಯಕತೆ ಇದೆ. ಇತಿಹಾಸದ ಕಾಲಗತಿಯಲ್ಲಿ ಪ್ರಗತಿಪರ ಶಕ್ತಿಗಳಿಗೆ ಕೆಲವು ಮಿತಿಗಳು ಏರ್ಪಟ್ಟವು ಬಹುಶಃ ಆ ಮಿತಿಗಳನ್ನು ಮೀರಿ ಈಗ ನಾವೆಲ್ಲರೂ ಒಂದಾಗುವ ಕಾಲ ಬಂದಿದೆ. ಈ ನಿಟ್ಟಿನಲ್ಲಿ ನಮ್ಮ ನಾಡಿನ ಎಲ್ಲಾ ಸಮಸ್ಯೆಗಳನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಪರಿಗಣಿಸಿ, ಒಂದು ಜಂಟಿ ಹೋರಾಟವನ್ನು ಹಮ್ಮಿಕೊಳ್ಳುವಲ್ಲಿ ಸೂಕ್ತ ಪ್ರಣಾಳಿಕೆಯನ್ನು ರೂಪಿಸುವ ಅಗತ್ಯವಿದೆ. ನಮ್ಮ ನೈಸರ್ಗಿಕ ಸಂಪನ್ಮೂಲಗಳ ಅಪವ್ಯಯವನ್ನು ಕೂಡ ತಡೆಗಟ್ಟಬೇಕಾಗಿದೆ. ವೈಚಾರಿಕ ಆಧಾರಿತವಾದ ಹೋರಾಟವನ್ನು ಹಮ್ಮಿಕೊಂಡಲ್ಲಿ ಅರ್ಥಪೂರ್ಣವಾದ ಕ್ರಿಯೆಯಾದಂತೆ. ರಾಷ್ಟ್ರದ ಮತ್ತು ರಾಜ್ಯದ ಸಮಸ್ಯೆಗಳ ಜೊತೆಯಲ್ಲಿ ಜಿಲ್ಲೆಯ ಅನೇಕ ಸಮಸ್ಯೆಗಳು ಕೂಡ ಇವೆ. ಅವುಗಳ ಬಗ್ಗೆ ಕೂಡಾ ಗಮನವನ್ನು ಕೇಂದ್ರೀಕರಿಸಬೇಕು.

ಮೀಸಲಾತಿ ಎಂಬ ವಿಷಯ ಬಂದಕೂಡಲೇ ದಲಿತರನ್ನು ಹೊರತು ಪಡಿಸಿ ಎಲ್ಲರೂ ಒಟ್ಟಾಗುತ್ತಾರೆ. ಈ ತಪ್ಪು ತಿಳಿವಳಿಕೆ ನಿವಾರಿಸುವ ಸಲುವಾಗಿ ಗ್ರಾಮ ವಾಸ್ತವ್ಯವನ್ನು ಮಾಡಿ ಜನರಲ್ಲಿ ವಿಚಾರವನ್ನು ಬಿತ್ತುವಂತಹ ಕಾರ್ಯಕ್ರಮವನ್ನು ರೂಪಿಸಬೇಕು. ಹಾಗೂ ಶಿಕ್ಷಕರು ಸಾಮಾಜಿಕ ಮೌಲ್ಯಗಳ ಬಗ್ಗೆ ವಿಚಾರವನ್ನು ಹರಡುವಲ್ಲಿ ಪ್ರಮುಖ ಮಾಧ್ಯಮವಾಗುತ್ತಾರೆ. ಹೀಗಾಗಿ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕಾರ್ಯತಂತ್ರವನ್ನು ಅನುಸರಿಸಬಹುದು. ಸುಬ್ರಮಣ್ಯದಲ್ಲಿ ಮಡೆಸ್ನಾನದಂತಹ ಆಚರಣೆ ನಡೆಯುತ್ತಿದ್ದಾಗ ಅರಕಲಗೂಡಿನ ದೇವಸ್ಥಾನದಲ್ಲಿ ಕೂಡ ಮಡೆಸ್ನಾನದ ಆಚರಣೆ ನಡೆಯಿತು ಎಂಬುದು ಬೆಳಕಿಗೆ ಬಂದಿದೆ. ಇಂತಹ ಅನಾಗರಿಕ ವರ್ತನೆಗಳನ್ನು ಪ್ರಶ್ನೆ ಮಾಡುವುದರ ಮೂಲಕ ವ್ಯಕ್ತಿಗಳ ನಡುವೆ ಅಸಮಾನ ಬಿತ್ತುತ್ತಿರುವುದನ್ನು ಖಂಡಿಸಬೇಕಾಗಿದೆ.

ಆರ್ಥಿಕವಾಗಿ ಸದೃಢವಾದ ದಲಿತರು ಹಿಂದೂ ಧರ್ಮದ ಆಚರಣೆಗಳನ್ನೇ ಬಲವಾಗಿ ಅಪ್ಪಿಕೊಳ್ಳುತ್ತಿರುವ ಹಿನ್ನೆಲೆಯಾದರು ಏನು? ಎಲ್ಲಿಯವರೆಗೆ ಹಳ್ಳಿಗಳು ಇರುತ್ತವೆಯೋ ಅಸ್ಪೃಶ್ಯತೆ ಹೋಗುವುದಿಲ್ಲ, ಹಳ್ಳಿಗಳು ಜಾತಿಕೂಪಗಳಾಗಿವೆ ಎಂಬುದು ಹಿಂದಿನ ಮಾತಾಯಿತು. ಇಂದು ನಗರಗಳಲ್ಲಿ ಜಾತಿಯಾಧಾರಿತ ಟೌನ್‌ಶಿಪ್‌ಗಳು ತಲೆ ಎತ್ತುತ್ತಿವೆ. ಅಸ್ಪೃಶ್ಯತೆಯು ಆಚರಣೆಯು ಒಂದು ಬಹಿರಂಗ ಆಚರಣೆಯ ಮೂಲಕ ಪ್ರಕಟಗೊಳ್ಳುತ್ತದೆ ಇನ್ನೊಂದು ಆಂತರಿಕ ಆಚರಣೆಯ ಮೂಲಕ ಗುಪ್ತಗಾಮಿನಿಯಾಗಿ ನಿರಂತರತೆಯನ್ನು ಕಾಯ್ದುಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವೇ ಇಲ್ಲವೇನೋ ಎಂಬ ನಿರುತ್ಸಾಹವು ಮೂಡುತ್ತದೆ. ಆದರೆ ಅಸ್ಪೃಶ್ಯತೆಯನ್ನು ಎದುರಿಸುವಂತಹ ತಿಳಿವಳಿಕೆ ಮತ್ತು ಆರ್ಥಿಕ ಸಾಮರ್ಥ್ಯದ ಅಗತ್ಯವಿದೆ. ಆದ್ದರಿಂದ ಶೋಷಿತರು ಈ ಎರಡು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಕ್ರಿಯರಾಗಬೇಕು.


ದಲಿತರ ಸಂಪನ್ಮೂಲಗಳಿಗೆ ಶೋಷಕ ಶಕ್ತಿಗಳು ಹಾನಿಯನ್ನು ಉಂಟುಮಾಡಿದಾಗ, ಅವರಿಗೆ ಬೇರೆ ಯಾವ ನೆರವು ಕೂಡಾ ಸಿಗುವುದಿಲ್ಲ ಅವರುಗಳು ಸರ್ಕಾರದ ನೆರವನ್ನೇ ಎದುರು ನೋಡಬೇಕಾಗುತ್ತದೆ. ಆದರೆ, ಇಂದು ದಲಿತರ ಮೇಲೆ ನಡೆಯುವಂತಹ ದೈಹಿಕ, ಮಾನಸಿಕ ಮತ್ತು ಆರ್ಥಿಕ ಹಾನಿಯನ್ನು ಎದುರಿಸುವ ದಿಕ್ಕಿನಲ್ಲಿ ಕೇವಲ ಕ್ರಿಮಿನಲ್ ಕಾನೂನಿನ ನೆರವನ್ನು ಪಡೆದರೆ ಸಾಲದು. ಬದಲಿಗೆ ಅಂತಹ ಕ್ರೌರ್ಯವನ್ನು ಎಸಗಿದವರ ವಿರುದ್ಧ ಸಿವಿಲ್ ಪರಿಹಾರಗಳನ್ನು ಆರ್ಥಿಕವಾಗಿ ಪಡೆಯುವಂತಹ ಕಾನೂನು ಕೂಡಾ ಜಾರಿಯಾಗಬೇಕಾಗುತ್ತದೆ. ದಲಿತರು ಮತ್ತು ದಲಿತ ಹೋರಾಟಗಾರರಿಗೆ ಕಾನೂನಿನ ಅರಿವು ಮೂಡಿಸಬೇಕಾದ ಅಗತ್ಯವಿದೆ. ದಲಿತರ ವಿರುದ್ಧ ನಡೆಯುವ ಹಿಂಸೆಯನ್ನು ತಡೆಯುವ ಸಲುವಾಗಿ ಹೊಸ ಕಾನೂನು ರೂಪಿಸಬೇಕು ಮತ್ತು ಅದನ್ನು ಕಠಿಣವಾಗಿ ಜಾರಿಗೊಳಿಸುವ ವ್ಯವಸ್ಥೆಯು ಮೂಡಬೇಕು.

ಹಾಸನದಲ್ಲಿ ನಡೆದ ಸಭೆಯಲ್ಲಿ ವ್ಯಕ್ತವಾದ ಈ ಅಭಿಪ್ರಾಯಗಳು, ಭಾಷೆ, ನಿಲುವುಗಳು, ಒಳನೋಟಗಳು, ಅಸಹಾಯಕತೆ, ಆಕ್ರೋಶ ಮೊದಲಾದವುಗಳನ್ನು ನೋಡಿದಾಗ ಎಂಭತ್ತರ ದಶಕದ ಚಳವಳಿಗಳ ದಿನಗಳು ನೆನಪಿಗೆ ಬರುತ್ತದೆ. ಅಸಹಾಯಕತೆಯೇ ಮೇರೆ ಮೀರಿದಾಗ ಕಾಲಗರ್ಭದಲ್ಲಿ ಚಳವಳಿಯ ಕಾವು ಮೂಡುವುದು ಮತ್ತು ಇತಿಹಾಸದ ಚಕ್ರವು ಒಂದು ಸುತ್ತು ಪೂರೈಸುವ ಪರಿಭ್ರಮಣವು ಮುಂದೆ ಯಾವ ಸಾಮಾಜಿಕ ಹೋರಾಟಗಳಿಗೆ ಜನ್ಮ ನೀಡುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಬಯಸುವ ಶಕ್ತಿಗಳು ತಮ್ಮ ಎಲ್ಲಾ ಅಹಂಗಳ ನೆರಳಿನಲ್ಲಿಯೇ ಒಂದುಗೂಡುವ ಕಾಲ ಸಮೀಪಿಸುತ್ತಿದೆಯೇ?

■ ಬಾನು ಮುಷ್ತಾಕ್

ಒಂದು ಪ್ರತಿಕ್ರಿಯೆ

ಸರಿಸುಮಾರು 9 ವರ್ಷಗಳಿಂದ ನಿಮ್ಮ ಪತ್ರಿಕೆಯ ಓದುಗನಾಗಿರುವ ನಾನು, ನಿಮ್ಮಿಂದ ಡಾ. ವಿಷ್ಣು ಅವರ ಬಗ್ಗೆ ಈ ತರಹದೊಂದು ಲೇಖನವನ್ನು ನಿರೀಕ್ಷಿಸಿರಲಿಲ್ಲ. ಪ್ರಜಾ ಪ್ರಭುತ್ವದಲ್ಲಿ ಎಲ್ಲರಿಗೂ ಅವರದೇ ಆದಂತಹ ಹಕ್ಕುಗಳಿವೆ. ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕೂ ಸಹ ಅವುಗಳಲ್ಲಿ ಒಂದು. ಆದರೆ ಡಾ. ವಿಷ್ಣು ಅವರಂತಹ ಮೇರು ಕಲಾವಿದನ ಬಗ್ಗೆ ಬರೆಯುವಾಗ (ದಿನಾಂಕ ಸೆಪ್ಟೆಂಬರ್ 25, 2013ರ ಸಂಚಿಕೆ) ನೀವು ಬಳಸಿದ ಭಾಷೆ ಮತ್ತು ಮಾಡಿದ ಹೋಲಿಕೆಗಳು ಪತ್ರಿಕೆಯ ಘನತೆಗೆ ತಕ್ಕುದಾದದಲ್ಲ.



ರಾಜ್ ಮತ್ತು ವಿಷ್ಣುವಿನ ನಡುವಿನ ಹೋಲಿಕೆಯೇ ತಪ್ಪು. ಇಬ್ಬರೂ ಅವರದೇ ಹಾದಿಗಳಲ್ಲಿ ಅಪಾರ ಸಾಧನೆ ಮಾಡಿದಂತಹವರು. ಕನ್ನಡ ಚಿತ್ರರಂಗಕ್ಕೆ ಎರಡು ಕಣ್ಣು - ಒಂದು ರಾಜ್ ಆದರೆ ಮತ್ತೊಂದು ವಿಷ್ಣು ಎಂಬಷ್ಟರಮಟ್ಟಿಗೆ ಬೆಳೆದರು. ರಾಜ್‌ಗೆ ತಾನು ಸಮ ಎಂದು ವಿಷ್ಣು ಯಾವತ್ತೂ ಭಾವಿಸಲಿಲ್ಲ. ರಾಜ್ ಬಗ್ಗೆ ಅಪಾರವಾದ ಗೌರವವನ್ನು ತಮ್ಮ ಕೊನೆ ಉಸಿರಿನ ತನಕವೂ ಹೊಂದಿದ್ದರು.

ಡಾ. ವಿಷ್ಣುವಿಗೇ ರಾಜ್‌ಗೆ ತಾನು ಸಮನಲ್ಲ ಎಂಬ ಭಾವ ಇರುವಾಗ, ರಾ. ಸೋಮನಾಥ್ ವಿನಾಕಾರಣ ಅವರನ್ನು ಹೋಲಿಸಿ ಬರೆದದ್ದು ಯಾವ ಪುರುಷಾರ್ಥಕ್ಕಾಗಿ? ರಾಜ್ ಸಾಧನೆ ಒಂದು ರೀತಿಯಾದರೆ, ವಿಷ್ಣು ಸಾಧನೆ ಮತ್ತೊಂದು ತರ. ಆದರೆ ಅವರಿಬ್ಬರ ಸಾಧನೆಗಳು ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸಹಕಾರಿಯಾದವು.

ಇದೇ ವಿಷಯವನ್ನು ಪಾರ್ವತೀಶ್ ಬಿಳಿ ಪ್ರಸ್ತಾಪಿಸಲು ಬಂದಾಗ, ನಮ್ಮ ಭಾವನೆಗಳಿಗೆ ಅವರು ಗೌರವ ಕೊಡಲಿಲ್ಲ. ಅಭಿಮಾನಿಗಳ ಅಭಿಮಾನವನ್ನು ಅರಿಯದೇ, ಅವರನ್ನು ತರ್ಕ ತಿಳಿಯದ ಆವೇಶದ ವ್ಯಕ್ತಿಗಳು ಎಂಬಂತೆ ಚಿತ್ರಿಸಿದ್ದಾರೆ.

'ವಿಷ್ಣು ಅಭಿಮಾನಿಗಳ ಜೊತೆ ರಸಸಂಜೆ' ಎಂಬ ನಿಮ್ಮ ಟೈಟಲ್ಲೇ ತೋರಿಸುತ್ತದೆ ನೀವು ನಮ್ಮ ಬಗ್ಗೆ ಎಷ್ಟು ಹಗುರವಾದ ಭಾವನೆಯನ್ನು ಹೊಂದಿದ್ದೀರಿ ಎಂಬುದು.

ಡಾ. ವಿಷ್ಣುವಿನ ಮನೆಯೊಂದು ಮಿನಿಭಾರತ ಎನ್ನುವ ನೀವೇ ವಿಷ್ಣುವನ್ನು ಬ್ರಾಹ್ಮಣ ಕಲಾವಿದ ಎಂದು ಬರೆಯಲು ಹೇಗೆ ಸಾಧ್ಯವಾಯಿತು? ಇನ್ನು ವಿನಾಕಾರಣ ಅನಿರುದ್ಧ್ ಅವರನ್ನು ಈ ವಿಷಯದಲ್ಲಿ ಎಳೆದು ತಂದಿರುವಿರಿ. ಇದಕ್ಕೂ ಅನಿರುದ್ಧ ಅವರಿಗೆ ಯಾವುದೇ ಸಂಬಂಧವಿಲ್ಲ. ನಿಮ್ಮ ಪತ್ರಿಕೆಯ ಲೇಖನದ ಬಗ್ಗೆ ನಾನು ಅನಿರುದ್ಧ್ ಅವರ ಗಮನಕ್ಕೆ ತಂದಾಗ ಅವರು ಹೇಳಿದ್ದಿಷ್ಟು "ಇದು ಪ್ರಜಾಪ್ರಭುತ್ವ, ಇಲ್ಲಿ ಎಲ್ಲರಿಗೂ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕಿದೆ, ಅದನ್ನು ಗೌರವಿಸಿ" ಎಂದು. ಆದರೆ ನೀವು ಅವರನ್ನು ಬಾಲನಟ, RSS ಎಂದು ಏನೇನೋ ಹೇಳಿರುವಿರಿ. ಸತ್ಯಾಸತ್ಯತೆ ತಿಳಿಯದೆ ಏಕಪಕ್ಷೀಯ ನಿರ್ಧಾರ ಕೈಗೊಂಡು, ಆಪಾದನೆ ಮಾಡಿದ ನಿಮ್ಮನ್ನು ನಾವು ಸರ್ವಾಧಿಕಾರಿ ಮನೋಭಾವದವರು ಎಂದರೆ ದಯಮಾಡಿ ಕೋಪ ಮಾಡಿಕೊಳ್ಳಬೇಡಿ.


ಈಗಲೂ ಅಷ್ಟೇ, ಅಭಿಮಾನಿಗಳು ಏನು ಹೇಳ್ತಾರೆ ಗೊತ್ತಾ? ಒಂದು ವೇಳೆ ಸರ್ಕಾರದಿಂದ ವಿಷ್ಣು ಸ್ಮಾರಕ ನಿರ್ಮಾಣ ಅಸಾಧ್ಯವಾದರೆ, ನಾವುಗಳೇ ಕೈಲಾದಷ್ಟು ಹಣ ಸಂಗ್ರಹಿಸಿ, ಸ್ಮಾರಕ ಕಟ್ಟಿಸ್ತೀವಿ ಎಂದು. ಹೇಳಿ ಇಂತಹ ಅಭಿಮಾನಕ್ಕೆ ಸರಿಸಾಟಿಯುಂಟೆ!!

ಧನ್ಯವಾದಗಳೊಂದಿಗೆ,

\- ವೀರಶಪುತ್ರ ಶ್ರೀನಿವಾಸ್

ಕನಕಪುರದಲ್ಲೊಬ್ಬ ಕೆಟ್ಟ ಶಿಕ್ಷಕ

ಸರ್ಕಾರಿ ಶಾಲೆಯ ಶಿಕ್ಷಕನೊಬ್ಬ ಅಶ್ಲೀಲ ಸೀಡಿಗಳನ್ನು ಊರು ತುಂಬ ದೇವರ ಪ್ರಸಾದ ಹಂಚುವಷ್ಟೇ ಸಲೀಸಾಗಿ ಹಂಚಲು ಹೋಗಿ ಈಗ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.



ಕನಕಪುರದ ಕಡವೆಕೆರೆ ದೊಡ್ಡಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿದ್ದ ಚಂದ್ರಶೇಖರಯ್ಯ ಈ ಚಾಳಿ ತೋರಿಸಿ ಅರೆಸ್ಟಾಗಿರುವ ಕೆಟ್ಟ ಶಿಕ್ಷಕ. ಮೂಲತಃ ದೊಡ್ಡಬಳ್ಳಾಪುರ ತಾಲ್ಲೂಕಿನ ಕಾಳೀನಹಳ್ಳಿಯವನಾದ ಚಂದ್ರಶೇಖರ್ ತನ್ನ ಸರ್ಕಾರಿ ಉದ್ಯೋಗದೊಂದಿಗೆ ಕನಕಪುರ ಟೌನಿನ ಎ.ವಿ.ಆರ್. ರಸ್ತೆಯಲ್ಲಿ 'ಚಾಂಪಿಯನ್ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಅಂಡ್ ಸ್ಮಾರ್ಟ್ ಸಲ್ಯೂಷನ್' ಎಂಬ ಕಂಪ್ಯೂಟರ್ ಸೆಂಟರ್ ಅನ್ನು ನಡೆಸುತ್ತಿದ್ದ. ಸರ್ಕಾರಿ ನೌಕರರಾದವರು ಯಾವುದೇ ರೀತಿಯ ಬ್ಯುಸಿನೆಸ್ ಗಳಲ್ಲಿ ನೇರವಾಗಿ ಭಾಗಿಯಾಗಕೂಡದೆಂಬ ನಿಯಮವಿದೆಯಾದರೂ ಕನಕಪುರದ ಬಿಇಓ ಆ ಬಗ್ಗೆ ಯಾಕೆ ಗಮನ ಹರಿಸಲಿಲ್ಲವೆಂಬ ಪ್ರಶ್ನೆಯನ್ನೂ ಈಗ ಕೇಳಬೇಕಿದೆ.

ಈ ಚಂದ್ರಶೇಖರ್ ನೆಟ್ಟಗೆ ತನ್ನ ಟೀಚರ್ ಕೆಲಸ ಮಾಡುವುದು ಬಿಟ್ಟು ಹಗಲು ಮೂರೊತ್ತು ತನ್ನ ಕಂಪ್ಯೂಟರ್ ಸೆಂಟರ್‌ನಲ್ಲೇ ಕೂತಿರುತ್ತಿದ್ದ. ಅಲ್ಲಿಗೆ ಕಲಿಯಲು ಬರುತ್ತಿದ್ದ ಹುಡುಗಿಯರ ಪೈಕಿ ಕೊಂಚ ದುರ್ಬಲ ಮನಸ್ಸಿನವರನ್ನು ಹುಡುಕಿ ಮಾತಿಗೆಳೆಯುತ್ತಾ ನಂತರ ನಿಧಾನಕ್ಕೆ ಅವರನ್ನು ತನ್ನ ತೀಟೆಗಳಿಗೆ ಬಳಸಿದ್ದಾನೆ. ಇಷ್ಟೇ ಅಲ್ಲದೆ ತಾಲ್ಲೂಕಿನ ಕೆಲವು ಶಿಕ್ಷಕಿಯರನ್ನು ಈ ನೀಚ ಚಂದ್ರಶೇಖರ ನಂಬಿಸಿ ವಂಚಿಸಿದ್ದಾನೆ. ಇಂತವರ ಪೈಕಿ ಕೆಲವರೊಂದಿಗೆ ಸ್ವತಃ ಚಂದ್ರಶೇಖರನೇ ಲಲ್ಲೆಗರೆಯುತ್ತಾ ಅಸಹ್ಯಕರವಾಗಿ ವರ್ತಿಸಿರುವುದನ್ನು ತಾನೇ ಮೊಬೈಲ್‌ನಲ್ಲಿ ವೀಡಿಯೋ ರೆಕಾರ್ಡ್ ಮಾಡಿಕೊಂಡು ಅನಂತರ ಅವೆಲ್ಲವನ್ನು ಸೀಡಿ ಮಾಡಿಕೊಂಡಿದ್ದ. ಇಂತಹ ಸುಮಾರು 70 ಸೀಡಿಗಳು ಅವನ ಹತ್ತಿರ ಸಿಕ್ಕಿವೆ. ಅವಿವಾಹಿತನಾಗಿದ್ದ ಚಂದ್ರಶೇಖರ್ "ನನಗೆ ಮದುವೆ ಅಂದ್ರೆ ಇಷ್ಟಾನೇ ಇಲ್ಲ" ಎಂದು ಹೋದಲೆಲ್ಲಾ ಬಂದಲ್ಲೆಲ್ಲಾ ಬೊಗಳುತ್ತಿದ್ದ. ಕನಕಪುರದ ಜನರಿಗೆ ಅವನ ಮಾತಿನ ಮರ್ಮ ಈಗ ಅರ್ಥವಾಗಿ ಚಂದ್ರಶೇಖರನನ್ನು ಹಿಡಿದು ಒದ್ದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಆದರೆ ಆಶ್ಚರ್ಯ ಏನೆಂದರೆ ಕನಕಪುರ ಪೊಲೀಸರು ಅಕ್ಟೋಬರ್ 25 ರ ಶುಕ್ರವಾರವೇ ಚಂದ್ರಶೇಖರನನ್ನು ಹಿಡಿದಿದ್ದರೂ 28 ನೇ ತಾರೀಖಿನವರೆಗೂ ಅವನನ್ನು ಅರೆಸ್ಟ್ ಮಾಡಿದ್ದೇವೆಂದು ಹೇಳಿರಲಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ದೇಗೌಡರು ಮತ್ತವರ ಪೊಲೀಸ್ ಸಿಬ್ಬಂದಿ ಆ ಸೀಡಿಗಳನ್ನು ನೋಡಿಕೊಂಡು ನಾಲ್ಕು ದಿನ ಸುಮ್ಮನೆ ಕುಳಿತಿದ್ದರಾ ಏನು? ಎಂದು ಜನ ಅನುಮಾನ ಪಡುತ್ತಿದ್ದಾಗಲೇ ಕೊನೆಗೆ ಅವನ ಅರೆಸ್ಟ್ ತೀರ್ಮಾನವಾಗಿದೆ.

ಮತ್ತೊಂದೆಡೆ ಸರ್ಕಾರಿ ನೌಕರನೊಬ್ಬ ಕ್ರಿಮಿನಲ್ ಕೇಸ್‌ನಲ್ಲಿ ಸಿಕ್ಕಿಬಿದ್ದು ಅರೆಸ್ಟಾಗಿ ಒಂದು ದಿನ ಜೈಲಿಗೆ ಹೋದರೂ ಅಂತವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕೆಂಬ ಕಾನೂನಿದ್ದರೂ ತಾಲ್ಲೂಕು ಬಿಇಓ ಏನೂ ಕ್ರಮ ವಹಿಸದೆ ನಿಧಾನ ಮಾಡುತ್ತಿರುವುದು ಯಾಕೆಂಬ ಅನುಮಾನ ಮೂಡಿಸುತ್ತಿದೆ.

ಚಂದ್ರಶೇಖರನ ಈ ಹಲ್ಕಟ್ ಕೆಲಸದಲ್ಲಿ ಅವನ ಕೆಲವು ಆಪ್ತ ಗೆಳೆಯರೂ ಭಾಗಿಯಾಗಿರುವ ಸಾಧ್ಯತೆಯಿದ್ದು ಪೊಲೀಸರು ಅದನ್ನೂ ಗಮನಿಸಲಿ. ಹತ್ತಾರು ಹೆಣ್ಣುಮಕ್ಕಳ ಜೀವನ ಹಾಳು ಮಾಡಿರುವ ಚಂದ್ರಶೇಖರನ ಅಶ್ಲೀಲ ಸೀಡಿ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ ಸರಿಯಾಗಿ ತನಿಖೆ ಮಾಡದಿದ್ದರೆ ಪ್ರತಿಭಟಿಸಲು ಕೆಲವು ಜನಪರ ಸಂಘಟನೆಗಳು ತಯಾರಾಗುತ್ತಿವೆ.

ಕನಕಪುರ ಪೊಲೀಸರು ಇನ್ನಾದರೂ ಎಚ್ಚರಗೊಳ್ಳಲಿ. ■

'ಪೇಜಾವರ ದುರಹಂಕಾರಿ'

ಕಾಗಿನೆಲೆ ಪೀಠದ ನಿರಂಜನಪುರಿಸ್ವಾಮಿಯವರ ಸಂದರ್ಶನ

ಉಡುಪಿಯ ಮಾಧ್ವ ಬ್ರಾಹ್ಮಣ ಮಠಾಧೀಶ ಪೇಜಾವರ ಯಾವ ಹೊತ್ತಿನಲ್ಲಿ ಏನು 'ತೀರ್ಥ' ಕುಡಿದು ಬಂದಿದ್ದಾರೋ ಏನೋ ಇತ್ತೀಚೆಗೆ ಬಾಯಿಗೆ ಬಂದಂತೆ ಮಾತನಾಡಲು ಶುರು ಮಾಡಿದ್ದಾರೆ.

"ಕನಕದಾಸ ಹರಿಯ ಗುಲಾಮನಾಗಿದ್ದ, ಹಾಗಾಗಿ ಕನಕನ ಆರಾಧಕರಾದ ಕುರುಬ ಜನಾಂಗದವರಿಗೂ ನಾನು ವೈಷ್ಣವ ದೀಕ್ಷೆ ಕೊಡಲು ಸಿದ್ಧ" ಎಂದರು ಒಮ್ಮೆ.

ಸಹಜವಾಗಿಯೇ ಇದು ವಿವಾದದ ಕಿಡಿ ಎಬ್ಬಿಸಿತು. ಇದರ ತೀವ್ರತೆ ನೋಡಿ ಬೆಚ್ಚಿಬಿದ್ದ ಪೇಜಾವರ ತಮ್ಮ ಜನಿವಾರ ಸವರಿಕೊಳ್ಳುತ್ತಾ "ನಾನು ಅಂದಿದ್ದು ಹಾಗಲ್ಲ" ಅಂದರು. ಅಷ್ಟಕ್ಕೆ ಸುಮ್ಮನಾಗದೆ "ಉಡುಪಿಯಲ್ಲಿ ಕನಕ ಗೋಪುರ ಅಂತ ಯಾವುದೂ ಇರಲೇ ಇಲ್ಲ" ಎಂದು ಇನ್ನೊಂದು ಪಟಾಕಿ ಹಚ್ಚಿ ಪರಾರಿಯಾದರು. ಇದರಿಂದ ಕೆರಳಿದ ಆಹಿಂದ ವರ್ಗಗಳು "ಹಾಗೋ ಉಡುಪಿ ಚಲೋ ಮಾಡಿ ಅಲ್ಲಿಗೇ ಬರ್ತೀವಿ ನೋಡೇಬಿಡೋಣ" ಅಂತ ಸವಾಲಿನ ಸರಪಟಾಕಿ ಶುರುಮಾಡಿದಾಗ ಪೇಜಾವರರದ್ದು ಪುನಃ "ನಾನು ಹೇಳಿದ್ದು ಹಾಗಲ್ಲ" ಎನ್ನುವ ಠುಸ್ ಪಟಾಕಿ.

ಇದೆಲ್ಲಾ ಗದ್ದಲ ನಡೆಯುತ್ತಿದ್ದಾಗಲೇ ಅದೇ ಪೇಜಾವರ ಎಂಬ ಚಿನಕುರುಳಿ ಪಟಾಕಿಯು ಈಗ "ಬಸವಣ್ಣ ಜಾತಿವಾದಿಯಾಗಿದ್ದ" ಎಂದು ಅಸಂಬದ್ಧ ಮಾತಾಡಿದ್ದಾರೆ. ಹೊಟ್ಟೆಗೆ ಅನ್ನ ತಿನ್ನುವವರಿಗೆ ಬಸವಣ್ಣ ಅರ್ಥವಾಗಬಹುದೇ ವಿನಃ ಕಸ ತಿನ್ನುವವರಿಗಲ್ಲ. ಈ ಮಾತು ಬಸವಣ್ಣನ ತತ್ವಗಳನ್ನು ನಂಬುವವರಿಗೆ ಘಾಸಿ ಮಾಡುವಂತದ್ದು. ಇಲ್ಲಿ ಪೇಜಾವರ ಒಂದು ವಿಚಾರವನ್ನು ಅರ್ಥಮಾಡಿಕೊಳ್ಳಬೇಕು.

ಅವರ 'ಬ್ರಾಹ್ಮಣ್ಯ'ದ ದುರಹಂಕಾರ ಇನ್ನು ಮುಂದೆ ನಡೆಯುವುದಿಲ್ಲ. ಅವರು ಹೀಗೆಯೇ ಅಸಂಬದ್ಧ ಮಾತಾಡುತ್ತಾ ಮುಂದುವರೆದರೆ ಅವೆಲ್ಲಾ ಕರ್ನಾಟಕದಲ್ಲಿ ಬ್ರಾಹ್ಮಣ್ಯ ಹಾಗೂ ಹಿಂದೂ ಕೋಮುವಾದ ವಿರುದ್ಧ ಹೊಸ ಹೋರಾಟ ಸಮೀಕರಣಕ್ಕೆ ಪ್ರೇರಣೆ ನೀಡುವುದು ಖಚಿತ.

ಪೇಜಾವರರ ಕೀಳುಮಟ್ಟದ ಹೇಳಿಕೆಗಳ ಬಗ್ಗೆ ನಮ್ಮ ವರದಿಗಾರ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರು ಕಾಗಿನೆಲೆ ಪೀಠಾಧ್ಯಕ್ಷರಾದ ನಿರ್ಮಲಾನಂದಪುರಿ ಸ್ವಾಮಿ ಹಾಗೂ ಕರ್ನಾಟಕ ಕುರುಬರ ಪ್ರದೇಶ ಸಂಘದ ಅಧ್ಯಕ್ಷ ಕೃಷ್ಣಮೂರ್ತಿಯವರ ಸಂದರ್ಶನವನ್ನು ಮಾಡಿದ್ದು ಇಲ್ಲಿ ಪ್ರಕಟಿಸಿದ್ದೇವೆ.



ಪ್ರಶ್ನೆ : *ಪೇಜಾವರರು ಕುರುಬರಿಗೆ ವೈಷ್ಣವ ದೀಕ್ಷೆ ಕೊಡುವುದಾಗಿ ಹೇಳಿದ್ದನ್ನು ತಾವು ಹೇಗೆ ಅರ್ಥೈಸುತ್ತೀರಿ?*

ಸ್ವಾಮೀಜಿ: ಇಂದಿಗೂ ತಮ್ಮ ಗುಲಾಮಗಿರಿಯಲ್ಲೇ ಸಮಾಜ ಇರಬೇಕು, ತಾವು ಹೇಳಿದಂತೆಯೇ ಕೇಳಬೇಕು ಎಂದು ಬಯಸುವ ದುರಹಂಕಾರದ ಹೇಳಿಕೆ ಅದು. ಇಂಥಾ ಹೇಳಿಕೆಗಳನ್ನು ನಾವು ತಿರಸ್ಕರಿಸಬೇಕಾಗಿದೆ. ಸಾವಿರಾರು ವರ್ಷಗಳಿಂದ ತಮ್ಮ ಶ್ರೇಷ್ಠತೆಯನ್ನು ಮೆರೆದ ಇವರು ಈ ಆಧುನಿಕ ಕಾಲದಲ್ಲೂ ಅದೇ ಪ್ರಯತ್ನ ಮುಂದುವರೆಸಿರುವುದು ಅತ್ಯಂತ ಖಂಡನೀಯ. 21ನೇ ಶತಮಾನದಲ್ಲೂ ಇಂಥಾ ದಾರ್ಷ್ಟ್ಯದ ಹೇಳಿಕೆ ನೀಡುತ್ತಿದ್ದಾರೆಂದರೆ ಈ ಹಿಂದೆ ಇವರು ಯಾವ ರೀತಿ ದಬ್ಬಾಳಿಕೆ ನಡೆಸಿರಬಹುದು ಎಂಬುದನ್ನು ಊಹಿಸಬಹುದು.

ಇಷ್ಟಕ್ಕೂ ಇವರ ದೀಕ್ಷೆ ಯಾರಿಗೆ ಬೇಕಾಗಿದೆ? ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ಆಚಾರವಿಚಾರಗಳಿರುತ್ತವೆ. ಪೀಠಾಧಿಪತಿ ಎನಿಸಿಕೊಂಡವರಿಗೆ ಅವುಗಳನ್ನು ಗೌರವಿಸುವ ಮನಸ್ಥಿತಿ ಇರಬೇಕು. ತಾವು ಮಾತ್ರ ಶ್ರೇಷ್ಠ ಎಂಬ ಸಂಕುಚಿತ ಮನೋಭಾವವನ್ನು ಬಿಡಬೇಕು.

ಪ್ರಶ್ನೆ : *ಪೇಜಾವರರು ಹೀಗೆ ಮಾತಾಡಲು ಕಾರಣ ಏನಿರಬಹುದು?*

ಸ್ವಾಮೀಜಿ: ಪೇಜಾವರರು ತಾವಾಗಿಯೇ ಹೇಳಿಕೆ ಕೊಟ್ಟಿಲ್ಲ; ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ್ದು ಅಷ್ಟೆ ಅಂತಾ ನಂತರ ಸಮಜಾಯಿಷಿ ನೀಡಿದ್ದಾರೆ. ಆದರೆ ಅವರ ಹೇಳಿಕೆಗೆ ನಾಡಿನಾದ್ಯಂತ ವಿಚಾರವಂತರು, ಸಾಹಿತಿಗಳು, ಚಿಂತಕರು ತಕ್ಕ ಉತ್ತರ ಕೊಟ್ಟಿದ್ದರು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಇನ್ನು ಪೇಜಾವರರಿಗೆ ಆಗಾಗ ಇಂಥಾ ಮಾತುಗಳನ್ನಾಡುವುದು ಒಂದು ಹವ್ಯಾಸದಂತಾಗಿದೆ. ಇದನ್ನು ಇನ್ನೊಂದು ರೀತಿಯಲ್ಲೂ ನೋಡಬಹುದು. ಇದು ಮಾರುಕಟ್ಟೆ ಯುಗ. ತಮ್ಮ ಸರಕಿಗೆ, ಗಿರಾಕಿಗಳು ಕಡಿಮೆಯಾದಾಗ ಗಿರಾಕಿಗಳನ್ನು ಸೆಳೆಯಲು ವ್ಯಾಪಾರಿಗಳು ಹೊಸ ಹೊಸ ಆಫರ್‌ಗಳನ್ನು ಕೊಡುತ್ತಾರೆ ನೋಡಿ; ಇವರು ಕೂಡ ಅಂಥಾ ತಂತ್ರ ಮಾಡುತ್ತಿದ್ದಾರೇನೋ ಎಂಬ ಅನುಮಾನ ಬರುತ್ತದೆ. ಆದರೆ ಸಮಾಜದಲ್ಲಿ ಜಾಗೃತಿ ಮೂಡುತ್ತಿದೆ. ಇವರು ದೀಕ್ಷೆ ಕೊಡ್ತೀವಿ ಅಂದಾಕ್ಷಣ 'ನಮಗೆ ಕೊಡಿ, ನಮಗೆ ಕೊಡಿ' ಅಂತಾ ಇವರ ಬಾಗಿಲಲ್ಲಿ ಕುರುಬ ಸಮುದಾಯದವರಾಗಲಿ, ಇನ್ನಿತರರಾಗಲಿ ಯಾರೂ ಸಾಲುಗಟ್ಟಿ ನಿಂತಿಲ್ಲವಲ್ಲ? ಇವರ ಅಪ್ರಸ್ತುತತೆಗೆ ಬೇರೆ ಯಾವ ಸಾಕ್ಷ್ಯ ಬೇಕು?

ಪ್ರಶ್ನೆ : *ಪೇಜಾವರ ಸ್ವಾಮಿಯವರಿಗೆ ಹಾಲುಮತ ದೀಕ್ಷೆ ಕೊಡುವುದಾಗಿ ನೀವು ಹೇಳಿದ್ದೀರಲ್ಲಾ?*

ಸ್ವಾಮೀಜಿ: ದೀಕ್ಷೆ ಕೊಡಲು ಈಗಲೂ ಸಿದ್ಧ; ಆದರೆ ಅವರ ಮಾಧ್ವ ಪಂಥವನ್ನು ತ್ಯಜಿಸಿ ಬಂದರೆ ಮಾತ್ರ. ಕುರುಹಿಕೆಯಲ್ಲಿ ದೇವರನ್ನು ಕಂಡುಕೊಂಡ ಪರಂಪರೆ ನಮ್ಮದು. ಭಾರತದ ಮೂಲನಿವಾಸಿಗಳಲ್ಲಿ ಕುರುಬ ಸಮುದಾಯವೂ ಒಂದು. ರೇವಣ್ಣಸಿದ್ಧ, ಬೀರಲಿಂಗ, ಮೈಲಾರಲಿಂಗ, ಸಜ್ಜನ ಗುಡ್ಡದ ಶರಣಮ್ಮ, ಕಾಳಿದಾಸ, ಕನಕದಾಸ ಮುಂತಾದ ಅನೇಕ ಶ್ರೇಷ್ಠ ಗುರುಗಳ, ದಾರ್ಶನಿಕರ ಪರಂಪರೆ ನಮಗಿದೆ.

ಪ್ರಶ್ನೆ : *ಕನಕದಾಸರ ಬಗ್ಗೆ ಪೇಜಾವರರಿಗೆ ಗೌರವವಿದೆ ಎಂದು ನೀವು ಭಾವಿಸುತ್ತೀರಾ?*

ಸ್ವಾಮೀಜಿ: ಇವರು ಮಧ್ವಾಚಾರ್ಯರನ್ನು ಬಿಟ್ಟರೆ ಅದೇ ವೈಷ್ಣವ ಪಂಥದ ರಾಮಾನುಜರನ್ನೇ ಒಪ್ಪುವುದಿಲ್ಲ, ಹೀಗಿರುವಾಗ ಕನಕದಾಸರನ್ನು ಹೇಗೆ ಒಪ್ಪುತ್ತಾರೆ ಹೇಳಿ. ಅವರನ್ನು ಹತ್ತಿರ ಬಿಟ್ಟುಕೊಳ್ಳಲಿಕ್ಕೇ ತಯಾರಿಲ್ಲದ ಮಂದಿ ದೀಕ್ಷೆ ಕೊಡುವ ಮಾತೆಲ್ಲಿಂದ ಬಂತು? ವ್ಯಾಸಕೂಟಕ್ಕೆ ಬಂದ ಕನಕದಾಸರನ್ನು ಉದ್ದೇಶಿಸಿ "ಕುರುಬನಿಗೇಕೆ ಕೋಣನ ಮಂತ್ರ" ಅಂತ ಜರೆದು ಹೀಯಾಳಿಸಿದ್ದು ಇವರ ಇತಿಹಾಸ. ವಾಸ್ತವ ಹೀಗಿದ್ದರೂ ಕನಕದಾಸರು ವೈಷ್ಣವ ದೀಕ್ಷೆ ಪಡೆದಿದ್ದರು ಅಂತ ಬೊಗಳೆ ಬಿಡುತ್ತಿರುವುದು ವಿಪರ್ಯಾಸದ ಸಂಗತಿ.

ಕನಕದಾಸರು ಹರಿ-ಹರರನ್ನು ಸಮಾನವಾಗಿ ಪೂಜಿಸಿದವರು. "ವಿಷ್ಣುಭಕ್ತನಾದ ನಾನು ಶಿವನ ಧ್ಯಾನ ಮಾಡದಿದ್ದರೆ ಆದಿಕೇಶವನ ಪಾದವಾಣೆ" ಎಂಬ ಮಾತೇ ಇದಕ್ಕೆ ಸಾಕ್ಷಿ. ಕುಲ-ಮತ ಭೇದಭಾವಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿ ಮಾನವತಾವಾದವನ್ನು ಬೋಧಿಸಿದ ದಾರ್ಶನಿಕ ಕನಕದಾಸರನ್ನು ತಮ್ಮ ಒಂದು ಸಂಕುಚಿತ ಪಂಥದ ಬಂಧನದಲ್ಲಿರಿಸುವ ಹುನ್ನಾರ ಇದು.

ಪ್ರಶ್ನೆ : *ಉಡುಪಿಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಭೇದಭಾವದ ಆಚರಣೆಗಳನ್ನು ಪೇಜಾವರರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದನ್ನು ಹೇಗೆ ವಿಶ್ಲೇಷಣೆ ಮಾಡುತ್ತೀರಿ?*

ಸ್ವಾಮೀಜಿ: ನೋಡಿ, ಪ್ರತಿಯೊಂದು ಸಮಾಜದಲ್ಲೂ ನಾನಾರೀತಿಯ ಕಟ್ಟುಪಾಡುಗಳು ಇದ್ದೇಇರುತ್ತವೆ. ಆ ಕಟ್ಟುಪಾಡುಗಳನ್ನೇ ನೆಪ ಮಾಡಿಕೊಂಡು ಸಮಾಜದ ಇತರೆ ಸಮುದಾಯಗಳನ್ನು ತುಳಿಯುವವರು ಸ್ವಾಮೀಜಿ ಎನಿಸಿಕೊಳ್ಳುವುದಿಲ್ಲ; ಆ ಕಟ್ಟುಪಾಡುಗಳ ಮೀರಿಯೂ ಸಾಮರಸ್ಯ, ಸಹಬಾಳ್ವೆ, ಸಮಾನತೆಗಳನ್ನು ಆಚರಿಸುವುದು, ಬೋಧಿಸುವುದು ಸ್ವಾಮೀಜಿಗಳೆನಿಸಿಕೊಂಡವರ ಕರ್ತವ್ಯ.

"ದಾಸದಾಸರ ಮನೆಯ
ದಾಸಿಯ ಮಗ ನಾನು
ಮೂಕ ದಾಸ ಮರುಳದಾಸ
ಹೊಲೆಯ ದಾಸ ಮಾದಿಗ ದಾಸ
ಕುಲವಿಲ್ಲದಾ ದಾಸ ಕುರುಬ ದಾಸ" ಅಂತಾ ಕನಕದಾಸರು ಸಾರಿದ್ದಾರೆ.

"ಮಾದಾರ ಚನ್ನಯ್ಯನ ಮನೆಯ ಮಗ ನಾನು" ಅಂತ 12ನೇ ಶತಮಾನದಲ್ಲಿ ಬಸವಣ್ಣನವರು ಸಾರಿದ್ದಾರೆ. ಇಂದಿನ ನಮ್ಮ ಸಮಾಜಕ್ಕೆ ಇಂಥಾ ಚಿಂತನೆಗಳ ಅವಶ್ಯಕತೆಯಿದೆ. ಇದು ಬಿಟ್ಟು ಅನಿಷ್ಟ ಆಚರಣೆಗಳನ್ನು ಆಚರಿಸುತ್ತಾ ಅವುಗಳನ್ನು ಸಮರ್ಥಿಸುವವರಿಗೆ ಏನು ಹೇಳಬೇಕು?

ರಾಣೆಬೆನ್ನೂರಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹೇಳಿದ್ದ ಮಾತನ್ನೇ ಪುನರುಚ್ಚರಿಸುತ್ತೇನೆ. ಕೃಷ್ಣನ ಪರಮಭಕ್ತನಾಗಿದ್ದ ಕನಕದಾಸ ಉಡುಪಿಗೆ ಬಂದಾಗ ನೀವು ಆತನನ್ನು ಗುಡಿಯೊಳಕ್ಕೆ ಬಿಡಲಿಲ್ಲ; ಪರಿಣಾಮ ಏನಾಯಿತು? ಕೃಷ್ಣ ನಿಮಗೆ ಬೆನ್ನು ತೋರಿಸಿ ತನ್ನ ಭಕ್ತ ಕನಕದಾಸನಿಗೆ ದರ್ಶನ ಕೊಟ್ಟ. ದೇವರಿಗೆ ಬೇಕಾಗಿದ್ದು ಇಷ್ಟೇ. ಡಾಂಬಿಕತೆಗಳಿಲ್ಲದ ನಿರ್ಮಲವಾದ ಭಕ್ತಿ, ಇದೆಲ್ಲಾ ನಡೆದು ಶತಮಾನಗಳು ಕಳೆದುಹೋಗಿವೆ. ನೀವು ಈಗಲಾದರೂ ಬದಲಾಗಿ, ಉದಾತ್ತ ವಿಚಾರಗಳನ್ನು ರೂಢಿಸಿಕೊಳ್ಳಿ ಎಂಬುದಷ್ಟೆ ನಮ್ಮ ಕೋರಿಕೆ.




ಪ್ರಶ್ನೆ : *ಪೇಜಾವರರ ಉಸ್ತುವಾರಿಯಲ್ಲಿ ಚಾರಿತ್ರಿಕ ಕನಕ ಗೋಪುರವನ್ನು ಕೆಡವಿಹಾಕಿದ್ದು ಯಾಕೆ?*

ಸ್ವಾಮೀಜಿ: ಇದೆಲ್ಲಾ ಕನಕದಾಸನ ಅಸ್ತಿತ್ವವನ್ನು ಅಳಿಸಿಹಾಕುವ ಹುನ್ನಾರದ ಭಾಗ. ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಿದ ಈ ಐತಿಹಾಸಿಕ ಗೋಪುರವನ್ನು ಉರುಳಿಸುವ ಜರೂರತ್ತಾದರೂ ಏನಿತ್ತು? ಕನಕನ ಕಿಂಡಿಗೆ "ನವಗ್ರಹ ಕಿಂಡಿ" ಅಂತ ಹೆಸರಿಡಬೇಕಾದ ಅವಶ್ಯಕತೆ ಏನಿತ್ತು? ಕೃಷ್ಣನೇ ಹಿಂದುಮುಂದಾಗಿ ತಿರುಗಿ ಕನಕದಾಸ ಡಾಂಬಿಕ ಭಕ್ತರಿಗಿಂತ ಶ್ರೇಷ್ಠ ಎಂಬುದನ್ನು ರುಜುವಾತು ಪಡಿಸಿದ್ದಕ್ಕೆ ದಾಖಲೆಯಾಗಿ ಕನಕನ ಕಿಂಡಿ ಅಸ್ತಿತ್ವದಲ್ಲಿತ್ತು, ಇದು ತಮ್ಮ ಶ್ರೇಷ್ಠತೆಗೆ ಧಕ್ಕೆ ತರುತ್ತದೆ ಎಂಬ ದುರಾಲೋಚನೆಯಿಂದ ಕನಕನ ಅಸ್ತಿತ್ವವನ್ನೇ ಅಳಿಸಲು ಮುಂದಾಗಿದ್ದಾರೆ. ಸಮಾಜದಿಂದ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅದರ ಪುನರ್‌ನಿರ್ಮಾಣ ನಡೆದಿದೆ ಎಂಬುದನ್ನು ನಾವು ಮರೆಯಬಾರದು.

ಪ್ರಶ್ನೆ : *ನಿಮ್ಮ ಆಚರಣೆಗಳು ಪೇಜಾವರರ ಆಚರಣೆಗಳಿಗಿಂತ ಯಾವ ರೀತಿಯಲ್ಲಿ ಭಿನ್ನವಾಗಿವೆ?*


ಸ್ವಾಮೀಜಿ: ಅವರೂ ಧರ್ಮದ ಬಗ್ಗೆ ಮಾತಾಡ್ತಾರೆ; ನಾವೂ ಧರ್ಮದ ಬಗ್ಗೆ ಮಾತಾಡ್ತೇವೆ. ಅವರೂ ಕಾವಿ



ಧರಿಸಿದ್ದಾರೆ; ನಾವೂ ಕಾವಿ ಧರಿಸಿದ್ದೇವೆ. ಹಾಗಾದರೆ ವ್ಯತ್ಯಾಸವೇನು? ಅವರು ನಮ್ಮನ್ನು ಮುಟ್ಟಿಸಿಕೊಳ್ಳುವುದಿಲ್ಲ; ನಾವು ಎಲ್ಲರನ್ನೂ ಮುಟ್ಟಿಸಿಕೊಳ್ಳುತ್ತೇವೆ. ಅವರು ಮನುಷ್ಯರಲ್ಲಿ ಮೇಲುಕೀಳು ಹುಡುಕುತ್ತಾರೆ. ನಾವು ಮನುಷ್ಯರೆಲ್ಲರೂ ಸಮಾನರು ಅಂತಾ ಭಾವಿಸುತ್ತೇವೆ.

ನಾನು ಈ ಪೀಠದ ಸ್ಥಾನವನ್ನು ಸ್ವೀಕರಿಸುವ ಸಂದರ್ಭದಲ್ಲೇ ಮಠದ ಅನುಯಾಯಿಗಳಿಗೆ ಒಂದು ಮಾತನ್ನು ಹೇಳಿದ್ದೆ. ಈ ಮಠವನ್ನು ಕುರುಬರಿಗೆ ಮಾತ್ರ ಸೀಮಿತ ಮಾಡಬೇಕು ಎಂಬುದಾದರೆ ಅದಕ್ಕೆ ನನ್ನ ಸ್ಪಷ್ಟ ವಿರೋಧವಿದೆ. ಇದು ಎಲ್ಲ ಸಮುದಾಯಗಳಿಗೂ ಸೇರಿದ ಪೀಠವಾಗಬೇಕು. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದು ನಮ್ಮ ಧ್ಯೇಯವಾಕ್ಯ.

ಪ್ರತಿವರ್ಷ ನಾವು ಗ್ರಾಮದರ್ಶನ ಕಾರ್ಯಕ್ರಮ ನಡೆಸುತ್ತೇವೆ. ಮೊದಲನೇ ದಿನದ ಭೇಟಿ ದಲಿತ ಕೇರಿಗೆ ಸೀಮಿತ. ದಲಿತ ಕೇರಿಯಲ್ಲಿರುವ ದೇವರಿಗೆ ಪೂಜೆ ಸಲ್ಲಿಸಿ,



ಕನಕದಾಸ





ಹಿಂದಿದ್ದ ಕನಕಗೋಪುರವನ್ನು ಕೆಡವುತ್ತಿರುವುದು...... ಅದರ ಜಾಗದಲ್ಲಿ ನಿರ್ಮಿಸಿರುವ ಹೊಸ ಗೋಪುರ

ಮನೆಯಲ್ಲೇ ಪ್ರಸಾದ ಸ್ವೀಕರಿಸಿದ (ಊಟ ಮಾಡಿದ) ನಮ್ಮ ಮುಂದಿನ ಕಾರ್ಯಕ್ರಮಗಳು ಶುರುವಾಗು ದಲಿತ ಕೇರಿಗೆ ಭೇಟಿ ಕೊಟ್ಟು, ಮಾಧ್ಯಮಗಳಲ್ಲಿ ಗಿಟ್ಟಿಸಿ ಮಠಕ್ಕೆ ಬಂದು ಹತ್ತಾರು ಬಕೆಟ್ ನೀರು ಕೊಳ್ಳೊದರಿಂದ ಏನು ಪ್ರಯೋಜನ ಹೇಳಿ? ...ದಾರ ಚನ್ನಯ್ಯ ಸ್ವಾಮಿಯವರಿಗೆ ಪಾದಪೂಜೆ ...ವ ಗಿಮಿಕ್ಕೂ ನಡೆದುಹೋಯಿತು. ಇಲ್ಲಿ ...ದು ಪ್ರಶ್ನೆ, ಆ ಪಾದಪೂಜೆ ಮಾಡಿದ ತಟ್ಟೆಯನ್ನು ...ಂಡಿದ್ದೀರೋ, ಬಿಸಾಕಿದ್ದೀರೋ? ಇಟ್ಟುಕೊಂಡಿ ...ದರೆ ಅದನ್ನು ಎಲ್ಲಿ ಇಟ್ಟಿದ್ದೀರಿ? ಇದು ಇಂದಿನ ಪ್ರಶ್ನೆ.

...: ಪಂಕ್ತಿಭೇದ, ಮಡೆಸ್ನಾನ ಮುಂತಾದ ಅನಿಷ್ಟ ...ಗಳನ್ನು ನೀವು ಸಮರ್ಥಿಸುತ್ತೀರಾ?

...ಮೀಜಿ: ಅವು ಅನಿಷ್ಟ ಆಚರಣೆಗಳು ಅಂದಮೇಲೆ ...ಸುವ ಮಾತೆಲ್ಲಿಯದು? ಕ್ರಮೇಣ ಜನರಲ್ಲಿ ಜಾಗೃತಿ ...ತ್ತಾ ಒಂದು ನಿರ್ದಿಷ್ಟ ವರ್ಗದ ಶ್ರೇಷ್ಠತೆಯನ್ನು ...ದ್ದಾರೆ. ಇಂಥಾ ಸನ್ನಿವೇಶದಲ್ಲಿ ತಮ್ಮ ಶ್ರೇಷ್ಠತೆಯನ್ನು ... ಹೊಸ ಹೊಸ ರೂಪಗಳಲ್ಲಿ ಇಂಥಾ ...ಗಳನ್ನು ತರುತ್ತಿದ್ದಾರೆ. ಜನರಲ್ಲಿ ಮೌಢ್ಯವನ್ನು ಬಿತ್ತಿ ...ಬೇಳೆ ಬೇಯಿಸಿಕೊಳ್ಳುವ ಈ ಹುನ್ನಾರದ ವಿರುದ್ಧ ... ಮೂಡಿಸಬೇಕು.

ಪ್ರಶ್ನೆ : ಮೌಢ್ಯದ ವಿರುದ್ಧ ಕಾನೂನು ತರಬೇಕೆಂಬ ಆಗ್ರಹ ಕೇಳಿಬರುತ್ತಿದೆಯಲ್ಲ, ಆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸ್ವಾಮೀಜಿ: ಮೌಢ್ಯದ ವಿರುದ್ಧದ ಕಾನೂನು ಆದಷ್ಟು ಬೇಗ ಆಗಬೇಕು; ಮಾತ್ರವಲ್ಲ ಅದು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ದಲಿತ, ಹಿಂದುಳಿದ ಜಾತಿಗಳಲ್ಲಿ ಮೌಢ್ಯದ ದುಷ್ಪರಿಣಾಮ ಹೆಚ್ಚಾಗಿದೆ. ಕುರುಬ ಸಮುದಾಯದಲ್ಲೂ ಮೌಢ್ಯ ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲೇ ಇದೆ. ಕೆಲ ಪಟ್ಟಭದ್ರ ಶಕ್ತಿಗಳು ಅನಾದಿ ಕಾಲಯಿಂದಲೂ ಮೌಢ್ಯವನ್ನು ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ.

ಮಾರಿ ಹಬ್ಬಗಳ ಒಂದು ಉದಾಹರಣೆಯನ್ನೇ ತೆಗೆದುಕೊಳ್ಳಿ. ಮಾರಿ ಹಬ್ಬ ಆಚರಿಸದೇ ಹೋದರೆ ಊರಿಗೆ ಕೇಡು ಉಂಟಾಗುತ್ತದೆ ಎಂದು ಸಮಾಜವನ್ನು ನಂಬಿಸಲಾಗಿದೆ. ಪ್ರತಿ ಮಾರಿಹಬ್ಬದಲ್ಲೂ ಕುರಿ ಕೋಳಿ ಕಡಿಯಲು ಸಾವಿರಾರು ರೂಪಾಯಿಗಳನ್ನು ವ್ಯಯಿಸಬೇಕಾಗುತ್ತದೆ. ಸಾಲಸೋಲ ಮಾಡಿಯಾದರೂ ಅದ್ದೂರಿ ಹಬ್ಬ ಮಾಡಬೇಕಾದ ಇಕ್ಕಟ್ಟಿನಲ್ಲಿ ಜನರು ಸಿಲುಕಿದ್ದಾರೆ. ಜನಸಾಮಾನ್ಯರು ಸಾಲಕ್ಕೆ ಬಡ್ಡಿ ಕಟ್ಟಲಾಗದೇ ಸುಸ್ತಾಗುತ್ತಾರೆ. ಆದರೆ ಅದೇ ಸಂದರ್ಭದಲ್ಲಿ ಬಡ್ಡಿ ವ್ಯಾಪಾರ ಮಾಡುವ ಮೇಲುವರ್ಗದ ಕೆಲವರಿಗೆ ಸುಗ್ಗಿಯೋ ಸುಗ್ಗಿ. ಇಂಥಾ ಅನೇಕ ಉದಾಹರಣೆಗಳನ್ನು ಕಣ್ಣಾರೆ ಕಂಡಿದ್ದೇವೆ. ಈ ಎಲ್ಲದರ ಬಗ್ಗೆ ಸಮಾಜದಲ್ಲಿ ಜಾಗೃತಿ ಮಾಡಬೇಕು.

ಪ್ರಶ್ನೆ : ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಶರಣರ ವಿಚಾರಗಳ ಬಗ್ಗೆ ತಮ್ಮ ನಿಲುವೇನು?

ಸ್ವಾಮೀಜಿ: ಅವು ಅತ್ಯಂತ ಸ್ವೀಕಾರಾರ್ಹವಾದ ವಿಚಾರಗಳು. ಅವರು ಸಹ ಮಾನವರನ್ನು ಪ್ರೀತಿಸಿ ಅಂತ ಬೋಧಿಸಿದರು; ಎಲ್ಲರಿಗೂ ದೇವರು ಒಬ್ಬನೇ ಅಂತ ಬೋಧಿಸಿದರು. ಧಾರ್ಮಿಕ ಕ್ಷೇತ್ರದಲ್ಲಿದ್ದ ಅನ್ಯಾಯ, ಅನಾಚಾರ, ಅಸಮಾನತೆಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸಿದರು. ಅವರ ವಿಚಾರಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿವೆ. ನಾವು ಅವರ ಬೋಧನೆಗಳನ್ನು ಅಳವಡಿಸಿಕೊಂಡರೆ ಮಾನವ ಧರ್ಮ ಸಾಕಾರಗೊಳ್ಳುತ್ತದೆ.

ಪ್ರಶ್ನೆ : ಪೇಜಾವರರಿಗೆ ತಮ್ಮ ಸಲಹೆ ಏನು?

ಸ್ವಾಮೀಜಿ: ಪೇಜಾವರರಲ್ಲಿ ನನ್ನ ಕೋರಿಕೆ ಇಷ್ಟೆ. ನಿಮಗೆ ನಿಜಕ್ಕೂ ಸಮಾಜಕ್ಕೆ ಏನಾದರೂ ಉತ್ತಮ ಕೊಡುಗೆ ಕೊಡುವ ಉದ್ದೇಶವಿದ್ದರೆ ದೀನದಲಿತರ ಹಿಂದುಳಿದವರ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಲು ಮುಂದಾಗಿ. ನೀವು ತಯಾರಿದ್ದರೆ, ಅವಕಾಶವಂಚಿತರಾಗಿರುವ ಉತ್ತಮ ಪ್ರತಿಭಾವಂತರಾದ ಮಕ್ಕಳನ್ನು ಆರಿಸಿ ನಿಮ್ಮಲ್ಲಿಗೆ ಕಳಿಸಿಕೊಡುತ್ತೇವೆ. ಅವರಿಗೆ ಉನ್ನತ ಶಿಕ್ಷಣ ಕೊಡಿಸಿ. ಐಎಎಸ್, ಕೆಎಎಸ್, ಡಾಕ್ಟರ್ ಓದಿಸಿ. ಆಗ ನೀವು ಸಮಾಜಕ್ಕೆ ನಿಜವಾದ ಕೊಡುಗೆ ಕೊಟ್ಟಂತಾಗುತ್ತದೆ. ಅದು ಬಿಟ್ಟು ದೀಕ್ಷೆ ಕೊಡುತ್ತೇವೆ ಅನ್ನುವುದು ... ದೀಕ್ಷೆ ಕಟ್ಟಿಕೊಂಡು ನಮಗೆ ಏನೂ ಆಗಬೇಕಾದ್ದಿಲ್ಲ. ದೀಕ್ಷೆ ವಿಚಾರ ಕೈಬಿಟ್ಟು ಸೇವಾ ಮನೋಭಾವ ಬೆಳೆಸಿಕೊಂಡರೆ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಅದ್ಯಾವುದೂ ನಿಮ್ಮಿಂದ ಸಾಧ್ಯವಿಲ್ಲ ಎನ್ನುವುದಾದರೆ ಮೇಲುಕೀಳು ಬೋಧನೆ ಬಿಟ್ಟು ಮನುಷ್ಯರನ್ನು ಮನುಷ್ಯರಾಗಿ ಉಳಿಯಲು ಬಿಟ್ಟರೆ ಸಾಕು. ಮತ್ತೇನನ್ನೂ ನಾವು ಅಪೇಕ್ಷಿಸುವುದಿಲ್ಲ.

ಪ್ರಶ್ನೆ : ಹಿಂದುಳಿದ ವರ್ಗಗಳ ಸ್ವಾಮಿಗಳ ಒಕ್ಕೂಟ/ ಸಂಘಟನೆ ಹುಟ್ಟಿಕೊಂಡಿದೆಯಲ್ಲ; ಇಂಥದೊಂದು ಸಂಘಟನೆಯ ಅವಶ್ಯಕತೆಯಿತ್ತೆ?

ಸ್ವಾಮೀಜಿ: ದಲಿತ - ಹಿಂದುಳಿದ ಮಠಾಧೀಶರ ಒಕ್ಕೂಟ ಅನ್ನುವ ಸಂಘಟನೆಯನ್ನು ರೂಪಿಸಿದ್ದೇವೆ. ಈ ಒಕ್ಕೂಟದಲ್ಲಿ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗರ ಮಠಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಮಠಗಳ ಸ್ವಾಮಿಗಳೂ ಇದ್ದಾರೆ. ಮಾದಿಗ, ಉಪ್ಪಾರ, ಗಾಣಿಗ, ಗೊಲ್ಲ, ಕುರುಬ, ಭೋವಿ ಇತ್ಯಾದಿ ಎಲ್ಲ ಮಠಗಳೂ ಇಲ್ಲಿ ಒಂದಾಗಿವೆ. ಸಮಾಜದಲ್ಲಿ ಸಾಮರಸ್ಯ ಮೂಡಿಸುವುದಷ್ಟೆ ಇದರ ಹಿಂದಿನ ಉದ್ದೇಶ.

ನಾವು ಬಹಳಷ್ಟು ಕಡೆ ಕಾಣುವಂತೆ ಪ್ರಮುಖವಾಗಿ ಗ್ರಾಮೀಣ ಭಾಗದಲ್ಲಿ ಜಾತಿಜಾತಿಗಳ ನಡುವೆ ಅಶಾಂತಿ, ಅಂತಃಕಲಹ ಏರ್ಪಟ್ಟಿದೆ. ನೀವು ಯಾವುದೇ ಪೊಲೀಸ್ ಠಾಣೆಗೆ ಹೋದರೂ ಅಟ್ರಾಸಿಟಿ ಕೇಸುಗಳ ರಾಶಿಯೇ ಸಿಗುತ್ತದೆ. ಹಳ್ಳಿಗಳಲ್ಲಿ ಯಾರದೋ ಚಿತಾವಣೆಗೆ ಒಳಗಾಗಿ ದಲಿತರ ಮೇಲೆ ದೌರ್ಜನ್ಯ ಎಸಗುವ ಅಥವಾ ಜಾತಿ ಕಲಹಗಳು ಏರ್ಪಡುವ ವಾತಾವರಣ ಇದೆ. ಇಂಥಾ ವಾತಾವರಣವನ್ನು ನಾವು ತೊಡೆದು ಹಾಕಿ, ಸಮಾಜದಲ್ಲಿ ಸಾಮರಸ್ಯ ಮೂಡಿಸಿ, ಎಲ್ಲರೂ ಅಣ್ಣತಮ್ಮಂದಿರಂತೆ ಬಾಳುವಂತಾಗಬೇಕು ಎಂಬ ಉದ್ದೇಶದಿಂದ ಇಂಥಾ ಒಕ್ಕೂಟ ರಚಿಸಿಕೊಂಡಿದ್ದೇವೆ.

ಇಂಥಾ ಪ್ರಯತ್ನ ಇಂದಿನ ಸಂದರ್ಭದಲ್ಲಿ ತೀರಾ ಅಗತ್ಯವಾಗಿತ್ತು ಮತ್ತು ಇದು ಸಮಾಜದಲ್ಲಿ ಸಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ ಎಂಬುದು ನಮ್ಮ ನಿಲುವು.

ಪ್ರಶ್ನೆ :ಕೊನೆಯದಾಗಿ ತಮ್ಮ ಅನುಯಾಯಿಗಳಿಗೆ ಈ ವಿಚಾರದಲ್ಲಿ ತಮ್ಮ ಸಂದೇಶವೇನು?

ಸ್ವಾಮೀಜಿ: ಸಮಾಜದಲ್ಲಿ ಕ್ರಮೇಣ ಪ್ರಜ್ಞಾವಂತಿಕೆ ಬೆಳೆಯುತ್ತಿದೆ ಎಂಬುದು ಸ್ವಾಗತಾರ್ಹ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ವಿವೇಚನೆ ಮಾಡಿ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ನಮ್ಮ ಸಮಾಜಕ್ಕಿದೆ. ಆದ್ದರಿಂದ ಯಾರೇ ಆಗಲಿ, ಎಲ್ಲ ಕಾಲಕ್ಕೂ ಜನರನ್ನೂ ವಂಚಿಸಲಾಗುವುದಿಲ್ಲ. ಇಂಥಾ ವಿವೇಚನಾ ಶಕ್ತಿಯನ್ನು ಸಮಾಜ ಇನ್ನೂ ಹೆಚ್ಚೆಚ್ಚು ರೂಢಿಸಿಕೊಂಡರೆ ಸಮಾಜದ ಪ್ರಗತಿಯ ವೇಗ ಹೆಚ್ಚುತ್ತದೆ.

...ಪೇಜಾವರ ಒಬ್ಬ ಕುತಂತ್ರಿ'



ಪ್ರಶ್ನೆ: ಕುರುಬರಿಗೆ ವೈಷ್ಣವ ದೀಕ್ಷೆ ಕೊಡುತ್ತೇನೆಂದು ...ರ ಸ್ವಾಮಿ ಹೇಳಿದ್ದಾರಲ್ಲಾ?

...ಷ್ಣಮೂರ್ತಿ: ನೋಡಿ, ಇವರ ಉಡುಪಿ ಮಠಕ್ಕೆ ... ಬಂದಿರುವುದೇ ಕನಕದಾಸನಿಂದ. ಶೂದ್ರ ಭಕ್ತ ...ಸರ ಹೆಸರಲ್ಲಿ ಪ್ರಚಾರ ಪಡೆಯದೇ ಹೋಗಿದ್ದರೆ ...ಪಿ ಮಠ ಒಂದು ನಿರ್ದಿಷ್ಟ ಪಂಗಡಕ್ಕಷ್ಟೇ ...ತವಾಗಿರುತ್ತಿತ್ತು. ಹೀಗೆ ಕನಕನ ಕಿಂಡಿ ತೋರಿಸಿ ...ಸಿ ಬಂದ ಇವರು ಈಗ ಶೂದ್ರ, ದಲಿತರೆಲ್ಲರನ್ನೂ ...ದ ಹೊರಗಿಟ್ಟಿದ್ದಾರೆ. ನಾನಾ ಅನಿಷ್ಟ ಆಚರಣೆಗಳನ್ನು ...ಮಲ್ಲಿಟ್ಟಿದ್ದಾರೆ. ಇಂಥವರ ದೀಕ್ಷೆ ಯಾರಿಗೆ ಬೇಕು? ...ಸಿ, ನಮಗೆ ದೀಕ್ಷೆ ಕೊಡಲಿಕ್ಕೆ ಇವರು ಯಾರು?

ಪ್ರಶ್ನೆ: ಉಡುಪಿ ಮಠದಲ್ಲಿ ಅನಿಷ್ಟ ಆಚರಣೆಗಳು ... ಯಾವುವು?

...ಷ್ಣಮೂರ್ತಿ: ಬ್ರಾಹ್ಮಣರಿಗೇ ಒಂದು ಪ್ರತ್ಯೇಕ ಪಂಕ್ತಿ ...ಗೇ ಒಂದು ಪಂಕ್ತಿ ಮಾಡಿದ್ದಾರೆ. ಅದನ್ನು ಸಮರ್ಥನೆ ... ತಮ್ಮ ಪಾಂಡಿತ್ಯವನ್ನೆಲ್ಲಾ ಬಳಸಿ ನಾನಾರೀತಿಯ ...ವಾದ ಹೂಡುತ್ತಾರೆ. ಇದು ಹೇಗೆ ಶ್ರೇಷ್ಠ ಆಚರಣೆ... ಕಿಕೊಳ್ಳಲು ಸಾಧ್ಯ?

...ಜಾವರ ಪಜಾಲಂ ಪ್ರತ್ಯೇಕ ಪಂಕ್ತಿಯಲ್ಲಿ ಕೂತು ...ಕ ಅನ್ನ ಎಲ್ಲಿಂದ ಬರುತ್ತೆ? ದಲಿತ-ಶೂದ್ರರು ಬೆವರು ..., ಬೆಳೆದದ್ದು ತಾನೇ? ಪೇಜಾವರ ಮತ್ತು ಅವರ ...ಗರು ಈ ವಿಷಯವನ್ನ ಸದಾ ...ಟ್ಟುಕೊಂಡರೆ ಒಳ್ಳೆಯದು.

[illegible]

...ಷ್ಣಮೂರ್ತಿ: ಪೇಜಾವರರಿಗೆ ಒಂದು ... ಪ್ರಶ್ನೆ ಕೇಳೋಣ. ಇಂದಿನ ದಿನಗಳಲ್ಲಿ ಬಹಳಷ್ಟು ಬ್ರಾಹ್ಮಣರು ಮಾಂಸಾಹಾರ ಸೇವನೆಗೆ ಹಿಂತಿರುಗಿದ್ದಾರೆ. ಐಟಿ-ಬಿಟಿ ಕ್ಷೇತ್ರದಲ್ಲಂತೂ ಇದು ಮಾಮೂಲು. ಹೀಗಿರುವಾಗ ಇವರು ಎಷ್ಟು ಮಂದಿ ಮಾಂಸಾಹಾರಿ ಬ್ರಾಹ್ಮಣರನ್ನು ತಮ್ಮ ಪಂಕ್ತಿಯಿಂದ ಬೇರ್ಪಡಿಸಿದ್ದಾರೆ? ಅಂಥ ಒಂದು ಪ್ರಶ್ನೆಯೇ ಅವರ ಮುಂದಿಲ್ಲ. ಇದೆಲ್ಲಾ ತಮ್ಮ ಅನಿಷ್ಟ ಆಚರಣೆಯನ್ನು ಸಮರ್ಥಿಸಿಕೊಳ್ಳುವ ಮೊಂಡುವಾದವಷ್ಟೆ.

• ಪ್ರಶ್ನೆ: ಈಗ ಇದ್ದಕ್ಕಿದ್ದಂತೆ ವೈಷ್ಣವ ದೀಕ್ಷೆ ಬಗ್ಗೆ ಪೇಜಾವರರು ಮಾತಾಡಲು ಕಾರಣ ಏನಂತೀರಿ?

ಕೃಷ್ಣಮೂರ್ತಿ: ಅವರಿಗೆ ಆಗಾಗ ಇಂಥಾ ಹೊಸಹೊಸ ನಾಟಕ ಆಡುವ ಚಾಳಿಯಿದೆ. ಈ ಹಿಂದೆ ದಲಿತರ ಕೇರಿಗೆ ಹೋಗುವ ನಾಟಕ ಆಡಿದರು. ಇವರಿಗೆ ನಿಜವಾಗಲೂ ದಲಿತರ ಬಗ್ಗೆ ಗೌರವ ಕಾಳಜಿಯಿದ್ದರೆ ದಲಿತರಿಗೆ ಉಡುಪಿ ಮಠದಲ್ಲಿ ಸ್ಥಾನಮಾನ ನೀಡಲಿ. ಅವರ ಸಂಕುಚಿತ ಚಿಂತನೆಯಲ್ಲಿ ಇಂಥಾ ಉತ್ತಮ ವಿಚಾರಗಳಿಗೆ ಜಾಗವೇ ಇಲ್ಲ; ಅವರಿಗೆ ಏನಿದ್ದರೂ ಬೀದಿ ನಾಟಕಗಳಲ್ಲೇ ಹೆಚ್ಚಿನ ಆಸಕ್ತಿ.

• ಪ್ರಶ್ನೆ: ಕುರುಬ ಸಮುದಾಯದಲ್ಲೂ ಸಾಕಷ್ಟು ಮಂದಿ ಉಡುಪಿ ಕೃಷ್ಣನ ಆರಾಧಕರು ಇದ್ದಾರಲ್ಲಾ?

ಕೃಷ್ಣಮೂರ್ತಿ: ಹೌದು ನಿಜ, ನಾನೂ ಕೂಡ ಹಲವು ಬಾರಿ ಉಡುಪಿಗೆ ಹೋಗಿದ್ದೇನೆ. ಅಲ್ಲಿನ ಭೇದಭಾವಗಳನ್ನು ಕಣ್ಣಾರೆ ಕಂಡಿದ್ದೇನೆ. ಇಷ್ಟಕ್ಕೂ ದೇವರು ಎಲ್ಲರಿಗೂ ಒಂದೇ. ಆದರೆ ಮುಗ್ಧ ಭಕ್ತರಿಗೂ ದೇವರಿಗೂ ಮಧ್ಯೆ ಕೆಲವು ಪಟ್ಟಭದ್ರ ಶಕ್ತಿಗಳಿದ್ದಾರೆ. 'ಕುಲಕುಲ ಕುಲವೆಂದು ಬಡಿದಾಡದಿರಿ' ಅಂತ ಕನಕದಾಸರು ಬೋಧಿಸಿದ್ದಾರೆ. ಆ ಕಾಲದಲ್ಲೂ ಕೃಷ್ಣನ ಭಕ್ತ ಕನಕದಾಸರನ್ನು ಹೊರಗಿಟ್ಟಿದ್ದು ಇದೇ ಶಕ್ತಿಗಳೇ... ಪೇಜಾವರರು ಈಗಲೂ ಅಂಥಾ ಶಕ್ತಿಗಳ ಪ್ರತಿನಿಧಿಯಾಗಿಯೇ ಮಾತಾಡುತ್ತಾರೆ. ಅವರ ಪರಂಪರೆಯೇ ಅಂಥಾದ್ದು. ಅವರೆಂದಿಗೂ ಸಮಾನತೆಯ ಆಶಯಗಳಿಗೆ ಸ್ಪಂದಿಸಿಲ್ಲ. ಆದರೆ ನಾವು ಕನಕದಾಸರ ಪರಂಪರೆಯನ್ನು ಎತ್ತಿಹಿಡಿಯುವವರು. ನಮ್ಮ ಪರಂಪರೆಗೆ ಬಹಳ ದೊಡ್ಡ ಇತಿಹಾಸವೇ ಇದೆ.

• ಪ್ರಶ್ನೆ: ಕನಕದಾಸರ ಬಗ್ಗೆ ಪೇಜಾವರ ಸ್ವಾಮಿಗೆ ಗೌರವ ಇಲ್ಲವೇ?

ಕೃಷ್ಣಮೂರ್ತಿ: ಉಡುಪಿಯಲ್ಲಿರೋ ಕನಕದಾಸರ ವಿಗ್ರಹ ಯಾವ ಸ್ಥಿತಿಯಲ್ಲಿದೆ ಅಂತ ನೋಡಿದರೆ ಇವರಿಗೆ ಎಷ್ಟು ಗೌರವ ಇದೆ ಅಂತ ಗೊತ್ತಾಗುತ್ತೆ. ಅಲ್ಲಿ ಕನಿಷ್ಠ ಕಸ ಗುಡಿಸಿ ಶುಚಿ ಮಾಡುವವರೂ ಇಲ್ಲ. ಅಷ್ಟು ಮಾತ್ರವಲ್ಲ; 500 ವರ್ಷಗಳ ಇತಿಹಾಸವಿದ್ದ ಕನಕ ಗೋಪುರವನ್ನೇ ಒಡೆದು ಉರುಳಿಸಿ, ಕನಕದಾಸರ ಹೆಸರೇ ಇಲ್ಲದಂತೆ ಮಾಡಲು ಹವಣಿಸಿದರು. ರಾಜ್ಯಾದ್ಯಂತ ಭಾರೀ ಪ್ರತಿಭಟನೆ ಬಂದ ಹಿನ್ನೆಲೆಯಲ್ಲಿ ಜನರ ಆಕ್ರೋಶಕ್ಕೆ ಹೆದರಿ ಅದನ್ನು ಮತ್ತೆ ಕಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ಅವರಿಗೆ ಎಷ್ಟು ಗೌರವವಿದೆ ಅಂತ ಅರ್ಥ ಆಗುತ್ತೆ.

• ಪ್ರಶ್ನೆ: ಉಡುಪಿ ಕೃಷ್ಣ ಮಠದ ಇಂಥಾ ಅವಾಂತರಗಳಿಗೆ ಪರಿಹಾರವೇನು?

ಕೃಷ್ಣಮೂರ್ತಿ: ಉಡುಪಿಯ ಕೃಷ್ಣ ಮಠ ಮಾತ್ರವಲ್ಲ; ಅಷ್ಟ ಮಠಗಳನ್ನೂ ಮುಜರಾಯಿ ಇಲಾಖೆಗೆ ತೆಗೆದುಕೊಳ್ಳಬೇಕೆಂಬುದು ನಮ್ಮ ಬೇಡಿಕೆ. ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿರುವ ಈ ಕ್ಷೇತ್ರಕ್ಕೆ ತನ್ನದೇ ಆದ ಇತಿಹಾಸವಿದೆ. ಆದರೆ ಕೆಲವೇ ಪಟ್ಟಭದ್ರ ಶಕ್ತಿಗಳು ಭಾರೀ ಆದಾಯ ತರುವ ಮಠಗಳನ್ನು ತಮ್ಮ ಕಬ್ಜಾದಲ್ಲಿಟ್ಟುಕೊಂಡಿದ್ದಾರೆ. ದೇವರು ಯಾರೊಬ್ಬರ ಖಾಸಗಿ ಸ್ವತ್ತೂ ಅಲ್ಲ.

ಪಟ್ಟಭದ್ರರ ಹಿಡಿತದಿಂದ ಈ ಮಠಗಳನ್ನು ಬಿಡುಗಡೆ ಮಾಡಬೇಕು; ಎಲ್ಲ ಭಕ್ತರಿಗೂ ಸಮಾನ ಅವಕಾಶ ಸಿಗಬೇಕು. ಆದ್ದರಿಂದ ಈ ಮಠಗಳನ್ನು ಮುಜರಾಯಿ ಇಲಾಖೆಗೆ ತೆಗೆದುಕೊಳ್ಳಬೇಕೆಂಬ ಬೇಡಿಕೆ ಇಟ್ಟುಕೊಂಡು 'ಕರ್ನಾಟಕ ಕುರುಬರ ಪ್ರದೇಶ ಸಮಿತಿ' ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಿದೆ.

• ಪ್ರಶ್ನೆ: ಪೇಜಾವರರಿಗೆ ಹಾಲುಮತ ದೀಕ್ಷೆ ಕೊಡಬೇಕೆಂಬುದಕ್ಕೆ ಏನು ಸಮರ್ಥನೆ?

ಕೃಷ್ಣಮೂರ್ತಿ: ನಮ್ಮದು ಹಾಲಿನಷ್ಟೆ ಪರಿಶುದ್ಧವಾದ ಹಾಲುಮತ. ನಮ್ಮದು ಕುತಂತ್ರ, ಕುಯುಕ್ತಿಗಳಲ್ಲೇ ಕೇಲಿ ಮುಳುಗುತ್ತಾ, ಇತರರ ದುಡಿಮೆಯನ್ನು ಆಶ್ರಯಿಸಿ ಬದುಕುವ ಮತವಲ್ಲ. ಸಂಕುಚಿತ ವಿಚಾರಗಳನ್ನು ಆಚರಣೆಗಳನ್ನು ಹೊಂದಿರುವ ಯಾರೇ ಆದರೂ ಇಂಥಾ ಹಾಲುಮತದ ದೀಕ್ಷೆ ಪಡೆದುಕೊಳ್ಳುವುದು ಒಳ್ಳೆಯದು.

ಪೇಜಾವರರಿಗೆ ಬೇಕಿದೆ ಮಾನವದೀಕ್ಷೆ

ಶ್ರೀಕೃಷ್ಣ ಆಲನಹಳ್ಳಿಯವರು ಕುವೆಂಪು ಅವರನ್ನು ಸಂದರ್ಶಿಸುತ್ತ "ಸರ್, ಮಾಧ್ವ ಸಿದ್ಧಾಂತ ನೀಚ ಸಿದ್ಧಾಂತವೇ?" ಎಂದು ಕೇಳಿದ್ದರಂತೆ. ಅದಕ್ಕೆ ಕುವೆಂಪು "ನೀಚ! ಪರಮನೀಚ!" ಎಂದಿದ್ದರಂತೆ. ಇಂಥ ಪರಮನೀಚ ಸಿದ್ಧಾಂತದ ಶಾಶ್ವತ ಪ್ರತಿಪಾದಕರಾದ ಪೇಜಾವರರು ಹೊಸ ಹುಡದಿ ಎಬ್ಬಿಸಿದ್ದಾರೆ: ಕುರುಬರು ಬಯಸಿದರೆ ವೈಷ್ಣವ ದೀಕ್ಷೆ ನೀಡುವ ಭಾರೀ ಔದಾರ್ಯವನ್ನು ಪ್ರದರ್ಶಿಸಿದ್ದಾರೆ. ಇವರ ಔದಾರ್ಯದ ಹಿಂದಿನ ಉರುಲುಗಳನ್ನು ಸರಿಯಾಗಿಯೇ ಗ್ರಹಿಸಿದ ಹಾಲುಮತಸ್ಥ ಸ್ವಾಮಿಗಳು ಉಗ್ರವಾಗಿ ಖಂಡಿಸಿ ತಮ್ಮ ಸಮುದಾಯದ ಅಸ್ಮಿತೆಯನ್ನು ಕಾಪಾಡುತ್ತ ಪೇಜಾವರರ ಮತೀಯ ಚಿಂತನೆಯನ್ನು ಕಾಲಕಸ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ "ಹಾಲುಮತಸ್ಥರು ಶೈವರು, ವೈಷ್ಣವ ದೀಕ್ಷೆಯ ಪ್ರಶ್ನೆಯೇ ಇಲ್ಲ" ಎಂದು ಪ್ರತಿಕ್ರಿಯಿಸಿದ್ದು ಪೇಜಾವರರಿಗೆ ನೀಡಿದ ತಾತ್ವಿಕ ಉತ್ತರವಾಗಿದೆ.

ಹಾಲುಮತಸ್ಥರಿಗೆ ವೈಷ್ಣವ ದೀಕ್ಷೆ ನೀಡುತ್ತೇನೆನ್ನುವ ಪೇಜಾವರರ ಘೋಷಣೆಯಲ್ಲಿ ಶ್ರೇಷ್ಠತೆಯ ದುರಹಂಕಾರವಿದೆ. ಹಾಲುಮತಸ್ಥ ಸಂಸ್ಕೃತಿಯ ಬಗ್ಗೆ ಅವರ ಕೀಳುಭಾವ ಎದ್ದು ಕಾಣುತ್ತದೆ. ಹಾಲುಮತಸ್ಥರು ಅಸಂಸ್ಕೃತರು, ವೈಷ್ಣವ ದೀಕ್ಷೆಯ ಮೂಲಕ ಅವರನ್ನು ಸುಸಂಸ್ಕೃತರನ್ನಾಗಿಸವೆನೆಂಬ ಉದ್ಧಾರಕತನದ ಭ್ರಮೆ ತುಂಬಿದೆ. ಹಾಲುಮತಸ್ಥರು ಈ ನಾಡ ಮೂಲನಿವಾಸಿಗಳು, ಸಾವಿರಾರು ವರುಷಗಳಿಂದ ಅವರು ತಮ್ಮದೇ ಆದ ಆಚಾರವಿಚಾರ, ಸಂಸ್ಕೃತಿ, ಆಧ್ಯಾತ್ಮಿಕತೆ, ದಾರ್ಶನಿಕತೆಗಳನ್ನು ರೂಪಿಸಿಕೊಂಡು ಬಂದಿದ್ದಾರೆ, ಅದನ್ನು ಗೌರವಿಸಬೇಕೆಂಬ ಪ್ರಾಥಮಿಕ ಸೌಜನ್ಯವನ್ನೂ ಪೇಜಾವರರು ಕಳೆದುಕೊಂಡಂತಿದೆ. ಕನಕನ ಆಧ್ಯಾತ್ಮಿಕ ನೆಲೆಗಟ್ಟು ಯಾವುದೆಂದು ತೀರ್ಮಾನಿಸುವ ಹಕ್ಕನ್ನು ತಮಗೆ ತಾವೇ ಪಡೆದು ತಾವು ತೀರ್ಮಾನಿಸಿದ್ದೇ ಅತ್ಯಂತಿಕವೆಂದು ತಾವೇ ಪರಿಗಣಿಸಿ ಹಾಲುಮತಸ್ಥರು ಕನಕನ ಅನುಯಾಯಿಗಳೆಂದುಕೊಳ್ಳುವುದಾದರೆ ವೈಷ್ಣವರಾಗಲೇಬೇಕು, ಇಲ್ಲವಾದರೆ ಕನಕನನ್ನು ಬಿಟ್ಟುಕೊಡಬೇಕೆಂಬ ಅವರ ವಾದ ಸರಣಿಯಲ್ಲಿ ಶ್ರೇಷ್ಠತೆಯ ದುರಹಂಕಾರದ ಜತೆಗೆ ಕನಕನನ್ನು ಹಾಲುಮತಸ್ಥರಿಂದ ಬಿಡಿಸಿಕೊಳ್ಳುವ ಕುಟಿಲತೆಯೂ ಅಡಗಿದೆ. "ನಮಗೆ ದೀಕ್ಷೆ ನೀಡಲು ಪೇಜಾವರರು ಯಾರು? ನಾಚಿಕೆಯಾಗಬೇಕು ಅವರಿಗೆ" ಎಂದು ಕನಕಪೀಠದ ಸ್ವಾಮಿಗಳು ಗುಡುಗಿದ್ದು ಸಮುದಾಯದ ನೈತಿಕ ಸಿಟ್ಟಿಗೆ ಧ್ವನಿ ನೀಡಿದಂತಾಗಿದೆ.

ಪೇಜಾವರರು ಈ ಹಿಂದೆ ದಲಿತರಿಗೆ ವೈಷ್ಣವ ದೀಕ್ಷೆ ನೀಡಲು ಹೋಗಿ ದಲಿತ ಮತ್ತು ಪ್ರಗತಿಪರ ಚಿಂತಕರಿಂದ ಛೀಮಾರಿ ಹಾಕಿಸಿಕೊಂಡಿದ್ದರು. ಕಳೆದೆರಡು ದಶಕಗಳಲ್ಲಿ ಕರ್ನಾಟಕದ ದಲಿತಲೋಕ ದೊಡ್ಡ ಪ್ರಮಾಣದಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸತೊಡಗಿದ್ದು ಪೇಜಾವರರ ನಿದ್ದೆಕೆಡಿಸಿತ್ತು. ದಲಿತರ ವೈಷ್ಣವ ದೀಕ್ಷೆಯ ಪ್ರಸ್ತಾಪದ ಹಿಂದೆ ಇದ್ದದ್ದು ಮತಾಂತರ ವಿರೋಧಿ ಹಿಂದೂತ್ವದ ರಾಜಕಾರಣ. "ಸ್ವಜಾತಿ ಮದುವೆ ಧರ್ಮಬಾಹಿರ ಎಂದಾಗಲಿ, ಸರ್ವ ಜಾತಿಗಳಿಗೂ ನಮ್ಮ ಮಠದಲ್ಲಿ ಪರ್ಯಾಯ ಪೀಠಾಧಿಪತಿ ಸ್ಥಾನಮಾನವಿದೆಯೆಂದಾಗಲಿ, ತಾತ್ವಿಕವಾಗಿಯೂ ಒಪ್ಪಿಕೊಳ್ಳದೆ ಮತಾಂತರ ನಿಷೇಧ ಆಗಲಿ ಎಂದು ಹೇಳುವವವರನ್ನು ಮನುಷ್ಯರು ಎಂದು ಕರೆಯಲು ಕಷ್ಟವಾಗುತ್ತದೆ" ಎಂದು ದೇವನೂರ ಮಹದೇವ ಆಗ ಪ್ರತಿಕ್ರಿಯಿಸಿದ್ದರು. ಯಾವ ಸಮುದಾಯಕ್ಕೆ ವೈಷ್ಣವ ದೀಕ್ಷೆ ನೀಡಲು ಕರೆಯದೇ ಬಂದಿದ್ದಾರೋ ಆ ಸಮುದಾಯದ ಸ್ವಾಮಿಯೊಬ್ಬರಿಗೆ ಕೃಷ್ಣ ಮಠದಲ್ಲಿ ಪ್ರವೇಶ ನಿರಾಕರಿಸಿದ ಘಟನೆ ಇನ್ನೂ ಕರ್ನಾಟಕದ ಜನಮಾನಸದಲ್ಲಿ ಹಸಿರಾಗಿದೆ. ಯಾವುದೇ ತಳಸಮುದಾಯಕ್ಕೆ ಬೇಕಾಗಿರುವುದು ದೀಕ್ಷೆಯಲ್ಲ ಸಮಾನತೆ ಹಾಗೂ ಗೌರವ. ವರ್ಣಾಶ್ರಮದ ಹುದಲಲ್ಲಿ ಹುಗಿದುಹೋಗಿರುವ ಪೇಜಾವರರಿಗೆ ಇದು ಸಾಧ್ಯವಿಲ್ಲ. ಅವರಿಗೆ ಬೇಕಾಗಿರುವುದು ತಳಸಮುದಾಯಗಳಲ್ಲಿ ದಾಸಾನುದಾಸವರ್ಗವನ್ನು ಹುಟ್ಟುಹಾಕುವುದು. ಆದರೆ ಅವರ ಆಟ ಇನ್ನು ನಡೆಯದು.

ಕಳೆದೆರಡು ದಶಕಗಳ ಭಾರತದ ಬಲಪಂಥೀಯ ಕೋಮುವಾದಿ ರಾಜಕಾರಣದ ಮಾಸ್ಟರ್-ಮೈಂಡ್‌ಗಳಲ್ಲಿ ಪೇಜಾವರರೂ ಒಬ್ಬರು. ಅಡ್ವಾನಿಯವರ ರಥಯಾತ್ರೆ, ಬಾಬ್ರಿ ಮಸೀದಿ ನಾಶದಂಥ ಮತೀಯ ವಿಧ್ವಂಸಕ ಚಟುವಟಿಕೆಗಳಲ್ಲಿ ಪಾಲುದಾರರಾದವರು. ಮತಾಂತರವನ್ನು ವಿರೋಧಿಸುತ್ತಲೇ ಗೋಮಾಂಸ ರಾಜಕಾರಣಕ್ಕೆ ದನಿಗೂಡಿಸಿದವರು. ಅವರ ಈ ಹೇಳಿಕೆ ಆಕಸ್ಮಿಕವೂ, ಸರಳವೂ ಆದದ್ದಲ್ಲ, ಅದು ಹಿಂದೂತ್ವದ ಟಂಕಸಾಲೆಯಲ್ಲಿ ಎರಕ ಹೊಯ್ದ ನಾಣ್ಯ.



ಹಾಲುಮತಸ್ಥರು ಕರ್ನಾಟಕದ ಮೂರನೇ ಅತಿದೊಡ್ಡ ಸಮುದಾಯ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗುವ ವಿಷಯದಲ್ಲಿ ಇಡೀ ಸಮುದಾಯ ಪಕ್ಷಾತೀತವಾಗಿ ಒಂದಾದಂತಿದೆ. ಜತೆಗೆ ಅಹಿಂದ ಸಮುದಾಯಗಳೂ ಹಿಂದೆಂದಿಗಿಂತಲೂ ಇಂದು ಒಗ್ಗೂಡುತ್ತಿರುವುದು ಎದ್ದು ಕಾಣುತ್ತಿದೆ. ಇದು ಬಿಜೆಪಿ ಪಾಲಿಗೆ ನುಂಗಲಾರದ ತುತ್ತಾಗುತ್ತಿದೆ. ಪೇಜಾವರರಂಥವರ ಹೇಳಿಕೆಗಳು ಸಮುದಾಯಗಳನ್ನು ಒಡೆಯುವ ಹಿಡನ್ ಅಜೆಂಡಾಗಳನ್ನು ಒಳಗೊಂಡಂತಿವೆ. ಈಗ ತುರ್ತಾಗಿ ಆಗಬೇಕಾಗಿರುವುದು ತಳಸಮುದಾಯಗಳಿಗೆ ಯಾವುದೋ ದೀಕ್ಷೆ ನೀಡುವುದಲ್ಲ. ಬದಲಾಗಿ ಪೇಜಾವರ ಶ್ರೀಗಳಂಥವರಿಗೆ ಮಾನವದೀಕ್ಷೆ ನೀಡುವುದು.

■ ಎಂ.ಡಿ.ಒಕ್ಕುಂದ, ಧಾರವಾಡ

ದೀಕ್ಷೆ ಪಡೆದವರು ಏನನ್ನು ತಿನ್ನಬೇಕು

ಇತ್ತೀಚಿಗೆ ಕರಾವಳಿಯ ಪೇಜಾವರರು ಮತ್ತೆ ಸುದ್ದಿಗೆ ಬಂದಿದ್ದಾರೆ. ಕುರುಬ ವೈಷ್ಣವ ದೀಕ್ಷೆಕೊಟ್ಟು ಉದ್ಧರಿಸುವ ಮಾತನ್ನಾಡಿ ಆ ಮೂಲಕ ತಾವು ಮಾಡುತ್ತಿ ಧರ್ಮರಾಜಕಾರಣಕ್ಕೆ ಸಲ್ಲಿಸಬಹುದಾದ ಅಳಿಲುಸೇವೆಯನ್ನು ಘೋಷಿಸಿದ್ದಾರೆ. ಆ ದೀಕ್ಷೆಯ ಪ್ರಶ್ನೆಯಲ್ಲಿ ಸಾಂಸ್ಕೃತಿಕ ಅಪವ್ಯಾಖ್ಯಾನಗಳಿವೆ. ಯಾರೂ ಕೇಳದೆಯೂ ತ ದೀಕ್ಷೆ ಕೊಡಲು ತಯಾರಿರುವುದಾಗಿ ಪೇಜಾವರರು ಆಗಾಗ ಘೋಷಿಸುತ್ತಾರೆ. ವ್ಯಾಪ್ತಿಯಲ್ಲಿ ಪ್ರಧಾನವಾಗಿ ಪಶುಪಾಲಕ, ಕೃಷಿ ಹಿನ್ನೆಲೆಯ ಕುರುಬರೇ ಮೊದಲ ಶಿವಪರಂಪರೆಯ, ಜಲಪರಂಪರೆಯ ಸಮುದಾಯಗಳೇ ಇರುತ್ತವೆ. ಹೀಗೆ ಅ ಮಾಡುತ್ತಿರುವ ಘೋಷಣೆಯಲ್ಲಿ ಒಂದು ಕಡೆಯಿಂದ ಈ ಸಮುದಾಯ ಸಾಂಸ್ಕೃತಿಕ ಇತಿಹಾಸಕ್ಕೆ ಅಪಚಾರ ಎಸಗುವ ಅವಿವೇಕವಿದೆ. ಇನ್ನೊ ಕಡೆಯಿಂದ ಲೋಕದಲ್ಲಿದ್ದವರಿಗೆಲ್ಲಾ ದೀಕ್ಷೆಕೊಡಬಲ್ಲಷ್ಟು ಆಧ್ಯಾತ್ಮಿಕ ಸಂ ವೈಷ್ಣವ ಮತಪಂಥದಲ್ಲಷ್ಟೇ ಇದೆಯೆನ್ನುವ ಸಲ್ಲದ ಅಹಮಿಕೆಯೂ ಇದ

ಇವರು ಯಾವ ಸಮುದಾಯಗಳಿಗೆ ದೀಕ್ಷೆ ಕೊಡುತ್ತೇನೆ, ದೀಕ್ಷೆ ಕೊಡು ಎಂದು ಬಡಬಡಾಯಿಸುತ್ತಿರುವರೋ, ಆ ಸಮುದಾಯಗಳು ಈ ನೆಲ ಸಾವಿರಾರು ವರ್ಷಗಳಿಂದ ತಮ್ಮ ಕಾಯಕ ದೀಕ್ಷೆಯನ್ನು ದಿನ ಮುಂದುವರೆಸಿಕೊಂಡು ಬದುಕಿ ಬಂದಿವೆ. ಕುರಿಹಿಕ್ಕೆಯನ್ನೋ, ನೇಗಿಲಕುಳವನ್ ಶಿವನೆಂದು ಆರಾಧಿಸುತ್ತಲೇ, ಆ ಕುರುಹುಗಳನ್ನೂ ದಾಟಿ ಯೋಚಿಸ ವಿವೇಕವನ್ನೂ ಉಳಿಸಿಕೊಂಡಿವೆ. ಯಾವ ಕುರುಹನ್ನಾದರೂ ಕ್ಷಣ ವಿಸರ್ಜಿಸಿಕೊಳ್ಳಬಲ್ಲ ತಾತ್ವಿಕತೆಯನ್ನೂ ಮೈಗೂಡಿಸಿಕೊಂಡಿವೆ. ರಸಪರಂಪರ ಈ ಸಮುದಾಯಗಳಿಗೆ ಸಾವಿರಾರು ವರ್ಷಗಳಿಗೂ ಮಿಕ್ಕಿದ ಇಂತಹ ಸಾಂಸ್ ಇತಿಹಾಸವಿದೆ. ಈ ಇತಿಹಾಸದ ಮೂಲಕ ಕಾದುಕೊಂಡುಬ ನಿಸರ್ಗವಿವೇಕವಿದೆ. ದಾಸಕೂಟದೊಳಗಿದ್ದೂ ತನ್ನ ಬೀರಪ್ಪನನ್ನು ಒ ಬಚ್ಚಿಟ್ಟುಕೊಂಡು, "ಆತ್ಮ ಯಾವ ಕುಲ ಜೀವ ಯಾವ ಕುಲ" ಎಂದು ಇ ಮಡಿವಾದಿಗಳನ್ನು ಪ್ರಶ್ನಿಸಿದ್ದ ಕನಕನಿಗೆ ಬೆನ್ನೆಲುಬಾಗಿದ್ದುದು ಈ ಸಮುದಾ ವಿವೇಕವೇ. ಇವರ ದೀಕ್ಷಾ ಬಡಬಡಿಕೆಯ ಹಿಂದೆ ಈ ವಿವೇಕದ ಮೇ ಆಕ್ರಮಣವಿದೆ. ಇದು ಪೇಜಾವರರೇ ಮಾಡುತ್ತಿರುವ ಮೊದಲ ಆಕ್ರಮಣ ಅಲ್ಲ. ಕುರುಹುವಾದಿ ಭೇದವಾದಿಗಳು ಬಯಲಿಗೆ ದೀಕ್ಷೆ ಕೊಡುವ ಅವಿವೇ ಮಾತುಗಳ ಮೂಲಕ ಈ ಸಮುದಾಯಗಳ ಸಹಜವಿವೇಕವನ್ನು ಮಸುಕುಗೊಳಿಸ ವಿಫಲಯತ್ನವನ್ನು ನಡೆಸುತ್ತಲೇ ಬಂದಿದ್ದಾರೆ. ಗರ್ಭಗುಡಿಯೊಳಗೇ ಕುಳಿತು ಮುಕ್ತಚರ್ಚೆ ಮಾತು ಆಡುತ್ತಲೇ ಬಂದಿದ್ದಾರೆ.

ಈ ದೀಕ್ಷೆಯ ಪ್ರಶ್ನೆಗೆ ಮತ್ತೂ ಒಂದು ಪ್ರಮುಖ ಆಯಾಮವಿದೆ. ಅದು ಆಹಾ ಆಯ್ಕೆಯ ಪ್ರಶ್ನೆ. ಮಡೆಸ್ನಾನವನ್ನು ಪ್ರತಿಭಟಿಸಿ ಎದ್ದ ಸಹಪಂಕ್ತಿ ಭೋಜನದ ಆಗ್ರ ಇದೇ ಪೇಜಾವರು ಮಾಂಸಾಹಾರವನ್ನೇ ಗುರಿಯಾಗಿಸಿಕೊಂಡು ಕೊಟ್ಟ ಪ್ರತಿಕ್ರಿಯೆಯ (2013 ಜೂನ್ 12, 14ರ ಪ್ರಜಾವಾಣಿ ಪತ್ರಿಕೆಯ ವರದಿ) ನಾಡು ಗಮನಿಸಿದೆ. ಈ ಕುರುಬರಿಗೆ ಅವರು ಕೊಡಲು ಹೊರಟ ದೀಕ್ಷೆಯಲ್ಲಿ, ದೀಕ್ಷೆಪಡೆದ ಮೇಲೆ ಕುರುಬ ಏನನ್ನು ತಿನ್ನಬೇಕು ಎನ್ನುವ ಪ್ರಶ್ನೆಯೂ ಇರುತ್ತದೆ. ಈ ಮಡೆಸ್ನಾನ, ದೀಕ್ಷೆಯ ಮಾತೆತ್ತಿಕೊಂ ಹೀಗೆ ಮಾಂಸಾಹಾರಿಗಳನ್ನು ಕೀಳಾಗಿಸಿ ಅಪಮಾನಿಸುವ ಒಣ ಅಹಂಕಾರದ ಬದ ಕದ್ದು ಮಾಂಸ ತಿನ್ನುವ ಘೋಷಿತ ಶಾಖಾಹಾರಿ ವೈಷ್ಣವರಿಗೆ ದೀಕ್ಷೆಯ ಪುನರ್ಮ ಯೋಜನೆ ಹಾಕಿಕೊಂಡರೆ ಮಾಂಸದ ರೇಟಾದರೂ ಕೊಂಚ ಇಳಿದೀತು. ಅದಿ ಬದುಕಲಾರದ ನಾವಾದರೂ ಸ್ವಲ್ಪ ನಿಟ್ಟುಸಿರುಬಿಟ್ಟೇವು.

■ ಜಯಪ್ರಕಾಶ್ ಶೆಟ್ಟಿ, ಕುಂದಾಪ

03 ◀◀ ಕಂಡ ಹಾಗೆ...

ಮೋದಿಯ ಅಸಲಿಯತ್ತನ್ನು ಎತ್ತಿ ತೋರಿದ ನಿತೀಶ್ ಕುಮಾರ್


ನರಹಂತಕ ನರೇಂದ್ರ ಮೋದಿ ಬೊಗಳುವ ಸುಳ್ಳಿನ ಸರಮಾಲೆಗೆ ಕೊನೆಗೂ ಒಬ್ಬರು ಸೂಕ್ತವಾದ ಅಂಕುಶ ಇಟ್ಟಿರುವುದು ನನಗಂತೂ ಸಂತೋಷ ಕೊಟ್ಟಿದೆ. ಅವರು ಒಂದಿಷ್ಟೂ ಕೋಪಗೊಳ್ಳದೆ, ಶಾಂತವಾಗಿಯೇ ಮೋದಿಯನ್ನು ಸುಳ್ಳ, ಅನಕ್ಷರಸ್ಥ ಅನೈಕ್ಯತೆ ಉಂಟುಮಾಡುವ, ದಗಾಕೋರ ಮತ್ತು ಫ್ಯಾಸಿಸ್ಟ್ ಎಂದೆಲ್ಲ ಬಹಿರಂಗವಾಗಿ ಮೂದಲಿಸಿದ್ದಾರೆ.

ನಿಮಗೆಲ್ಲ ಗೊತ್ತು, ಹೀಗೆ ಇತ್ತೀಚೆಗೆ ಮೋದಿಗೆ ಪುಂಖಾನುಪುಂಖವಾಗಿ ಸಾರ್ವಜನಿಕ ಭಾಷಣವೊಂದರಲ್ಲಿ ಉಗಿದವರು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಎಂದು.

ಈ ಮೋದಿ ಎಂತಹ ವ್ಯಕ್ತಿಯೆಂದರೆ ತಾನು ಹೇಳಿದ್ದೇ ವೇದವಾಕ್ಯ ಅದನ್ನು ಯಾರೂ ಪ್ರಶ್ನಿಸುವುದಿಲ್ಲ ಎಂದು ಭಾವಿಸಿದ್ದ. ಅದು ಸರ್ದಾರ್ ಪಟೇಲರ ಬಗ್ಗೆ ಆತನಿಗಿರುವ ಟೊಳ್ಳು ಅಭಿಮಾನವಾಗಿರಲಿ, ಗುಜರಾತ್‌ನಲ್ಲಿ ತಾನು ಸಾಧಿಸಿರುವ ಅಸಂಬದ್ಧ ಅಭಿವೃದ್ಧಿಯಾಗಲಿ, ತಾನು ಹೇಳುವ ದಗಲ್ಬಾಜಿ ಮಾತುಗಳನ್ನು ಜನ ನಂಬಿ ಬಿಡುತ್ತಾರೆಂಬ ಭ್ರಮೆಯಲ್ಲಿದ್ದ ಹಾಗೆಯೇ ಇತಿಹಾಸ ಮತ್ತು ವರ್ತಮಾನಗಳ ಬಗ್ಗೆ ತಾನಾಡಿದ ಮಾತೇ ಅಂತಿಮ ಎಂದು ನಂಬಿದ್ದ. ಅದಕ್ಕೆಲ್ಲ ನಿತೀಶ್ ಕುಮಾರ್ ಅವರು ಸರಿಯಾಗಿ ಉತ್ತರಿಸುವ ಮೂಲಕ ಮೋದಿಯ ಅಸಲಿಯತ್ತನ್ನು ಬಹಿರಂಗಪಡಿಸಿದ್ದಾರೆ.

ಹಿಂದೊಮ್ಮೆ "ಮೋದಿ ಎಷ್ಟು ಬುದ್ಧಿವಂತ ಎಂದರೆ ಪ್ರತಿದಿನ ಬೆಳಗ್ಗೆ ಆತ ಇಂಟರ್‌ನೆಟ್‌ನಲ್ಲಿ ಹಲವು ಕಠಿಣವಾದ ಗಣಿತದ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ದೇಶದ ಪ್ರತಿಷ್ಠಿತ ಐಐಟಿ ವಿದ್ಯಾರ್ಥಿಗಳಿಗೆ ನೆರವಾಗುತ್ತಾನೆ" ಎಂಬ ಕಪೋಲಕಲ್ಪಿತ ಸುದ್ದಿ ಎಲ್ಲೆಡೆ ಹಬ್ಬಿ ಅದನ್ನು ಬಹಳಷ್ಟು ಜನ ನಂಬಿದ್ದರು. ಆದರೆ ಈ ಮೋದಿ ಎಂತಹ ಪೆದ್ದ ಎಂದು ಮೊನ್ನೆ ತಾನೇ ಬಯಲು ಮಾಡಿದ್ದಾನೆ.

ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಆತ ಕಳೆದ ವಾರ ಮಾಡಿದ ಭಾಷಣದಲ್ಲಿ ಅಲೆಕ್ಸಾಂಡರ್‌ನನ್ನು ಬಿಹಾರದ ಶೂರರು ಯುದ್ಧದಲ್ಲಿ ಸೋಲಿಸಿದ್ದರು ಎಂದು ಹೇಳುವ



ಮೂಲಕ ಆ ರಾಜ್ಯದ ಜನರಲ್ಲಿ ಹುಸಿ ಆತ್ಮಾಭಿಮಾನ ಮೂಡಿಸಲು ಯತ್ನಿಸಿದ್ದ. ತಮಾಷೆಯ ಸಂಗತಿ ಯಾವುದೆಂದರೆ ನಮ್ಮ ಹೆಚ್ಚಿನ ಮಾಧ್ಯಮಗಳೂ ಆತನ ಈ ಕಲ್ಪಿತ ಇತಿಹಾಸವನ್ನು ಪ್ರಶ್ನಿಸುವ ಗೋಜಿಗೆ ಹೋಗಿರಲಿಲ್ಲ, ಅದನ್ನು ಮಾಡಿದ್ದು ನಿತೀಶ್ ಕುಮಾರ್. "ಮೋದಿ ಅದು ಹೇಗೆ ಅಲೆಕ್ಸಾಂಡರ್‌ನನ್ನು ಬಿಹಾರದಲ್ಲಿ ಹರಿಯುವ ಗಂಗಾ ದಡಕ್ಕೆ ತಂದನೋ ನನಗೆ ಗೊತ್ತಿಲ್ಲ" ಎಂದರು. ಯಾಕೆಂದರೆ ಅಲೆಕ್ಸಾಂಡರ್ ಹಿಮಾಚಲ ಪ್ರದೇಶದಲ್ಲಿರುವ ಬಿಯಾಸ್ ನದಿಯ ತನಕ ಬಂದಿದ್ದನಷ್ಟೇ. ಹಾಗೆಯೇ ಮೋದಿ ತಕ್‌ಶಿಲಾ ವಿಶ್ವವಿದ್ಯಾಲಯವು ಬಿಹಾರ ರಾಜ್ಯದಲ್ಲಿತ್ತು ಎಂದಿದ್ದ. ವಾಸ್ತವವಾಗಿ ಅದು ಇದ್ದದ್ದು ಈಗ ಪಾಕಿಸ್ತಾನದ ಭಾಗವಾಗಿರುವ ಪಂಜಾಬ್ ಪ್ರದೇಶದಲ್ಲಿ. ಅಷ್ಟೇ ಅಲ್ಲದೆ "ಚಂದ್ರಗುಪ್ತ ಮೌರ್ಯ ಗುಪ್ತ ರಾಜವಂಶದ ರಾಜನಾಗಿದ್ದು ಆತನ ಯುಗ ಸುವರ್ಣಯುಗವಾಗಿತ್ತು" ಎಂದು ಮೋದಿ ಹೇಳಿದ್ದ. ಆದರೆ ಚಂದ್ರಗುಪ್ತ ಮೌರ್ಯ ಮೌರ್ಯ ವಂಶದ ರಾಜನಾಗಿದ್ದ. ಇದೆಲ್ಲವನ್ನು ಪ್ರಸ್ತಾಪಿಸಿದ ನಿತೀಶ್ ಕುಮಾರ್ ಅವರು "ಇತಿಹಾಸದ ಬಗ್ಗೆ ತುಂಬಾ ಓದಿಕೊಂಡಿರುವುದಾಗಿ ಹೇಳಿಕೊಳ್ಳುವ ಇಂತಹ ಮನುಷ್ಯನ ಅಜ್ಞಾನಕ್ಕೆ ಏನನ್ನಬೇಕೋ ಗೊತ್ತಾಗುತ್ತಿಲ್ಲ" ಎಂದು ಲೇವಡಿ ಮಾಡಿದ್ದಾರೆ.

"ಮೋದಿ ಹೇಳುವುದೆಲ್ಲಾ ಬರೀ ಸುಳ್ಳು. ನಾವೆಲ್ಲ ಗುಜರಾತಿನ ಕಥಾ ವಾಚಕರ ಬಗ್ಗೆ ಕೇಳಿದ್ದೆವು. ಅಂಥವರ ಲ್ಲೊಬ್ಬ ಈಗ ಯಾವ ಕಾರಣಕ್ಕೆ ಜೈಲಿನಲ್ಲಿ ದ್ದಾನೆ ಎಂಬುದೂ ನಮಗೆ ಗೊತ್ತು (ನಕಲಿ ದೇವಮಾನವ ಆಸಾರಾಮ್ ಬಾಪು ಎಂಬ ಅತ್ಯಾಚಾರಿ ಯನ್ನು ಕುರಿತು). ಸುಳ್ಳು ಕತೆಗಳನ್ನು ಹೇಳುವ ಕಥಾವಾಚಕರಲ್ಲಿ ಮೋದಿಯೂ ಒಬ್ಬ. ಹಿಟ್ಲರ್‌ನ ಗ್ಯಾಂಗಿನಲ್ಲಿದ್ದ ಗೋಬೆಲ್ಸ್‌ನಂತೆ ಒಂದು ಸುಳ್ಳನ್ನು ನೂರಾರು ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎಂಬ ಸಿದ್ಧಾಂತವನ್ನು ನಂಬಿರುವವನಾದ್ದರಿಂದ ಸುಳ್ಳುಗಳನ್ನೇ ಹೇಳುತ್ತಿರುತ್ತಾನೆ" ಎಂದು ನಿತೀಶ್ ವ್ಯಂಗ್ಯವಾಡಿದ್ದಾರೆ.

ಮೋದಿಯ ಜಾತಿ ರಾಜಕಾರಣವನ್ನೂ ನಿತೀಶ್ ಖಂಡಿಸಿದ್ದಾರೆ. "ಮೊದಲು ರಾಮನನ್ನು ತಮ್ಮ ರಾಜಕೀಯಕ್ಕೆ ಉಪಯೋಗಿಸಿಕೊಂಡರು. ಈಗ ಕೃಷ್ಣನನ್ನು ಉಪಯೋಗಿಸಿಕೊಳ್ಳಲು ಸಂಚು ರೂಪಿಸಿದ್ದಾರೆ. ಅಷ್ಟೇ ಅಲ್ಲ, ರಾಮನನ್ನು ರಜಪೂತನೆಂದೂ, ಕೃಷ್ಣನು ಗೊಲ್ಲನೆಂದೂ ಹೇಳುವ ಮೂಲಕ ದೇವತೆಗಳನ್ನೇ ಜಾತಿಗಳಿಗೆ ಸೀಮಿತಗೊಳಿಸುತ್ತಿದ್ದಾರೆ. ಜಾತ್ಯತೀತ ರಾಜಕಾರಣ ಮಾಡುತ್ತೇನೆಂದು ಹೇಳುವ ಮನುಷ್ಯ ಮಾಡುತ್ತಿರುವ ಜಾತಿರಾಜಕಾರಣ ಈ ಪರಿಯದ್ದು. ರಾಮನಾಗಲಿ, ಕೃಷ್ಣನಾಗಲಿ ಎಂದೂ ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಲಿಲ್ಲ ಎಂಬುದನ್ನು ನೆನಪಿಟ್ಟುಕೊಂಡರೆ ಆತನಿಗೆ ಉತ್ತಮ" ಎಂದು ಕಿಡಿಕಾರಿದ್ದಾರೆ ನಿತೀಶ್.


ಮೋದಿ ತಾನು ಬಡವನಾಗಿದ್ದೆ, ರಸ್ತೆ ಬದಿಯಲ್ಲಿ ಟೀ ಮಾರುತ್ತಿದ್ದೆ, ಆದ್ದರಿಂದ ತಾನು ಬಡಜನರ ಅಭಿವೃದ್ಧಿಗೆ ಶ್ರಮಿಸುವ ನಾಯಕನಾಗಿರುತ್ತೇನೆ ಎಂದು ದೇಶದ ಜನರಲ್ಲಿ ಭ್ರಮೆ ಮೂಡಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಆತ ನಿಜವಾಗಲೂ ಯಾರ ಪರ ಎಂಬುದನ್ನು ನಿತೀಶ್ ತೋರಿಸಿದ್ದಾರೆ. ಅವರು ತಮ್ಮ ಭಾಷಣದಲ್ಲಿ "ನಾ ಬಡಕುಟುಂಬದಿಂದ ಬಂದವನು. ಸ್ವಾತಂತ್ರ ಸಂಗ್ರಾಮದ ಭಾಗವಹಿಸಿದ್ದವರ ಪುತ್ರ ನಾನು. ನನ್ನ ತಾಯಿ ರ ಮಹಿಳೆ. ನಾನು ಬಡಜನರ ಪರವಾಗಿಯೇ ಇದ್ದೇನೆ. ಆ ಆತ ಬಡವರ ಪರವಾಗಿ ಏನನ್ನು ಮಾಡಿದ್ದಾನೆ? ಆ ರಾಜ್ಯದ ಬಡವರು ಸಂಕಷ್ಟದಲ್ಲೇ ಇರುವಾಗ ಶ್ರೀಮಂತ ಮಾತ್ರ ಉದ್ಧಾರವಾಗುತ್ತಿದ್ದಾರೆ" ಎಂದು ನಿತೀಶ್ ಹೇಳಿದ

ಮೋದಿ ತನ್ನ ಭಾಷಣದಲ್ಲಿ ತನ್ನ ವಿರೋಧಿಗಳ "ಕಿತ್ತು ಕಿತ್ತು ಸೋಲಿಸಿ" ಎಂದು ಜನರಿಗೆ ಕರೆ ಕೊಟ್ಟ ಅದಕ್ಕೆ ಪ್ರತಿಕ್ರಿಯಿಸಿದ ನಿತೀಶ್ "ಕಿತ್ತು ಕಿತ್ತು ಸೋ ಎಂದು ಕರೆ ನೀಡುವುದು ಅದೆಂತಹ ಭಾಷೆ? ಇ ಪ್ರಜಾತಂತ್ರದಲ್ಲಿ ಉಪಯೋಗಿಸುವಂತಹ ಪದಗಳ ಬದಲಾಗಿ ಫ್ಯಾಸಿಸ್ಟರು ಬಳಸುವಂತಹ ಭಾಷೆ. ಇದ ದೇಶದ ಜನರು ಗಮನಿಸಬೇಕು. ಆರ್ಥಿಕ ತಜ್ಞ ಅಮ ಸೇನ್ ಅವರು ಗುಜರಾತ್ ಬದಲು ಬಿಹಾರದ ಅಭಿವ ಯನ್ನು ಶ್ಲಾಘಿಸಿದರು ಎಂದು ಆತನ ಬೆಂಬಲಿಗರು ಸೇ ವಿರುದ್ಧ ತಿರುಗಿಬಿದ್ದರು. ಇದು ಕೇವಲ ಸರ್ವಾಧಿಕ ಧೋರಣೆ ಅಲ್ಲ, ಬದಲಾಗಿ ಹಿಟ್ಲರ್‌ನಂತಹ ಫ್ಯಾಸಿ ಮನಃಸ್ಥಿತಿ" ಎಂದು ನಿತೀಶ್ ತಣ್ಣಗೆ ಟೀಕಿಸಿದ್ದಾರೆ.

ಮೋದಿಯ ಪಾಟ್ನಾ ಭಾಷಣವನ್ನು ಕೇಳಿ ನಾ ಬೆಚ್ಚಿಬಿದ್ದಿದ್ದೆ. ಸದ್ಯ ನಿತೀಶ್ ಕುಮಾರ್ ಅವರು ಆತ ಸೂಕ್ತ ಉತ್ತರ ನೀಡಿದ್ದಾರೆ. ಸಂತೋಷದ ಸಂ ಯಾವುದೆಂದರೆ ಮೋದಿ ಎಂತಹ ದಗಲ್ಬಾಜಿ ಎಂ ಬಟಾಬಯಲಾಗಿಸಿದ ನಿತೀಶ್ ಕುಮಾರ್ ಅವರ ಭಾಷ ನಮ್ಮ ಎಲ್ಲಾ (ಚಿಡ್ಡಿ ಪುಂಡರನ್ನು ಬಿಟ್ಟರೆ) ಮಾಧ್ಯಮಗ ಹೆಚ್ಚಿನ ಪ್ರಚಾರ ನೀಡಿದ್ದು. ಇದು ಹೀಗೇ ಮುಂದುವರ ಮೋದಿ ಮತ್ತಾತನ ಕುರುಡು ಅಭಿಮಾನಿಗಳು ನ ರಾಜಕೀಯದಲ್ಲಿ ಅಪ್ರಸ್ತುತರಾಗುತ್ತಾರೆ ಎಂಬ ಆಶೆ ದೇಶದ ಎಲ್ಲಾ ಪ್ರಜ್ಞಾವಂತರದ್ದು.

'ಇಂದ್ರಸಭಾ' ಎಂಬ ಜನಪ್ರಿಯ ಉರ್ದು/ಹಿಂದಿ ನಾಟಕ

ಕಲಾ ಸಂಸ್ಕೃತಿಯನ್ನು ಸಮಗ್ರವಾಗಿ ನಿರ್ವಹಿಸಿಕೊಳ್ಳಲು ಕ್ಲಾಸಿಕಲ್ ಅಥವಾ ಉತ್ಕೃಷ್ಟ (elite) ಮಾದರಿಗಳಷ್ಟೆ ಸಾಲದು, ಅದರ ಜೊತೆಗೆ ಜನಪ್ರಿಯ ಮತ್ತು ಅಂಚಿಗೆ ಸರಿಸಲ್ಪಟ್ಟ ಕಲಾ ಮಾದರಿಗಳ ಅಧ್ಯಯನದ ಅವಶ್ಯಕತೆಯೂ ಇದೆ ಎಂಬುದನ್ನು ಕಳೆದ ಶತಮಾನದಲ್ಲೆ ಕಲಾ ಚಿಂತಕರು ಕಂಡುಕೊಂಡಿದ್ದಾರೆ. ಪ್ರದರ್ಶಕ ಕಲೆಗಳಿಗಂತೂ ಇದು ಹೆಚ್ಚು ಅನ್ವಯಿಸುತ್ತದೆ. ಇಂಗಮರ್ ಬರ್ಗಮನ್, ಅಕಿರು ಕುರುಸೋವಾ, ಸತ್ಯಜಿತ್ ರೇ, ಅಂಥವರ ಕಲಾತ್ಮಕ ಚಲನಚಿತ್ರಗಳ ಜೊತೆಗೆ 'ಜೇಮ್ಸ್‌ಬಾಂಡ್', 'ಕೌಬಾಯ್', 'ಸ್ಪೈಡರ್‌ಮ್ಯಾನ್', ರಜನಿಕಾಂತನ 'ಎಂದಿರನ್'ದಂತಹ ಜನಪ್ರಿಯ ಚಿತ್ರಗಳು ಸಂಸ್ಕೃತಿಯ ಮೇಲೆ ಬೀರುವ ಪ್ರಭಾವಗಳ ಅಧ್ಯಯನ, ಶೇಕ್ಸ್‌ಪಿಯರನ ನಾಟಕಗಳ ಅದರ ಉತ್ಕೃಷ್ಟ ಸಾಹಿತ್ಯಕ ಗುಣದೊಂದಿಗೆ ಆತನ ನಾಟಕಗಳ ರಂಗಪ್ರಯೋಗಗಳು ಪಡೆದುಕೊಂಡ ಜನಪ್ರಿಯತೆಯ ಹಿಂದಿರುವ ಕಲೆಯ ಸೈದ್ಧಾಂತಿಕ ಕಾರಣಗಳು ಕೂಡ ಕುತೂಹಲಕರವಾದ ಅಧ್ಯಯನದ ವಿಷಯವಾಗಿದೆ. ಅಗಥಾ ಕ್ರಿಸ್ಟಿಯ ಜನಪ್ರಿಯ ಕಾದಂಬರಿಗಳು ಹಾಗೂ ಆಕೆಯ ನಾಟಕ 'ಮೌಸ್ ಟ್ರ್ಯಾಪ್', ಸೃಷ್ಟಿಸುವ ಕಲಾಸಿದ್ಧಾಂತ, ಟಿ.ವಿ ಧಾರಾವಾಹಿ, ರಿಯಾಲಿಟಿ ಷೋ, ಹಾಸ್ಯಸಂಜೆಗಳು,



ಟೀ ಶರ್ಟುಗಳ ಮೇಲಿನ ಬಗೆಬಗೆಯ ಚಿತ್ತಾರ-ಸ್ಲೋಗನ್‌ಗಳು, ಜನಪ್ರಿಯವಾದ ರಿಬಾಕ್ ಶೂಗಳು, ಮೊಬೈಲ್ ಫೋನ್, ವಿಡಿಯೋ ಗೇಮ್, ಶಾಪಿಂಗ್‌ಮಾಲ್‌ಗಳು, 20-20 ಕ್ರಿಕೆಟ್‌ಮ್ಯಾಚ್, ಜಂಕ್ ಫುಡ್ ಕೋರ್ಟ್‌ಗಳು ಹೀಗೆ ಇತ್ಯಾದಿ ವಸ್ತು ವಿಷಯಗಳು ಜನಪ್ರಿಯತೆ ಪಡೆದುಕೊಳ್ಳುತ್ತಿರುವುದರ ಹಿಂದಿರುವ ಕಲೆಯ ಸಾಂಸ್ಕೃತಿಕ ಸಾಮಾಜಿಕ ಸ್ವರೂಪ ಎಂತಹದು? ಎಂಬ ಅಧ್ಯಯನಗಳು ಈಗ ವ್ಯಾಪಕವಾಗಿ ನಡೆಯುತ್ತಿದ್ದು ಇಡಿಯಾಗಿ ಕಲೆ-ಸಂಸ್ಕೃತಿಯನ್ನು ಗ್ರಹಿಸುವ ಆಶಯ ಈ ಅಧ್ಯಯನಗಳ ಹಿಂದಿದೆ. 'ಇಂದ್ರಸಭಾ' ಎಂಬ ಹಾಡು ಮತ್ತು ಝಗಝಗಿಸುವ ವೇಷಭೂಷಣ ರಂಗಸಜ್ಜಿಕೆ ಹೊಂದಿ ಜನಪ್ರಿಯ ರಂಗನಾಟಕವಾಗಿ 18ನೆಯ ಶತಮಾನದಲ್ಲಿ ಹುಟ್ಟಿ ಮುಂದೆ ವೃತ್ತಿರಂಗಭೂಮಿಯಲ್ಲಿಯ ಅನೇಕ ಹೊಸ ರಂಗಾಂಶಗಳನ್ನು ಹುಟ್ಟುಹಾಕಿದೆ. ಅದರ ಜನಪ್ರಿಯ ಕಲಾಸ್ವರೂಪವನ್ನು ಅರ್ಥಮಾಡಿಕೊಳ್ಳುವುದೇ ಈ ಲೇಖನದ ಪ್ರಯತ್ನ.

ಕನ್ನಡ ವೃತ್ತಿರಂಗಭೂಮಿಯ ಉಗಮ ಹಾಗೂ ವೈಭವದ ಕಾಲದಲ್ಲಿ ಬಂದ ಅನೇಕ ಪ್ರಸಿದ್ಧ ರಂಗಪ್ರಯೋಗಗಳ ಲಕ್ಷಣ, ಪಡೆದ ಪ್ರೇರಣೆ ಪ್ರಭಾವಗಳ ಕುರಿತು ದಾಖಲಿಸುವಾಗ ಸಾಮಾನ್ಯವಾಗಿ ಅವುಗಳನ್ನು ಪಾರ್ಸಿ ಅಥವಾ ಮರಾಠಿ ವೃತ್ತಿರಂಗಭೂಮಿಯಿಂದ ಪಡೆದ ಪ್ರಭಾವ ಪ್ರೇರಣೆಗಳ ಹಿನ್ನೆಲೆಯಲ್ಲಿಯೇ ಗುರುತಿಸುತ್ತಾರೆ. ಇದು ಒಂದುರೀತಿಯಲ್ಲಿ ಸರಿ. ಈ ಎರಡೂ ವೃತ್ತಿರಂಗಭೂಮಿಯ ರಂಗತಂಡಗಳು ನಮ್ಮಲ್ಲಿ ಬಂದು ರಂಗಪ್ರದರ್ಶನ ನೀಡಿದ್ದರಿಂದ ಅವುಗಳ ಪ್ರೇರಣೆ ಪಡೆದು ನಮ್ಮಲ್ಲಿಯ ವೃತ್ತಿರಂಗಭೂಮಿ ರೂಪಗೊಂಡು ಜನಪ್ರಿಯತೆಯನ್ನು ಪಡೆಯಿತು. ಆದರೆ ಒಟ್ಟಾರೆ ವೃತ್ತಿರಂಗಭೂಮಿಯ ಮೂಲ ಸ್ವರೂಪದ ಪ್ರೇರಣೆ ನಮಗೆ ಪಾಶ್ಚಾತ್ಯರಿಂದ ಬಂದ ಪ್ರೊಸೀನಿಯಂ ಮತ್ತು ಮೆಲೋಡ್ರಾಮಾ ರಂಗಪ್ರಸ್ತುತಿಯಲ್ಲಿದ್ದದ್ದು ಒಂದು ಕಡೆಯಾದರೆ, ಇನ್ನೊಂದು ಕಡೆ ಪಾರ್ಸಿರಂಗ ಪ್ರದರ್ಶನಗಳಲ್ಲಿ ಜನಪ್ರಿಯ ರಂಗಾಂಶಗಳು ಸೇರುವಲ್ಲಿ ನಿರ್ಣಾಯಕ ಪಾತ್ರವಹಿಸಿದ 'ಇಂದ್ರಸಭಾ' (1854) ಎಂಬ ಉರ್ದು/ಹಿಂದಿ ಗೀತನಾಟಕದ ಪಾತ್ರವೂ ಮಹತ್ವದ್ದಾಗಿದೆ. ಈ ಸಂಗೀತಾ ರಂಗುರಂಗಿನಾಟಕದ ಜನಪ್ರಿಯತೆಯ ಜೊತೆಗೆ ಅಕಾಲ ಘಟ್ಟದಲ್ಲಿ ಆದ ರಾಜಕೀಯ ಪಲ್ಲಟವೂ ಅಷ್ಟೇ ಕುತೂಹಲಕಾರಿಯಾದದ್ದು. ಏಕೆಂದರೆ ಮೊದಲ ಸ್ವಾತಂತ್ರ್ಯಸಂಗ್ರಾಮ (1857) ನಡೆದದ್ದೂ ನಾಟಕ ಪ್ರದರ್ಶಿತವಾದ

ಜನಪ್ರಿಯತೆಯ ಉತ್ತುಂಗಕಾಲದಲ್ಲಿ. ಹಾಗೆ ಹಿಂದು ಮುಸ್ಲಿಮ್ ಸಾಂಸ್ಕೃತಿಕ ಸಂಕರದ ಒಂದು ಉತ್ತಮ ಕಲಾಮಾದರಿಯಾಗಿ ಆ ಕಾಲಘಟ್ಟದಲ್ಲಿ ಹೊರಹೊಮ್ಮಿದ್ದು ಗಮನಾರ್ಹ ಸಂಗತಿಯಾಗಿದೆ.

'ಇಂದ್ರಸಭಾ' ನಾಟಕವು ಹಿಂದಿ, ಉರ್ದು ಭಾಷೆಯಲ್ಲಿ 'ಆಗಾ ಹಸನ್' ಅಮಾನತ್' (1816-1859) ನಿಂದ ರಚನೆಯಾಯಿತು. ಈತ ಅವಧದ (ಈಗಿನ ಉತ್ತರ ಪ್ರದೇಶ) ರಾಜಾ ವಜೀದಲಿ ಶಾ(1822-1887)ನ ಆಸ್ಥಾನದ ಕವಿಯಾಗಿದ್ದ. ಕೃತಿ ರಚನೆಕಾರ ಅಮಾನತ್ ಕವಿಯಾದರೂ ಅದೊಂದು ರಮ್ಯ, ವೈಭವಪೂರ್ಣ ಜನಪ್ರಿಯ ರಂಗರೂಪಕವಾಗಿದ್ದು ವಜೀದಲಿ ಶಾನ ರಂಗ ಕಲ್ಪನೆಯಿಂದಾಗಿ. ಈ ಸುಲ್ತಾನ ಸ್ವತಃ ಕವಿ, ಕಥಕ್ ನೃತ್ಯಪಟು ಕೂಡಾ ಆಗಿದ್ದ. ಆಗ ಈತನ ಪ್ರೋತ್ಸಾಹದಿಂದಲೆ ಕಥಕ್ ನೃತ್ಯ ಪ್ರಕಾರ ಈಗ ಈ ಮಟ್ಟಕ್ಕೆ ಬೆಳೆದುನಿಂತಿದೆ.

''ಇಂದ್ರಸಭಾ' ನಾಟಕದ ಕಥೆ ಸ್ಥೂಲವಾಗಿ ಹೀಗಿದೆ:

'ಇಂದ್ರಸಭಾ' ಅಂದರೆ ಇಂದ್ರನ ಸಭೆ (ಮೈಫಿಲ್), ಇಲ್ಲಿ ನಡೆಯುವ ಘಟನೆಗಳನ್ನೆ ನಾಟಕೀಯವಾಗಿ ಹೆಣೆಯಲಾಗಿದೆ. ಇಂದ್ರಸಭೆಯ ಅಪೂರ್ವ ಸುಂದರಿ ಸಬ್ಜಪರಿ, ಅಂದರೆ ಪಚ್ಚೆ ಅಪ್ಸರೆ (emerald fairy) ಮರ್ತ್ಯ ಲೋಕದ ರಾಜಕುಮಾರ ಗುಲಫಾಮ್‌ನನ್ನು ಮೋಹಿಸಿ ದೇವಲೋಕಕ್ಕೆ ಅಂದರೆ ಇಂದ್ರನಸಭೆಗೆ ತರಲು ಪ್ರಯತ್ನಿಸುತ್ತಾಳೆ. ಓರ್ವ ಮರ್ತ್ಯನನ್ನು ದೇವಲೋಕಕ್ಕೆ ತರುವ ಅಪ್ಸರೆಯ ವರ್ತನೆ ಇಂದ್ರನಿಗೆ ಕೋಪತರಿಸುತ್ತದೆ. (ವಜೀದಲಿ ಶಾನೇ ದೇವೇಂದ್ರ ಪಾತ್ರ ವಹಿಸುತ್ತಿದ್ದ) ಗುಲ್‌ಫಾಮನನ್ನು ಕೈದು ಮಾಡಿ ಇಂದ್ರ ಅಪ್ಸರೆಗೆ ಭೂಲೋಕ ವಾಸದ ಶಿಕ್ಷೆ ಕೊಡುತ್ತಾನೆ. ಭೂಲೋಕದಲ್ಲಿ ಆಕೆ ಓರ್ವ ಪ್ರಸಿದ್ಧ ಅಲೆಮಾರಿ ಗಾಯಕಿ (ಜೋಗನ್) ಆಗುತ್ತಾಳೆ ಮತ್ತು ಇಂದ್ರನ ಸಭೆಗೆ ಗಾಯಕಿಯಾಗಿ ಬಂದು ತನ್ನ ಗಾಯನದಿಂದ ಇಂದ್ರನನ್ನು ಸಂತುಷ್ಟಗೊಳಿಸಿ ವರವಾಗಿ ತನ್ನ ಪ್ರಿಯಕರ ರಾಜಕುಮಾರ ಗುಲ್‌ಫಾಮ್‌ನನ್ನು ಮರಳಿ ಪಡೆಯುತ್ತಾಳೆ. ಸಂತೋಷದಿಂದ ತನ್ನ ಪ್ರಿಯಕರನ ಜೊತೆಗೆ ಇತರ ಅಪ್ಸರೆಯರೊಂದಿಗೆ ಹಾಡುತ್ತಾ ಕುಣಿಯುತ್ತಾಳೆ. ಇಲ್ಲಿಗೆ ನಾಟಕ ಮುಗಿಯುತ್ತದೆ .

ಇಡೀ ನಾಟಕ ಪದ್ಯರೂಪದಲ್ಲಿದೆ.

ಈ ನಾಟಕದ ಕಥೆ ಇಷ್ಟು ಸರಳವಾಗಿದ್ದರೂ ಇದರ ವಿಶೇಷತೆ ಇರುವುದು ಎರಡು ಸಂಸ್ಕೃತಿಗಳ ಕಥನಗಳನ್ನು ಬೆಸೆದ ನಾಟಕಕಾರನ ಸೃಜನಶೀಲತೆಯಲ್ಲಿ. ಇಂದ್ರನ ಪಾತ್ರವಹಿಸಿದ ವಜೀದಲಿ ಶಾ ಸುಲ್ತಾನ ಕೃಷ್ಣನಂತೆಯೂ, ಉಳಿದ ಅಪ್ಸರೆಯರು ಗೋಪಿಕೆಯರ ಹಾಗೆ ಹೋಲಿಸಿ ಕಾಣಿಸಲಾಗಿದೆ. ನಮ್ಮ ಜನಪದ ಹಾಡು ಕಲ್ಪನೆಯ ಪ್ರಕಾರ ಇಂದ್ರ ಮಳೆಯ ಹಾಗೂ ಫಲವತ್ತತೆಯ ಸಂಕೇತ ಕೂಡಾ ಹೌದು. ಮಧ್ಯಯುಗದ ಹೊತ್ತಿಗೆ ಆತ ರಾಜತ್ವದ ಸಂಕೇತವಾಗಿ ಸದಾ ಅಪ್ಸರೆಯರ ಮಧ್ಯದಲ್ಲಿರುವಾತ, ಈ ಕಲ್ಪನೆಯನ್ನು ನಮ್ಮ ದೇಶವನ್ನಾಳಿದ ಮುಸ್ಲಿಂ ದೊರೆಗಳಿಗೂ ಅನ್ವಯಿಸಲಾಯಿತು. ಇನ್ನು ಅಪ್ಸರೆ(ಪರಿ)ಗಳ ಕಥೆಗಳು ಉರ್ದು ಹಾಗೂ ಪರ್ಶಿಯನ್ ಕಥಾನಕಗಳಲ್ಲಿ ವಿಫುಲವಾಗಿದ್ದು ಅಮಾನತ್ ಕವಿ ಆ ಕಥಾನಕಗಳನ್ನು ಅಲ್ಲಿಂದ ಎತ್ತಿಕೊಂಡು ಇಂದ್ರನ ಪಾತ್ರದೊಂದಿಗೆ ಸೇರಿಸಿ ಹೊಸ ಕಸಿಮಾಡಿದ್ದಾನೆ. ದಾಖಲೆಗಳ ಪ್ರಕಾರ ಕಿಸ್ಸಾ, ದಾಸ್ತಾನ ಮಸನವಿ ಈ ಪರ್ಶಿಯನ್ ಕಥಾನಕಗಳಲ್ಲಿ ಬರುವ 'ಬೇನಜೀರ್' ಎಂಬ ರಾಜಕುಮಾರ, ಮತ್ತು 'ಬದಿರ್-ಎ- ಮುನೀರ್' ಎಂಬ ರಾಜಕುಮಾರಿ ಇವರೀರ್ವರ ಆಧ್ಯಾತ್ಮಿಕ ಪ್ರಣಯ ಕಥೆಯನ್ನು ಹೆಣೆದ ಮೀರ್ ಹಸನ್ (1727-1786) ಎಂಬಾತನ 'ಶಿರ್-ಉಲ್- ಬಯಾನ್' ಎಂಬ ಕಥನ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ.

ಅಮಾನತ್ ಕವಿ ಈ ನಾಟಕವನ್ನು ರಚಿಸುವಲ್ಲಿ ಉತ್ತರಭಾರತದಲ್ಲಿ ಪ್ರಚಲಿತವಿರುವ ಕೃಷ್ಣನ ಆಧ್ಯಾತ್ಮಿಕ ಶೃಂಗಾರ ರೂಪಕ 'ರಾಸ್' ಅಥವಾ 'ರಾಸಲೀಲಾ' ದೃಶ್ಯನಿರ್ಮಿತಿಯ ಪ್ರೇರಣೆಯನ್ನೂ ಪಡೆದಿದ್ದಾನೆ. ಅಂದರೆ ಒಂದು ಕಡೆ ಸೂಫಿ ಆಧ್ಯಾತ್ಮಿಕ ಪ್ರೇಮಕಥನ (ಮಸನವಿ) ಮಾದರಿ ಹಾಗೂ ಇನ್ನೊಂದು ಕಡೆ ವೈಷ್ಣವ ಅಟ್ಟದಾಟಗಳ (ಲೀಲಾ) ಮಾದರಿಗಳ ಸೃಜನಶೀಲ ಸಂಕರ ಮಾಡಿ ಒಂದು ರಮ್ಯಲಕ್ಷಣವುಳ್ಳ ರಂಗರೂಪಕವನ್ನು ಆತ ಕಟ್ಟಿದ್ದಾನೆ. ಅಲ್ಲಿಯವರೆಗೆ ನಾಟಕ ಸಾಹಿತ್ಯವೆಂದರೆ ಕೇವಲ ಸಾಹಿತ್ಯದ ಓದು-ಬರಹ ಬಲ್ಲ ವರ್ಗಕ್ಕೆ ಸೀಮಿತವಾಗಿದ್ದದ್ದು 'ಇಂದ್ರಸಭಾ' ಕೃತಿಯಿಂದಾಗಿ ಜನಸಾಮಾನ್ಯರ ಹತ್ತಿರಕ್ಕೆ ನಾಟಕ ಸಾಹಿತ್ಯ ಬಂದದ್ದೂ ಇದರ ವಿಶೇಷತೆ. ಅಂದರೆ ಏಕಕಾಲಕ್ಕೆ ಉತ್ಕೃಷ್ಟ ಹಾಗೂ ಜನಸಾಮಾನ್ಯರಿಗೂ ಸಲ್ಲಬಲ್ಲ ಒಂದು ನಾಟಕ ಕೃತಿಯ ರಚನೆಗೆ ಅಮಾನತ್ ಕವಿ ಪ್ರಯತ್ನಿಸಿದ್ದಾನೆ. ಮಹಾನ್ ನಾಟಕಕಾರ ಶೇಕ್ಸ್‌ಪಿಯರ್ ಕೂಡಾ ತನ್ನ ಹಿಂದಿದ್ದ ಹಲವಾರು ಕಥೆ-ನಾಟಕಗಳನ್ನು ಮುರಿದು ಹೊಸ ನಾಟಕಗಳನ್ನು ಕಟ್ಟಿದ್ದು ಈ ಎರಡೂ ವರ್ಗದ ಪ್ರೇಕ್ಷಕರನ್ನು ಹಿಡಿದಿಡುವುದಕ್ಕಾಗಿಯೆ.

'ಇಂದ್ರಸಭಾ' ನಾಟಕದ ಕೃತಿ ಕೇವಲ ಸಾಹಿತ್ಯ ಕೃತಿಯಾಗಿದ್ದರೆ ಅದಕ್ಕೆ ಜನಪ್ರಿಯತೆ ಬರುತ್ತಿರಲಿಲ್ಲ ಎಂಬುದೂ ಅಷ್ಟೇ ದಿಟ. ಅದು ಜನಪ್ರಿಯವಾದದ್ದು ರಂಗಕೃತಿಯಾಗಿ ರಂಗಕ್ಕೇರಿದಾಗ. ವಜೀದಲಿ ಶಾ ಅದನ್ನೊಂದು ಸ್ಪೆಕ್ಟಾಕಲ್ ರಂಗ ಪ್ರದರ್ಶನವನ್ನಾಗಿ ಅಮಾನತ್ ಕವಿಯ ಜೊತೆಗೂಡಿಯೇ ಮಾಡಿದ. ಆಶ್ಚರ್ಯದ ಸಂಗತಿಯೆಂದರೆ ಅದಾಗಲೇ ಈ ದೇಶದಲ್ಲಿ ಭಾಮಾಕಲಾಪಂ, ಕೃಷ್ಣನಾಟ್ಟಂ ಮುಂತಾದ ಕೃಷ್ಣ ಕಥಾನಕಗಳ ಕೆಲ ಜನಪದ ರಂಗಪ್ರಕಾರಗಳು ಹುಟ್ಟಿಕೊಂಡಿದ್ದವು. ಉತ್ತರ ಕರ್ನಾಟಕದಲ್ಲಿಯೂ ಪ್ರಸಿದ್ಧ ಜನಪದ ರಂಗನಾಟಕ 'ಶ್ರೀಕೃಷ್ಣ ಪಾರಿಜಾತ' ಪ್ರಕಾರದ ಉದಯವೂ ಸರಿಸುಮಾರು ಇಂದ್ರಸಭಾ ರಂಗಕೃತಿ ಉಗಮವಾದ ಕಾಲಘಟ್ಟದಲ್ಲಿಯೇ ಆಯಿತು. ಆದರೆ ಅದು ಶುದ್ಧ ಜಾನಪದ ಆಟ ಆಧ್ಯಾತ್ಮಿಕ ಪ್ರೇಮ ಕಥಾನಕವುಳ್ಳ 'ಪಾರಿಜಾತ' ಗೀತರೂಪಕ ಅಪರಾಳ ತಮಣ್ಣನಿಂದ ರಚಿತವಾದದ್ದು. ನಂತರ ಕುಲಗೋಡ ತಮ್ಮಣ್ಣನಿಂದ (ಸು 1830-74) ರಂಗರೂಪಗೊಂಡು ಜನಪ್ರಿಯ ರಂಗಭೂಮಿಯೊಂದು ಹುಟ್ಟಿಕೊಂಡಿತು ಎಂಬುದನ್ನು ವಿದ್ವಾಂಸರು ಗುರುತಿಸುತ್ತಾರೆ. ಕುತೂಹಲದ ಸಂಗತಿಯೆಂದರೆ ಇಂದ್ರಸಭಾ ಹಾಗೂ ಪಾರಿಜಾತ ಈ ಎರಡೂ ರಂಗನಾಟಕಗಳಲ್ಲಿ ದೈವಿಕಪ್ರೇಮ (divine love) ದ ಕಥನವಿದ್ದರೂ 'ಪಾರಿಜಾತ' ನಾಟಕದಲ್ಲಿ ಕೃಷ್ಣ ಸತ್ಯಭಾಮೆಯರ ಕಥನವನ್ನು ಮನುಷ್ಯ ಸಹಜ ನೆಲೆಯಿಂದ ಕಥಿಸುತ್ತಲೆ ಅದರ ದೈವಿಕ ನೆಲೆಯನ್ನು ವಿಶ್ವಾತ್ಮಕವಾಗಿ ಅರ್ಥೈಸಲು ಪ್ರಯತ್ನಿಸುತ್ತದೆ. ಹೀಗಾಗಿ ಅದರ ಭಕ್ತಿ-ಆಧ್ಯಾತ್ಮದನೆಲೆ ಗಟ್ಟಿಯಾದದ್ದು. ಈ ವಿಶ್ವಾತ್ಮಕ ಭಕ್ತಿಯ ಹುಡುಕಾಟವೆ ಜನಪದರ ಆರಾಧನಾಗುಣ ಪಡೆದು ಜಾನಪದ ರಂಗ-ಆಟವಾಗಿದೆ. 'ಇಂದ್ರಸಭಾ' ನಾಟಕ ಕೂಡ ಸೂಫಿ ಹಾಗೂ ರಾಸಲೀಲಾ ಕೃತಿಗಳಿಂದ ದೈವಿಕ ಪ್ರೇಮಕಾವ್ಯ-ಕಥನದ ಪ್ರೇರಣೆ ಪಡೆದರೂ ಅಲ್ಲಿ ಇಡೀ ನಾಟಕ ಶೃಂಗಾರ ರೂಪಕದತ್ತ ತಿರುಗಿ ಅದೇ ಸ್ಥಾಯಿ ಆಗಿಬಿಡುತ್ತದೆ. ಈ ನಾಟಕಕಾರ ಕೃಷ್ಣ ಕಥಾನಕದ ಶೃಂಗಾರಲೀಲೆಯನ್ನಷ್ಟೆ ಇಂದ್ರನಿಗೆ ವಜಿದಲಿ ಶಾ ಕಸಿಮಾಡಿದ. ಕೃಷ್ಣನಿಗಿರುವ ಆಧ್ಯಾತ್ಮದ-ದೈವಿಕನೆಲೆ ಇಂದ್ರಸಭಾಕಾರನಿಗೆ ಗೌಣವಾಯಿತು. ಹೀಗಾಗಿ ಈ ಕೃತಿ ಮೂಲದ್ರವ್ಯವನ್ನು ಭಕ್ತಿಕಾವ್ಯ ಹಾಗೂ ರಂಗರೂಪಕಗಳಿಂದ ಪಡೆದಿದ್ದರೂ ಜನಮಾನಸದಲ್ಲಿರುವ ಭಕ್ತಿಯ ನಂಬಿಕೆಯ ರಂಗುರಂಗಿನ (ಸ್ಪೆಕ್ಟಾಕಲ್) ರಂಗಪ್ರಸ್ತುತಿಯಿಂದಾಗಿ ಇಂದ್ರಸಭಾ ನಾಟಕ ಭಕ್ತಿಪರಂಪರೆಯ ಜನಪದನಾಟಕವಾಗದೇ ಒಂದು ಆಧುನಿಕ ಜನಪ್ರಿಯ ನಾಟಕವಾಗಿದೆ. ಹಾಗೆ ಅದು ಪ್ರದರ್ಶನಗೊಳ್ಳುತ್ತಿದ್ದದ್ದು ಆಧುನಿಕ ರಂಗಸ್ಥಳವಾದ ಪ್ರೊಸೀನಿಯಂ (ಚಿತ್ರಚೌಕಟ್ಟು) ರಂಗಸ್ಥಳದ ಪರಿಕಲ್ಪನೆಯಲ್ಲಿ, ನಮ್ಮ ಕಂಪನಿ ನಾಟಕದ ಯುಗದಲ್ಲಿ (ಭಕ್ತ ಕಬೀರ, ಭಕ್ತ ಅಂಬರೀಶ ಇತ್ಯಾದಿ) ಹಾಗೆ ಮುಂದೆ ಚಲನಚಿತ್ರಯುಗದಲ್ಲೂ (ಭಕ್ತ ಕುಂಬಾರ, ಭಕ್ತ ಕನಕದಾಸ ಇತ್ಯಾದಿ) ಭಕ್ತಿಯೆಂಬುದು ರಂಗದಮೇಲೆ ಪ್ರದರ್ಶಿಸಲ್ಪಡುವ ಒಂದು ಜನಪ್ರಿಯದ್ರವ್ಯ ಅಷ್ಟೆ. ಅಲ್ಲಿ ಜನಪದ ರಂಗಪ್ರಕಾರಗಳಲ್ಲಿ ಅಭಿವ್ಯಕ್ತಿ ಪಡೆಯುವ ವಿಶಾಲ ಅರ್ಥದ ಭಕ್ತಿಯ ಆಟ ಅಥವಾ ಲೀಲೆಯಲ್ಲ. 18ನೇ ಶತಮಾನದ ಆರಂಭದಲ್ಲೆ ಬ್ರಿಟಿಷರಿಂದಾಗಿ ಬಂಗಾಲದಲ್ಲಿ ಆಧುನಿಕ ರಂಗಭೂಮಿಯ ಪ್ರವೇಶ ಆಗಿತ್ತು, ಆದರೆ ಮೈಕೆಲ್ ಮಧುಸೂದನ ದತ್ತರ ನಾಟಕಗಳಾಗಲಿ, ಹೆರಾಸಿಮ್ ಲೆಬೆಡೆಫ್‌ನ ಬಂಗಾಲಿ ನಾಟಕಗಳ ಪ್ರಯೋಗಗಳಾಗಲಿ 'ಇಂದ್ರಸಭಾ' ರೀತಿಯ ಸ್ಪೆಕ್ಟಾಕಲ್ ರಂಗಪ್ರಯೋಗಳಾಗಿರಲಿಲ್ಲ ಮತ್ತು ವಜೀದಲಿ ಶಾನ 'ಇಂದ್ರಸಭಾ' ರಂಗ ಪ್ರಸ್ತುತಿ ವಿಕ್ಟೋರಿಯನ್ ದೃಶ್ಯವೈಭವದ ರಂಗಪ್ರಸ್ತುತಿಗಿಂತ ಫ್ರೆಂಚ್ ಒಪೇರಾ ರಂಗಪ್ರದರ್ಶನಕ್ಕೆ ಹತ್ತಿರವಾಗಿದೆ. ದಾಖಲೆಗಳ ಪ್ರಕಾರ ಫ್ರೆಂಚ್ ಮ್ಯೂಸಿಕಲ್ಸ್ ಎಂಬ ದೃಶ್ಯ ವೈಭವ-ರಂಗುರಂಗಾದ ಸಂಗೀತಮಯ ರಂಗಪ್ರಕಾರಗಳು ಭಾರತಕ್ಕೆ ಆಗ ಭೇಟಿಕೊಡುತ್ತಿದ್ದು ವಜೀದಲಿ ಶಾನ ಆಸ್ಥಾನದಲ್ಲಿಯೂ ಪ್ರದರ್ಶನಗೊಳ್ಳುತ್ತಿದ್ದವು ಎಂದು ತಿಳಿಸುತ್ತವೆ. ವಜೀದಲಿ ಶಾ ಇಂದ್ರಸಭಾ ರಂಗಪ್ರದರ್ಶನದ ಪ್ರೇರಣೆಯನ್ನು ಅಲ್ಲಿಂದ ಪಡೆದಿದ್ದಾನೆ ಎಂದೂ ಹೇಳಬಹುದು. ವಜೀದಲಿ ಶಾ ಸ್ವತಃ ನೃತ್ಯಪಟು ಹಾಗೆ ನೃತ್ಯ ಸಂಯೋಜಕನಾಗಿದ್ದ ಇಂದ್ರಸಭಾ ನಾಟಕ ಆರಂಭವಾಗುವುದೆ ಇಂದ್ರನ ಸಭೆಯಲ್ಲಿ ವಿವಿಧ ಅಪ್ಸರೆಯರ ನೃತ್ಯದಿಂದ. ನೀಲಿ, ಹಸಿರು, ಕೆಂಪು, ಹಳದಿ ಹೀಗೆ ವಿವಿಧ ಬಗೆಯ ಕಣ್ಣು ಕೋರೈಸುವ ಬಣ್ಣಗಳಿಂದೊಡಗೂಡಿದ ಝಗಝಗಿಸುವ ವೇಷಭೂಷಣ ತೊಟ್ಟ ಅಪ್ಸರೆಯರು ನಾಲ್ಕು ಋತುಗಳನ್ನು ಅಭಿವ್ಯಕ್ತಿಸುವ ಹಾಡು ನೃತ್ಯ ಪ್ರದರ್ಶಿಸುತ್ತಾರೆ. ಸುಮಾರು 100ಕ್ಕೂ ಹೆಚ್ಚು ಹಾಡುಗಳು ಈ ನಾಟಕದಲ್ಲಿದ್ದೂ ರಾಗ ರಾಗಿಣಿಯ ಹಾಡುಗಾರಿಕೆಯನ್ನು ರಂಗದ ಮೇಲೆ ತರಲಾಗುತ್ತಿತ್ತು, ಠುಮರಿ, ಹೋರಿ, ಗಜಲ್ ರಾಸಲೀಲಾ- ಹೀಗೆ ಹಲವು ವೈವಿಧ್ಯಮಯ ಸಂಗೀತ ಪ್ರಕಾರಗಳನ್ನು ರಂಗಪ್ರದರ್ಶನದಲ್ಲಿ ಅಳವಡಿಸಿ ಪ್ರದರ್ಶನವು ಮನರಂಜನೆಯ ಜೊತೆಗೆ ಆಕರ್ಷಣೆಯೂ ಪಡೆಯುವಂತೆ ಮಾಡುತ್ತಾರೆ ವಜೀದಲಿ ಶಾ ಮತ್ತು ಅಮಾನತ್‌ದ್ವಯರು. ಪಾರ್ಸಿ ಕಂಪನಿ ನಾಟಕಗಳು ಈ ನಾಟಕದ ದೃಶ್ಯ ವೈಭವ ಹಾಗೂ ವೈವಿಧ್ಯಮಯ ಸಂಗೀತದ ಪ್ರೇರಣೆ ಪ್ರಭಾವವನ್ನು ಪಡೆದದ್ದು ಸ್ಪಷ್ಟ. ನಮ್ಮ ಸಂಗೀತ ನಾಟಕಗಳಿಗೆ ಮರಾಠಿ ಸಂಗೀತ ನಾಟಕಗಳ ಪ್ರಭಾವ ನೇರವಾಗಿ ಆಗಿದ್ದರೆ 'ಇಂದ್ರಸಭಾ'ದ ಪ್ರೇರಣೆ ಪರೋಕ್ಷವಾದದ್ದು ಹಾಗು ಅದು ಪಾರ್ಸಿ ಕಂಪನಿಗಳ ಸ್ಪೆಕ್ಟಾಕಲ್ ರಂಗಪ್ರದರ್ಶನದಿಂದ ಪಡೆದದ್ದು.

ವಜೀದಲಿ ಶಾನ ಕಲೆ, ಸಾಹಿತ್ಯದಲ್ಲಿಯ ಆಸಕ್ತಿ ಮತ್ತು ಸ್ವತಃ ಆತನೇ ಇಂದ್ರನ [illegible] ವೈಭವದ 'ಇಂದ್ರಸಭಾ' ರಂಗಪ್ರದರ್ಶನ ಆತನ ರಾಜಕೀಯ ಬದುಕಿನ ಮೇಲೂ ಪರಿಣಾಮ ಬೀರಿತು. ಆತನ ಕಾಲದಲ್ಲಿ ಆಗಲೆ 'ಅವಧ' ರಾಜ್ಯವನ್ನು ಈಸ್ಟ್ ಇಂಡಿಯಾ ಕಂಪನಿ ವಶಕ್ಕೆ ತೆಗೆದುಕೊಂಡಿತ್ತು, ತಮ್ಮ ಸಾಮ್ರಾಜ್ಯ ವಿಸ್ತರಣೆಯ ಭರದಲ್ಲಿದ್ದ ಬ್ರಿಟಿಷರು ಆತನ ಕಲಾಸಕ್ತಿಯನ್ನು 'ವಿಷಯ ಲೋಲುಪತೆ'ಯ ಆಪಾದನೆ ಗೈದು 'ಅವಧ ರಾಜ್ಯ ಆತನ ಆಡಳಿತದಲ್ಲಿ ಅಂದಗೆಟ್ಟಿದೆ' ಎಂದು 1856 ರಲ್ಲಿ ಆ ರಾಜ್ಯವನ್ನು ಸಂಪೂರ್ಣ ತಮ್ಮ ವಶಕ್ಕೆ ತೆಗೆದುಕೊಂಡರು. ಪದಚ್ಯುತಗೊಂಡ ಆತನನ್ನು ಬ್ರಿಟಿಷರು ವಾರ್ಷಿಕ ಮಾಸಾಶನ ನಿಗದಿಪಡಿಸಿ ಅವಧದಿಂದ ದೂರ ಕಲಕತ್ತಾದ ಹತ್ತಿರವಿರುವ ಮೆಟಿಯಾಬ್ರುಜ್ ಎಂಬಲ್ಲಿ ಇಟ್ಟರು. ಲಖನೌದಿಂದ ದೂರಾದ ಶಾ ಅದೇ ನೋವಿನಲ್ಲಿ 1887 ರಲ್ಲಿ ತೀರಿಕೊಂಡ. ಆತ ರಚಿಸಿದ ಭೈರವಿ ರಾಗದಲ್ಲಿಯ ಠುಮರಿ 'ಬಾಬುಲ್ ಮೋರಾ ನೈಹರ ಛೂಟಾ ಹಿ ಜಾಏ' ಈ ಧುನ್ ಅಗಲಿಕೆಯ ನೋವಿನ ಉತ್ಕೃಷ್ಟ ಹಾಡಾಗಿದೆ. ಬಹುತೇಕ ಪ್ರಸಿದ್ಧ ಗಾಯಕರೆಲ್ಲರೂ ಈ ಹಾಡನ್ನು ಹಾಡಿದ್ದಾರೆ. ಈ ಠುಮರಿ ರಚಿಸಲು ವಜೀದಲಿ ಶಾಗೆ ಪ್ರೇರಣೆ ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ನಾಟಕದಲ್ಲಿ





ಕಣ್ವ ಋಷಿಗಳು ಶಕುಂತಲೆಯನ್ನು ಬೀಳ್ಕೊಡುವಾಗ ಅನುಭವಿಸುವ ದುಃಖದಿಂದ ಹೇಳುವ ಶ್ಲೋಕದಿಂದ ಪಡೆದುದ್ದಾಗಿ ಹೇಳಲಾಗುತ್ತದೆ.

ಇಂದ್ರಸಭಾ ನಾಟಕ ಕನ್ನಡದಲ್ಲಲ್ಲದೆ (ಕನ್ನಡದಪ್ರತಿ ನನಗೆ ದೊರೆತಿಲ್ಲ ಆದರೆ ಕಂಪನಿ ನಾಟಕದವರು ಇಂದ್ರಸಭಾ ನಾಟಕವನ್ನು ಆಡುತ್ತಿದ್ದುದರ ಬಗ್ಗೆ ದಾಖಲೆಗಳು ತಿಳಿಸುತ್ತವೆ) ಬಹುತೇಕ ಭಾರತೀಯ ಎಲ್ಲ ಭಾಷೆಗಳಲ್ಲಿ ಅನುವಾದಗೊಂಡು ಪ್ರದರ್ಶಿತವಾಗಿದೆ. ವೃತ್ತಿರಂಗಭೂಮಿಯ ಸಂಗೀತಕ್ಕಂತೂ ಈ ನಾಟಕದ ಕೊಡುಗೆ ಅವಿಸ್ಮರಣೀಯ. ಈ ಕಥನಚಲನಚಿತ್ರವಾಗಿಯೂ ತೆರೆಕಂಡಿತು. ಇದರಲ್ಲಿ ಬರುವ ಅಸಂಖ್ಯ ಹಾಡುಗಳಿಂದಾಗಿ ಇಂದ್ರಸಭಾ ದಾಖಲೆ ನಿರ್ಮಿಸಿದೆ. ವಜೀದಲಿ ಶಾ ಮತ್ತು ಅಮಾನತ್ ಕವಿ ಇವರೀರ್ವರೂ ಇಂದ್ರಸಭಾದಂತಹ ಒಂದು ಹೊಸ ರಂಗಕೃತಿಯನ್ನು ಹಿಂದಿ ರಂಗಭೂಮಿಗೆ ತನ್ಮೂಲಕ ಭಾರತೀಯ ರಂಗಭೂಮಿಗೆ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಈ ನಾಟಕದ ಪ್ರಭಾವ ಭಾರತೀಯ ರಂಗಭೂಮಿಯ ಮೇಲೆ ಎಷ್ಟಾಯಿತೆಂದರೆ ಮುಂದೆ ಈ ಸಭಾ ಮಾದರಿಯ ಪ್ರೇರಣೆಯಿಂದಾಗಿ 'ಮಾದಾರಿಲಾಲ್ ಕಿ ಇಂದ್ರಸಭಾ', 'ಫರುಕ್ ಸಭಾ', 'ರಾಹತ್ ಸಭಾ', 'ನಗರ್ ಸಭಾ', 'ನೇಚರ ಸಭಾ', 'ಆಶಿಕ್ ಸಭಾ' ಅಷ್ಟೇ ಅಲ್ಲದೆ 'ಬಂದರ್ ಸಭಾ'ದವರೆಗೆ ವೈವಿಧ್ಯಮಯ ಸಭಾ ರಂಗರೂಪಗಳು ಬಂದವು. ನಮ್ಮ ಪಾರಿಜಾತದಲ್ಲಿಯೂ ಕೂಡಾ 'ಅಪ್ಪಾಲಾಲನ ಪಾರಿಜಾತ', 'ಲೋಕಾಪೂರ ದೇಶಪಾಂಡೆ ಪಾರಿಜಾತ', 'ಶಿವಪಾರಿಜಾತ'. ಇತ್ಯಾದಿ ವೈವಿಧ್ಯಮಯ ಪಾರಿಜಾತ ಆಟಗಳೂ ಇದ್ದುದನ್ನು ಇಲ್ಲಿ ಉಲ್ಲೇಖಿಸಬಹುದು.

ಇಂದ್ರಸಭಾ ನಾಟಕದ ವಜೀದಲಿ ಶಾನ ಆಡಳಿತದ ಕಾಲಘಟ್ಟವನ್ನು ಕುರಿತಾಗಿ ಬಂದ ಮುನ್ಷಿ ಪ್ರೇಮಚಂದರ ಒಂದು ಸಣ್ಣಕತೆಯ ಆಧಾರದ ಮೇಲೆ ಮುಂದೆ ಸತ್ಯಜಿತ್‌ರೇ 'ಶತರಂಜ ಕೆ ಕಿಲಾಡಿ' ಎಂಬ ಚಲನಚಿತ್ರ ಮಾಡಿದರು. ಹಾಗೆ ನಮ್ಮ ಕನ್ನಡದ ಪ್ರತಿಭಾನ್ವಿತ ರಂಗನಿರ್ದೇಶಕ ಮತ್ತು ನಾಟಕಕಾರರಾದ ಪ್ರಸನ್ನರ 'ದಂಗೆಯ ಮುಂಚಿನ ದಿನಗಳು'ನಾಟಕ ಈ ಕಾಲಘಟ್ಟವನ್ನು ಸ್ಥೂಲವಾಗಿ ವಿಷಯ ಲೋಲುಪತೆಯಲ್ಲಿ ಮುಳುಗಿದ ವ್ಯಕ್ತಿಗಳ ಮತ್ತು ಸಮಾಜದ ಅವನತಿಯ ಕಥಾನಕಗಳೆಂದು ನಿರೂಪಿಸಿದ್ದನ್ನು ಕಲೆ, ರಾಜಕೀಯ ಮತ್ತು ಸಂಸ್ಕೃತಿಯ ಅಂತರ್‌ಸಂಬಂಧದ ಹಿನ್ನೆಲೆಯಲ್ಲಿ ಮರು ಅವಲೋಕಿಸಬಹುದು.

■ ಡಾ. ಪ್ರಕಾಶ ಗರುಡ





ಶಾಲೆ ಮುಚ್ಚುವುದಕ್ಕಿಂತ ಮಾರಿ ಬಿಡುವುದು ಲೇಸೆಂದು...

ಬಿಜೆಪಿ ಸರ್ಕಾರವೊಂದು ತಾನು ಸರ್ಕಾರೀ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸುತ್ತಿದ್ದೇನೆ ಎಂದು ಹೇಳಿದರೆ, ಅದರರ್ಥ ಅದು ಶಾಲೆಗಳನ್ನು ಮುಚ್ಚುತ್ತಿದೆ ಎಂದರ್ಥ ಮಾಡಿಕೊಳ್ಳಬೇಕು ಎಂಬುದು ಕರುನಾಡಿನ ಜನಸಾಮಾನ್ಯರ ಸಾಮಾನ್ಯ ಜ್ಞಾನಕ್ಕೆ ಗೊತ್ತಾಗಿದೆ. ಆದರೆ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬರುವ ಮುಂಚೆ ಪ್ರಣಾಳಿಕೆಯಲ್ಲಿ 'ಗ್ರಾಮಾಂತರ ಪ್ರದೇಶದಲ್ಲಿ ಇರುವ ಎಲ್ಲಾ ಸರ್ಕಾರಿ ಶಾಲೆಗಳನ್ನು ಶಿಕ್ಷಣ ಸಾಮರಸ್ಯ ವಿದ್ಯಾ ಕೇಂದ್ರಗಳನ್ನಾಗಿ ರೂಪಿಸಲು ಕ್ರಮ ತೆಗೆದುಕೊಳ್ಳುವುದು ಮತ್ತು ಸರ್ಕಾರೀ ಶಾಲೆಗಳನ್ನು ಯಾವುದೇ ಕಾರಣದಿಂದ ಮುಚ್ಚದಿರುವಂತೆ ಪರ್ಯಾಯ ಕ್ರಮ ಕೈಗೊಳ್ಳುವುದು' ಎಂದು ಹೇಳಿದರೆ ಅದನ್ನು ಏನೆಂದು ತಿಳಿದುಕೊಳ್ಳಬೇಕು?

ಅದರರ್ಥ ಸರ್ಕಾರವು ಶಾಲೆಯನ್ನು ಮುಚ್ಚುವುದಿಲ್ಲ ಬದಲಿಗೆ ಮಾರುತ್ತದೆ ಎಂದು ತಿಳಿದುಕೊಳ್ಳಬೇಕು! ಹೌದು, ಅದರ ಮೊದಲ ಸೂಚನೆ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್‌ನಲ್ಲೇ ಸಿಕ್ಕಿತು. ಬಜೆಟ್‌ನ 'ಶಿಕ್ಷಣ' ವಿಭಾಗದಲ್ಲಿ 'ಅಕ್ಷರ ಶಕ್ತಿಯ ಅಪಾರ ಶಕ್ತಿಯನ್ನು ಅರಿತಿರುವ ನಮ್ಮ ಸರ್ಕಾರವು ಶೈಕ್ಷಣಿಕ ಕ್ಷೇತ್ರಕ್ಕೆ ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಸುಧಾರಿಸಲು ನಾವು ಹೆಚ್ಚು ಗಮನ ಕೇಂದ್ರೀಕರಿಸಲಿದ್ದೇವೆ. ಸರ್ಕಾರಿ ಶಾಲೆಯನ್ನು 'ಶಿಕ್ಷಣ ಸಾಮರಸ್ಯ ವಿದ್ಯಾ ಕೇಂದ್ರಗಳನ್ನಾಗಿ' ಮರುರಚನೆಗೊಳಿಸಲಾಗುವುದು. ಈ ದಿಸೆಯಲ್ಲಿ ಸರ್ಕಾರದ ಪ್ರಯತ್ನಗಳೊಡನೆ ಆಸಕ್ತ ದಾನಿಗಳು, ಸಂಸ್ಥೆಗಳು ಹಾಗೂ ಕಾರ್ಪೋರೇಟ್ ವಲಯಗಳನ್ನು ಸಹ ಶಾಲಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮನವೊಲಿಸಲಾಗುವುದು' ಎಂದು ಹೇಳಿದ್ದರು.

ಇಷ್ಟಕ್ಕೇ 'ಸಮಾಜವಾದಿ ಹಿನ್ನೆಲೆ'ಯ ಮುಖ್ಯಮಂತ್ರಿಗಳು ಮತ್ತು ಶಿಕ್ಷಣ ಮಂತ್ರಿಗಳನ್ನು ಅನುಮಾನಿಸಲಾಗುತ್ತದೆಯೇ ಎಂದು ಕೆಲವರು ಕೇಳಿದರೂ, ಅಂಚಿನಿಂದ ನೋಡುವಾಗ ಅದರ ಬಗ್ಗೆ ಅನುಮಾನ ಬಂದೇಬಿಟ್ಟಿತ್ತು. ಈಗ ಶಿಕ್ಷಣ ಮಂತ್ರಿಗಳು ಅದನ್ನು ಖಾತರಿಪಡಿಸಿದ್ದಾರೆ. "ಇನ್ನು ಮುಂದೆ ಶಾಲೆಗಳ ಅಭಿವೃದ್ಧಿಯ ಉಸ್ತುವಾರಿಯನ್ನು 'ಮೂಲಸೌಕರ್ಯ ಅಭಿವೃದ್ಧಿ ಸಮಿತಿ'ಗಳು ಮಾಡುತ್ತವೆ; ಆ ಶಾಲೆಗೆ ಅತ್ಯಂತ ಹೆಚ್ಚು ಹಣ ನೀಡುವ 'ದಾನಿ' ಯಾರೋ ಅವರು ಅದರ ಮುಖ್ಯಸ್ಥರಾಗಿರುತ್ತಾರೆ; ಶಾಲೆಯ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ಸದಸ್ಯರು ಇದರ ಸದಸ್ಯರಾಗಿರುತ್ತಾರೆ" ಎಂದು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಹೇಳಿದ್ದಾರೆ.

ಅತ್ಯಂತ ಹೆಚ್ಚು ಹಣ ನೀಡುವ ದಾನಿ ಅಧ್ಯಕ್ಷರಾಗಿರುತ್ತಾರೆ ಎಂದರೆ, ಹಣ ನೀಡಿರುವ ಇತರರೂ ಇರುತ್ತಾರೆ ಎಂದಾಯಿತು. ಅಲ್ಲಿಗೆ ಹಣ ನೀಡಿರುವವರು 20 ಜನರಿದ್ದರೆ, ಅವರೆಲ್ಲರೂ ಇರುವ ಸಮಿತಿಯಲ್ಲಿ ಎಸ್‌ಡಿಎಂಸಿ ಸದಸ್ಯರು ಮತ್ತು ಅಧಿಕಾರಿಗಳು ಅಲ್ಪಸಂಖ್ಯಾತರಾಗಿರುವ ಸಾಧ್ಯತೆ ಇದ್ದೇ ಇದೆ. ಇದರ ಮುಂದಿನ ತಾರ್ಕಿಕ ನಡೆ ಏನಾಗಿರಬಹುದು? ಶಾಲೆಗಳನ್ನು ಮಠಮಾನ್ಯಗಳಿಗೆ, ಸ್ವಯಂ ಸೇವಾಸಂಸ್ಥೆಗಳಿಗೆ ದತ್ತು ನೀಡುವುದು ಹಿಂದಿನಿಂದಲೂ ನಡೆಯುತ್ತಿದೆ. ಆ ನಂತರ ಶಾಲೆಗಳ ದತ್ತು ಸ್ವೀಕಾರ ಮಾಡಿದ್ದಕ್ಕೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಕ್ಕೆ ಇವೇ ಸಂಸ್ಥೆಗಳಿಗೆ ಸರ್ಕಾರದಿಂದ ನೂರೆಂಟು ಹೆಸರಿನಲ್ಲಿ ಅನುದಾನ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಪ್ರಶಸ್ತಿಗಳೂ ಸಲ್ಲುತ್ತವೆ. ಇದನ್ನು 'ಸಾರ್ವಜನಿಕ-ಖಾಸಗಿ ಸಹಭಾಗಿತ್ವ' (Public-Private Partnership-PPP) ಎಂತಲೂ ಕರೆಯಲಾಗುತ್ತದೆ. ಅಂದರೆ ದುಡ್ಡು, ಜವಾಬ್ದಾರಿ ಎಲ್ಲವೂ ಸಾರ್ವಜನಿಕರು ಅಂದರೆ ಸರ್ಕಾರದ್ದು, ಲಾಭ, ಕೀರ್ತಿ ಖಾಸಗಿಯವರದ್ದು.

ಆದರೆ ಈಗ ಇದಕ್ಕೆ ಇನ್ನೊಂದು ರೂಪ ಕೊಟ್ಟು ಶಾಲೆಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವ್ಯವಸ್ಥಿತ ಹುನ್ನಾರ ಕರ್ನಾಟಕದಲ್ಲಿ ಆರಂಭವಾಗಲಿದೆ. ಅದನ್ನೇ ಬೇರೆ ಮಾತುಗಳಲ್ಲಿ ಕಿಮ್ಮನೆ ರತ್ನಾಕರ್ ಹೇಳಿದ್ದಾರೆ. ಹೊಸದಾಗಿ ರಚನೆಯಾಗುವ ಮೂಲಸೌಕರ್ಯ ಅಭಿವೃದ್ಧಿ ಸಮಿತಿ ಅಸ್ತಿತ್ವಕ್ಕೆ ಬಂದಮೇಲೆ ಹಿಂದಿನ ಎಸ್‌ಡಿಎಂಸಿ-ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕೆಲಸವೇನು? ಯಾರಿಂದಲೇ ಹಣ ಪಡೆದರೂ ಎಸ್‌ಡಿಎಂಸಿಯ ಶಾಲೆಯ ನಿರ್ವಹಣೆ ಮಾಡಬಹುದಿತ್ತಲ್ಲವಾ? ಈ ಪ್ರಶ್ನೆಗಳನ್ನು ಕೇಳಬಹುದು. ಉತ್ತರ ನಿರೀಕ್ಷಿಸುವಂತಿಲ್ಲ.

ಎಸ್‌ಡಿಎಂಸಿಯ ಪರಿಕಲ್ಪನೆ ಪೋಷಕರು ಮತ್ತು ಶಿಕ್ಷಕರ ಸಂಘಗಳೇ (Parent-Teacher associations) ಶಾಲೆಗಳನ್ನು ನಡೆಸಬೇಕೆಂಬ ಆಲೋಚನೆಗೆ ಹತ್ತಿರವಾಗಿದೆ. ಜಗತ್ತಿನಾದ್ಯಂತ ಯಶಸ್ವಿಯಾಗಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಸಮಾನ ಶಾಲಾ ವ್ಯವಸ್ಥೆಯಲ್ಲಿ ಈ ಬಗೆಯ ವ್ಯವಸ್ಥೆ ಇದೆ. ಅದನ್ನು ಒಂದು ಮಟ್ಟಿಗೆ ನಮ್ಮ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸುವ ಕೆಲಸ ಇಲ್ಲಿ 2006ಕ್ಕೂ ಹಿಂದಿನಿಂದಲೇ ಆರಂಭವಾಗಿದೆ. ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ 'ಮಗು ಮತ್ತು ಕಾನೂನು ಕೇಂದ್ರ'ದ ಮುತುವರ್ಜಿಯಿಂದ ಇದು ಜಾರಿಗೆ ಬಂದಿತು: ಪಂಚಾಯತ್ ರಾಜ್ ಕಾಯ್ದೆ 1993ರ ಅನ್ವಯ ಎಸ್‌ಡಿಎಂಸಿಯ ಮಾದರಿ ಬೈಲಾ, 2006ನ್ನು ರೂಪಿಸಲಾಯಿತು. ಅದು ಜೂನ್ 14, 2006ರಿಂದ ಜಾರಿಗೆ ಬಂದಿತು.

ಅದರ ಪ್ರಕಾರ ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಪೋಷಕರಿಂದಲೇ ಆಯ್ಕೆಯಾದ 9 ಜನರ ಸಮಿತಿಗೆ ಅಧ್ಯಕ್ಷರು ಪೋಷಕರೇ ಆಗಿರುತ್ತಾರೆ ಮತ್ತು ಮುಖ್ಯ ಶಿಕ್ಷಕರು ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಈ ಸಮಿತಿಗಳು ಎಲ್ಲೆಡೆ ಅತ್ಯುತ್ತಮವಾಗೇನೂ ಕಾರ್ಯನಿರ್ವಹಿಸಿಲ್ಲ ಮತ್ತು ಕೆಲವು ಕಡೆ ಅವರು ಶಿಕ್ಷಕರು, ಅಕ್ಷರ ದಾಸೋಹ ಸಿಬ್ಬಂದಿಯ ಮೇಲೆ ದಬ್ಬಾಳಿಕೆ ನಡೆಸಿದ ಉದಾಹರಣೆಗಳೂ ಇವೆ. ಗ್ರಾಮ ಪಂಚಾಯ್ತಿಯ ಸುಮಾರು 12 ಉಪಸಮಿತಿಗಳಲ್ಲಿ ಒಂದಾದ ಈ ಸಮಿತಿಯು ಸ್ಥಳೀಯವಾಗಿ ಅಧಿಕಾರ ಕೇಂದ್ರವಾಗಿಯೂ ಬಳಕೆಯಾಗಿ ಕೆಲವರು ದುರುಪಯೋಗಮಾಡಿಕೊಂಡಿರುವುದೂ ಇದೆ. ಅವೆಲ್ಲದರ ಹೊರತಾಗಿ ಎಷ್ಟೋ ಕಡೆ ಎಸ್‌ಡಿಎಂಸಿಗಳು ಅದ್ಭುತವಾಗಿ ಕೆಲಸ ಮಾಡಿದ ಉದಾಹರಣೆಗಳೂ ಇವೆ. ಇಂದಿಗೂ ಪ್ರಜ್ಞಾವಂತ ಮತ್ತು ಆಸಕ್ತಿಯುಳ್ಳ ಎಸ್‌ಡಿಎಂಸಿ ಸದಸ್ಯರಿರುವ ಕಡೆ ಅವು ಒಳ್ಳೆಯ ಕೆಲಸ ಮಾಡುತ್ತಿವೆ.



ಅದರ ಬಗ್ಗೆ 'ಮಗು ಮತ್ತು ಕಾನೂನು ಕೇಂದ್ರ'ದಿಂದಲೇ ಅಧ್ಯಯನವೂ ನಡೆದಿದ್ದು, ಅದನ್ನು ಮತ್ತಷ್ಟು ಕ್ರಿಯಾಶೀಲಗೊಳಿಸುವ ಸಾಧ್ಯತೆಗಳನ್ನು ಮುಂದಿಡಲಾಗಿದೆ. ಎಸ್‌ಡಿಎಂಸಿಯ ರಚನೆಯ ಭಾಗವಾಗಿಯೂ ದಾನಿಗಳಿಗೆ ಅವಕಾಶವಿದೆ. ಶಾಲೆಗೆ ಭೂಮಿ ನೀಡುವ ಅಥವಾ 10,000 ರೂ. ಮೌಲ್ಯದ ವಸ್ತು ಅಥವಾ ಹಣ ನೀಡಿರುವ ವ್ಯಕ್ತಿ ಅದರ ಸದಸ್ಯರಾಗಬಹುದಾಗಿದೆ. ಮೂರನೆ ಒಂದು ಭಾಗದಷ್ಟು ಸದಸ್ಯರು ಮಹಿಳೆಯರಾಗಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ತಲಾ ಒಬ್ಬರು ಇರಬೇಕು. ಈ ರೀತಿಯಾಗಿ ಹಳ್ಳಿಯೊಂದರ ಸಾಮಾಜಿಕ ರಚನೆಯ ಎಲ್ಲಾ ಮಗ್ಗುಲುಗಳನ್ನು ಅರ್ಥಮಾಡಿಕೊಂಡು ಒಂದು ವ್ಯವಸ್ಥೆಯಾಗಿ ಎಸ್‌ಡಿಎಂಸಿಯನ್ನು ರೂಪಿಸಲಾಗಿತ್ತು. ನಂತರದ ಅಧ್ಯಯನದಲ್ಲಿ ಇದನ್ನು ಮತ್ತಷ್ಟು ಪ್ರಜಾತಾಂತ್ರಿಕಗೊಳಿಸುವ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಬೇಕಾದಂತಹ ಕ್ರಮಗಳನ್ನು ಶಿಫಾರಸ್ಸು ಮಾಡಲಾಗಿತ್ತು.

ಕಾಂಗ್ರೆಸ್ ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ಹೇಳಿಕೊಂಡಿರುವ ಮಾತುಗಳು ಮತ್ತು ಬಜೆಟ್ ಭಾಷಣದ 172ನೇ ಅಂಶದ ಆರಂಭದಲ್ಲಿ ಬರೆದುಕೊಂಡಿರುವ ಆಶಯಗಳಿಗೆ ಬದ್ಧತೆಯನ್ನು ಹೊಂದಿರುವುದೇ ಆದಲ್ಲಿ ಇವೆಲ್ಲವನ್ನೂ ಪರಿಗಣಿಸಬೇಕಾಗಿತ್ತು, ಅವ್ಯಾವನ್ನು ಮಾಡದೇ, ಕಾರ್ಪೋರೇಟ್ ಕಂಪನಿಗಳು ಹಾಗೂ ಇನ್ನಿತರ ಸಂಸ್ಥೆಗಳಿಂದ ಹಣ ಪಡೆದು, ಸರ್ಕಾರೀ ಶಿಕ್ಷಣವನ್ನು ಅವರ ಇಷ್ಟಾನಿಷ್ಟಗಳ ಪಾಲು ಮಾಡುವ ಕೆಲಸಕ್ಕೆ ಮಾತ್ರ ಮುಂದಾಗಿದೆ.

ಇಷ್ಟಕ್ಕೂ, ಕಾರ್ಪೋರೇಟ್ ಕಂಪೆನಿಗಳಾಗಲೀ, ದುಡ್ಡಿರುವ ದೊಡ್ಡ ಜನರಾಗಲೀ ಸರ್ಕಾರೀ ಶಾಲೆಗಳಿಗೆ ದುಡ್ಡು ಕೊಡುತ್ತಾರೆ ಎಂದುಕೊಳ್ಳಲು ಏನಾದರೂ ಕಾರಣಗಳಿವೆಯೇ? ಹೌದು, ಇದೆ. ನಮ್ಮ ದೇಶದಲ್ಲಿ ಶಿಕ್ಷಣ ಕ್ಷೇತ್ರವು ದಾನಿಗಳಿಂದ ಒಂದು ಮಟ್ಟಿಗಿನ ನೆರವನ್ನು ಹಿಂದಿನಿಂದಲೂ ಪಡೆದುಕೊಂಡಿರುವುದು ನಿಜ. ಈಗಲೂ ಹಳ್ಳಿ ಶಾಲೆಗಳಲ್ಲಿ ಕಲಿತು, ನಂತರ ಸ್ಥಿತಿವಂತರಾಗಿರುವ ಹಲವರು ತಮ್ಮೂರಿನ ಶಾಲೆಯನ್ನು ಉಳಿಸಲು ಪ್ರಯತ್ನ ಪಡುತ್ತಿರುವ ಹಲವಾರು ಉದಾಹರಣೆಗಳಿವೆ. ಮಂಗಳೂರಿನಲ್ಲಿ ಅಧ್ಯಾಪಕರಾಗಿರುವ ಪ್ರೊ.ಭೂಮಿಗೌಡ ಮತ್ತು ಪ್ರೊ. ಸಬಿಹಾರವರು ಮಳವಳ್ಳಿ ತಾಲೂಕಿನ ಮಾದಹಳ್ಳಿ ಸರ್ಕಾರೀ ಶಾಲೆಯ ಸುತ್ತ ಅಂತಹ ಪ್ರಯತ್ನ ನಡೆಸುತ್ತಿರುವುದರ ನೇರ ಪರಿಚಯ ಈ ಅಂಕಣಕಾರನಿಗಿದೆ.

ಅಂತಹ ಎಲ್ಲಾ ಪ್ರಯತ್ನಗಳಿಗೆ ಇಂಬು ಕೊಡುವ ಕೆಲಸ ಏನು ಮಾಡಬೇಕು ಎಂದು ಸರ್ಕಾರ ಯೋಚಿಸಿದರೆ ಅದರಲ್ಲಿ ತಪ್ಪೇನಿಲ್ಲ, ಅದರ ಅಗತ್ಯ ಸಾಕಷ್ಟಿದೆ. ಆದರೆ ಸರ್ಕಾರದ ಉದ್ದೇಶ ಅದಾಗಿಲ್ಲ. ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಥರದ ಕೆಲವು 'ಕಾರ್ಪೋರೇಟ್ ಕಂಪೆನಿಗಳ ಸಾಮಾಜಿಕ ಹೊಣೆಗಾರಿಕೆ'ಯ ಹೆಸರಿನಲ್ಲಿ ಪರೋಕ್ಷ ಲಾಭದ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುವ ಕಂಪೆನಿಗಳಿಗೆ ಲಾಭ ಮಾಡಿಕೊಡುವ ಉದ್ದೇಶ ಸರ್ಕಾರಕ್ಕಿದೆ. ಹಾಗಾಗಿಯೇ ಅವರು ದಾನಿಗಳನ್ನು ಶಾಲಾಭಿವೃದ್ಧಿ ಸಮಿತಿಯ ಮುಖ್ಯಸ್ಥರ ಸ್ಥಾನಕ್ಕೇರಿಸಲು ಹೊರಟಿದ್ದಾರೆ. ಇದೇ ಪ್ರತಿಷ್ಠಾನವು ಯಾದಗಿರಿ ಜಿಲ್ಲೆಯಲ್ಲಿ ನಡೆಸಲು ಹೊರಟಿರುವ ಪ್ರಯೋಗಗಳ ಹಿಂದೆ ಅಂತಹುದೇ ಹುನ್ನಾರವಿದೆ. ಜಗತ್ತಿನಾದ್ಯಂತ ಫೋರ್ಡ್ ಫೌಂಡೇಷನ್, ಬಿಲ್ ಗೇಟ್ಸ್ ಫೌಂಡೇಷನ್‌ಗಳ ಧರ್ಮಾರ್ಥ ಕಾರ್ಯಗಳ ಹಿಂದೆ ಇರುವುದು ಏನೋ, ಇದೂ ಅದೇ ಆಗಿದೆ. ಇದು ಸರ್ಕಾರೀ ಶಾಲೆಗಳನ್ನು ಮುಚ್ಚದಿರಲು ಸಾಧ್ಯವಿರುವ ಎಲ್ಲಾ ಪರ್ಯಾಯ ಕ್ರಮಗಳ ಶೋಧನೆ ಮಾಡುವ ಕಾಂಗ್ರೆಸ್ ಪ್ರಣಾಳಿಕೆಯ ಹಿಂದಿನ ಉದ್ದೇಶ. ಅಂದರೆ ಮುಚ್ಚುವುದಿಲ್ಲ, ಮಾರಿಬಿಡುವುದು.


ಇಡೀ ಶಿಕ್ಷಣ ವ್ಯವಸ್ಥೆಯು ರಾಷ್ಟ್ರೀಕರಣದೆಡೆಗೆ ಸಾಗುವುದು ಇಂದು ಅತ್ಯಂತ ಅಗತ್ಯ. ಆದರೆ ಮತ್ತಷ್ಟು ಖಾಸಗೀಕರಣದೆಡೆಗೆ ಸಾಗಲು ನೂರೆಂಟು ಬಗೆಯ ಕಾರ್ಯಯೋಜನೆಗಳನ್ನು ಹುಡುಕುವುದು ಸರ್ಕಾರದ ಕೆಲಸವಾಗಿದೆ. ಅದರ ಭಾಗವಾಗಿಯೇ ಈ ಹೊಸ ಕ್ರಮವೂ ಜಾರಿಗೆ ಬರಲಿದೆ. ಇದನ್ನು ವಿರೋಧಿಸಲೇಬೇಕು.

ಸರ್ಕಾರೀ ಕನ್ನಡ ಶಾಲೆಗಳನ್ನು ಉಳಿಸಿ, ಬೆಳೆಸುವ ಕೆಲಸವನ್ನು ಈ ಸಾರಿಯ ಕನ್ನಡ ರಾಜ್ಯೋತ್ಸವದ ಸಂಕಲ್ಪವನ್ನಾಗಿ ಮಾಡಿಕೊಳ್ಳಲು ಕನ್ನಡ ಪ್ರೇಮಿಗಳು ಮುಂದಾಗಲಿ. ಸರ್ಕಾರದ ನೀತಿಯನ್ನು ಬದಲಿಸುವ ಹೋರಾಟ ನಡೆಯಲಿ. ■

'ನನ್ನ ಗೆಳೆಯನಿಗೊಂದು ಬಾಡಿಗೆ ಮನೆ ಕೊಡಿಸಿ'

ನಂಜನಗೂಡು ಪರಿಸರದ ಮಾನವಂತರೆ,

ನನ್ನ ಗೆಳೆಯ ಸಂತೋಷ್ ಗುದ್ದಿಯಂಗಡಿ ನಿಮ್ಮ ಊರಿನ ಹಳ್ಳಿಯೊಂದರಲ್ಲಿ ಮಾಸ್ತರರಾಗಿ ಪಾಠ ಮಾಡುತ್ತಿದ್ದಾರೆ. ಆತ ನೀನಾಸಂ ಪದವೀಧರ. ಮಕ್ಕಳಿಗೆ ಚೆನ್ನಾಗಿ ಪಾಠ ಮಾಡುತ್ತಾರೆ. ನಾಟಕ ಕಲಿಸಿಕೊಡುತ್ತಾರೆ. ಬದುಕು ರೂಪಿಸಿಕೊಳ್ಳುವ ಕಲೆಯನ್ನೂ ಹೇಳಿಕೊಡುತ್ತಾರೆ. ಚೆನ್ನಾಗಿ ಹಾಡುತ್ತಾರೆ. ಪಾಠದ ಜೊತೆಗೆ ಮಕ್ಕಳ ಬಹುಮುಖ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುತ್ತಾರೆ. ಸಂತೋಷ್ ಹಿಂದೆ ಇದ್ದ ಹೆಮ್ಮರಗಾಲ ಶಾಲೆಯಲ್ಲಿ 'ಹೆಮ್ಮರ' ಎಂಬ ಮಕ್ಕಳ ಹಸ್ತಪತ್ರಿಕೆಯನ್ನು ಆರಂಭಿಸಿದ್ದರು. ಈಗ ಕೆಲಸ ಮಾಡುತ್ತಿರುವ ಹೆಗ್ಗಡಹಳ್ಳಿ ಪ್ರೌಢಶಾಲೆಯಲ್ಲಿ 'ಅಳ್ಳೀಮರ' ಎಂಬ ಹೆಸರಿನಲ್ಲಿ ಹೊಸದೊಂದು ಪತ್ರಿಕೆಯನ್ನು ಮಕ್ಕಳಿಂದ


ಹೆಮ್ಮರ



ಮಕ್ಕಳಿಗಾಗಿಯೇ ಪ್ರಕಟಿಸುತ್ತಿದ್ದಾರೆ. ಸಂತೋಷ್‌ರ ಈ ಪ್ರಯತ್ನ ಈಗ ರಾಜ್ಯಮಟ್ಟದಲ್ಲಿಯೇ ಜನಪ್ರಿಯವಾಗಿದ್ದು ಇವರ ಸ್ಫೂರ್ತಿಯಿಂದ ಅನೇಕ ಕೈಬರಹದ ಶಾಲಾ ಮ್ಯಾಗಜಿನ್‌ಗಳು ಆರಂಭಗೊಂಡಿವೆ. ಈ ಕುರಿತು ನಾಡಿನ ಮಾಧ್ಯಮಗಳಲ್ಲೂ ಸುದ್ದಿ ಬಂದಿವೆ. ಸಂತೋಷ್ ಬಹುಮುಖ ಪ್ರತಿಭಾವಂತ ಮತ್ತು ಯಾವುದೇ ಶಾಲೆಗೆ ಅವರು ಬಲು ದೊಡ್ಡ ಆಸ್ತಿ. ಮಕ್ಕಳಿಗೆ ಅಚ್ಚುಮೆಚ್ಚಿನ ಮೇಷ್ಟ್ರು ಸಂತೋಷ್. ಅವರು ಬರೆದ ಕಥೆಗೆ ಪ್ರಜಾವಾಣಿ ಕಥಾ ಸ್ಪರ್ಧೆಯಲ್ಲಿ ಒಮ್ಮೆ ದ್ವಿತೀಯ ಬಹುಮಾನವೂ ದೊರಕಿದೆ. ನಾಡಿನ ಅನೇಕ ಪತ್ರಿಕೆಗಳಲ್ಲಿ ಅವರ ಕವನ ಪ್ರಕಟವಾಗಿದೆ.

ಇಷ್ಟೆಲ್ಲ ಪ್ರತಿಭಾವಂತ ನಿಜ. ಆದರೆ ಏನ್ಮಾಡೋಣ. ಆತ ನಮ್ಮೂರಿನ ದಲಿತರ ಜಾತಿಯಲ್ಲಿ ಹುಟ್ಟಿದವರು. ದಲಿತರು ಎಷ್ಟೇ ಪ್ರತಿಭಾವಂತರಾದರೂ ಅವರು ದಲಿತರೆ. ಇದು ಇಪ್ಪತ್ತೊಂದನೇ ಶತಮಾನದಲ್ಲೂ ನಮ್ಮ ಸಮಾಜದ ನಿಲುವು. ನಮ್ಮ ಕಥಾನಾಯಕ ಸಂತೋಷ್ ಈಗ ನಂಜನಗೂಡಿನ ಅಕ್ಕಪಕ್ಕದಲ್ಲಿ ಬಾಡಿಗೆ ಮನೆಯೊಂದನ್ನು ಹುಡುಕುತ್ತಿದ್ದಾರೆ. ಆದರೆ ಅವರು ದಲಿತರು ಎಂಬ ಕಾರಣಕ್ಕೆ ಈ ಮನೆ ಹುಡುಕುವ ಕಾರ್ಯ ಬಹಳ ಕಠಿಣವಾಗಿದೆ. ಮನೆ ಬಾಡಿಗೆಗೆ ಇದ್ದರೂ ದಲಿತ ಎನ್ನುವ ಕಾರಣಕ್ಕೆ ಇವರಿಗೆ ಮನೆ ಬಾಡಿಗೆಗೆ ನೀಡಲು ನಿರಾಕರಿಸಲಾಗುತ್ತಿದೆ. ತನಗಾಗುತ್ತಿರುವ ಅವಮಾನಗಳ ಬಗ್ಗೆ ಅವರು ದಿನಾಲೂ ಫೇಸ್‌ಬುಕ್‌ನಲ್ಲಿ ಬರೆದುಕೊಳ್ಳುತ್ತಿದ್ದಾರೆ. ಅವರ ಸ್ಟೇಟಸ್ ಸಂದೇಶಗಳ ಎರಡು ಸ್ಯಾಂಪಲ್ ನೋಡಿ.

1. ಇವತ್ತೊಂದು ಮನೆ ನೋಡಲು ಹೋಗಿದ್ದೆ, ನಾನು ದಲಿತನೆಂಬುದ ಕೇಳಿಯೂ ಗಂಡ ಕೊಡಲು ಒಪ್ಪಿದ್ದ ಆದರೆ ಆತನ ಹೆಂಡತಿಗೆ ಇಷ್ಟವಿಲ್ಲ, ನನ್ನ ಜಾತಿಯ ವಿಚಾರವಾಗಿ ಅವರಿಬ್ಬರ ನಡುವೆ ಜಗಳವೇ ಶುರುವಾಗಿ ನನಗೆ ಇಂದೂ ಬಾಡಿಗೆಗೆ ಮನೆ ಸಿಗಲಿಲ್ಲ.

2. ಇಂದು ನಂಜನಗೂಡಿನಲ್ಲಿ ಬಾಡಿಗೆ ಮನೆ ಹುಡುಕಲು ಹೋಗಿದ್ದೆ. ಮನೆ ನೋಡಿದೆ. ಚೆನ್ನಾಗಿತ್ತು,



ಹಣದ ವಿಚಾರವನ್ನೂ ಮಾತಾಡಿದೆ. ಕಡೆಯಲ್ಲಿ ಜಾತಿಯ ಮಾತು ಬಂತು. ನಾನು ದಲಿತ ಎಂದೆ. ಇಲ್ಲ ಮನೆಕೊಡುವುದಿಲ್ಲ ಎಂದರು. ಇದನ್ನು ನಿರೀಕ್ಷಿಸಿದ್ದರಿಂದ ನನಗೇನೂ ಬೇಜಾರಾಗಿಲ್ಲ.

ನಂಜನಗೂಡಿನಲ್ಲಿ ಬಹಳಷ್ಟು ಅನುಭವವಾಗಿದೆ ಇಂಥದ್ದು.

ಪತ್ರಿಕೆಯ ಓದುಗರಲ್ಲಿ ಯಾರಾದರೂ ನಂಜನಗೂಡಿನ ಮಾನವಂತರು ಇದ್ದರೆ ನನ್ನದೊಂದು ಭಿನ್ನಹ. ನನ್ನ ಗೆಳೆಯ ಸಂತೋಷನಿಗೆ ಮನುಷ್ಯರು ವಾಸಿಸಲು ಯೋಗ್ಯವಾದ ಪರಿಸರದಲ್ಲಿ ಒಂದು ಅಚ್ಚುಕಟ್ಟಾದ ಬಾಡಿಗೆ ಮನೆಯನ್ನು ಹುಡುಕಲು ನೀವು ನೆರವಾಗುವಿರಾ? ನಂಜನಗೂಡಿನ ಮಾನ ಉಳಿಸುವಿರಾ? ಸಂತೋಷನಿಗೆ ಆಗುತ್ತಿರುವ ಅವಮಾನ ಮತ್ತು ನೋವು ನಮ್ಮ ಮತ್ತು ನಿಮ್ಮ ನೋವು ಆಗಬೇಕು. ನಮ್ಮೂರಿನ ಹುಡುಗ ನಿಮ್ಮೂರಿನ ನಾಳಿನ ಹುಡುಗ-ಹುಡುಗಿಯರ ಭವಿಷ್ಯ ರೂಪಿಸುತ್ತಿದ್ದಾನೆ. ಆತನ ವರ್ತಮಾನಕ್ಕೆ ನೆರವಾಗುವ ಸೌಜನ್ಯ ನಿಮಗಿಲ್ಲವೆ?

■ ಶಶಿಧರ ಹೆಮ್ಮಾಡಿ, ಕುಂದಾಪುರ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸನಾತನವಲ್ಲದ ಹಿಂದೂ ಧರ್ಮ

ಆಗ ಬ್ರಿಟಿಷರ ಒಡೆದು ಆಳುವ ಧೋರಣೆಯಿಂದಾಗಿ ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗ್ ಈ ಎರಡೂ ವೈರಿಗಳಂತಾಡತೊಡಗಿ, ಮುಸ್ಲಿಮರಿಗೆ ಹಿಂದೂ ಪದವೇ ಕೆರಳಿಸುವಂತೆ ಅಥವಾ ಮುಸ್ಲಿಮರನ್ನು ಭಾರತೀಯರೇ ಅಲ್ಲವೆಂಬಂತೆ ನೋಡತೊಡಗಿದ ಮುಸ್ಲಿಮೇತರರಿಗೆ ಮುಸ್ಲಿಂ ಪದವು ಕೆರಳಿಸುವಂತೆ ಮಾಡಿತ್ತು. ಒಟ್ಟಾರೆ ಆ ಇಡೀ ಸಮುದಾಯಕ್ಕೆ ಒಡೆದು ಆಳುವ ಮನೋಭಾವದವರ ಕುಯುಕ್ತಿಗೆ ತಾವು ಬಲಿಪಶುವಾಗುತ್ತಿದ್ದೇವೆ ಎಂಬ ಅರಿವೂ ಇಲ್ಲದೇಹೋದದ್ದು ಇತಿಹಾಸದ ಅಚ್ಚರಿ.

...ಹಿಂದೂ ಧರ್ಮ ಸನಾತನವೆಂದು ಎಷ್ಟೆಷ್ಟೋ ...ನಾರು ವರ್ಷಗಳ ಹಿಂದಕ್ಕೆ ಹೋಗುತ್ತಾ ಹೆಮ್ಮೆಯಿಂದ ...ವ ಹಿಂದೂ ಸಂಘ ಪರಿವಾರದ ನಮ್ಮ ಸಹಜೀವಿಗಳು ... ವಿಷಯವನ್ನು ಮನದಟ್ಟು ಮಾಡಿಕೊಳ್ಳಬೇಕು. ... ಧಾರ್ಮಿಕ ಗ್ರಂಥಗಳಲ್ಲಿ 'ಹಿಂದೂ' ಎಂಬ ಶಬ್ದವೇ ... ಹಿಂದೂ ಎಂಬ ನಾಮವಾಚಕವು ದೇಶವಾಚಕ ...ದು ಎಲ್ಲರಿಗೂ ತಿಳಿದಿರುವ ವಿಷಯವೇ. ಹಿಂದೂ ...ಯ ಪೋಷಕರು ಬ್ರಿಟಿಷ್ ಸರ್ಕಾರದವರೇ ಆಗಿದ್ದು ...ಸನಾತನದ ಆವೇಶದಲ್ಲಿ ಮುಸಲ್ಮಾನರನ್ನು ...ಯರೆಂದು ತಾರತಮ್ಯ ಮಾಡಲು ಸುಲಭವಾಯಿತು. ...ವ ಅರ್ಥದಲ್ಲಿ ಧರ್ಮದ ಲವಲೇಶವೂ ಇಲ್ಲದ ... ಅರ್ಥವ್ಯಾಪ್ತಿಯಲ್ಲಿ ಮುಸ್ಲಿಮರು, ಕ್ರೈಸ್ತರು ಇತರೆ ...ಧರ್ಮೀಯರೂ ಸೇರುತ್ತಾರೆ. ಬ್ರಾಹ್ಮಣಾದಿ ಹಲವು ...ಮು ಜಾತಿಗಳ ಬ್ರಾಹ್ಮಣ್ಯದ ಧರ್ಮವೊಂದಿರುವುದಾದರೆ ... ಬ್ರಾಹ್ಮಣ ಧರ್ಮವೆಂದೋ ಅಥವಾ ಅವರಿಗೆ ...ಪ್ರಿಯವಾದ ಆರ್ಯಧರ್ಮವೆಂದೋ ಕರೆದುಕೊಳ್ಳಲಿ. ... ಬೇಕಾದರೆ ಸ್ವಾಮಿ ದಯಾನಂದ ಸರಸ್ವತಿಯನ್ನು ... ಆದರ್ಶ ಪುರುಷನೆಂದು ಕರೆದುಕೊಳ್ಳಲಿ. ಅವರ ...ರ್ಥ ಪ್ರಕಾಶವನ್ನು ತಮ್ಮ ಧರ್ಮಗ್ರಂಥವೆಂದು ...ಸಿಕೊಳ್ಳಲಿ. ಆದರೆ ತಮ್ಮ ಆರ್ಯಧರ್ಮದ ...ಚಕವನ್ನು 'ಹಿಂದೂ' ಎಂದು ಕರೆದುಕೊಳ್ಳಲು ಯಾವ ...ಕಾರವೂ ಇಲ್ಲ, ಹಕ್ಕೂ ಇಲ್ಲ. ವೈದಿಕ ಧರ್ಮದ ... ಅಭಿಮಾನಿಗಳಾದ ಆರ್ಯ ಸಮಾಜದವರ ಜೊತೆ ... ಹಿಂದೂ ಸಂಘ ಪರಿವಾರದವರು ಗುರುತಿಸಿಕೊಳ್ಳಲಿ. ...ಮು ವೇಳೆ ಅವರದು ನಿಜವಾದ ಹಿಂದೂ ಅಂದರೆ ...ತ ದೇಶ ಎಂಬ ಅರ್ಥದಲ್ಲಿ ಬಳಸುವುದಾದರೆ ಮುಸ ...ರ ಮತ್ತು ಕ್ರೈಸ್ತರ ಅಥವಾ ಯಾವುದೇ ಧರ್ಮೀಯರ ...ಜಿನ ಸಾಂಪ್ರದಾಯಿಕ ದ್ವೇಷವನ್ನು ಪ್ರಣಾಳಿಕೆಗಳ ...ಕೊಳ್ಳದೇ ಸಾಮರಸ್ಯದಿಂದ ಸಂಘಟನೆಗೆ ತೊಡಗಬೇಕು. ...ಭಾರತ್ ಎಂಬ ಅರ್ಥದಲ್ಲಿಯೇ ಜೈ ಹಿಂದ್ ಎಂದು ...ಷಣೆಗಳನ್ನು ಹೇಳುವ ನಮ್ಮ ಹಿರಿಯರು ...ಸುವುದನ್ನು ನೆನಪಿಸಿಕೊಳ್ಳಿ.


...ಆಗ ಬ್ರಿಟಿಷರ ಒಡೆದು ಆಳುವ ಧೋರಣೆಯಿಂದಾಗಿ ...ದೂ ಮಹಾಸಭೆ ಮತ್ತು ಮುಸ್ಲಿಂ ಲೀಗ್ ಈ ಎರಡೂ ...ಗಳಂತಾಡತೊಡಗಿ, ಮುಸ್ಲಿಮರಿಗೆ ಹಿಂದೂ ಪದವೇ ...ಳಿಸುವಂತೆ ಅಥವಾ ಮುಸ್ಲಿಮರನ್ನು ಭಾರತೀಯರೇ ...ಲ್ಲವೆಂಬಂತೆ ನೋಡತೊಡಗಿದ ಮುಸ್ಲಿಮೇತರರಿಗೆ ಮುಸ್ಲಿಂ ...ದವು ಕೆರಳಿಸುವಂತೆ ಮಾಡಿತ್ತು. ಒಟ್ಟಾರೆ ಆ ಇಡೀ ...ಮುದಾಯಕ್ಕೆ ಒಡೆದು ಆಳುವ ಮನೋಭಾವದವರ ...ಕುಯುಕ್ತಿಗೆ ತಾವು ಬಲಿಪಶುವಾಗುತ್ತಿದ್ದೇವೆ ಎಂಬ ಅರಿವೂ ...ಲ್ಲದೇಹೋದದ್ದು ಇತಿಹಾಸದ ಅಚ್ಚರಿ.

... ಈಗಿನ ಸಂಘ ಪರಿವಾರದವರು ದೇಶದ ಐಕ್ಯತೆಯನ್ನು ... ಮಾಡುವ ಬಹುದೊಡ್ಡ ಅಪಾಯವನ್ನು ಮಾಡುತ್ತಿದ್ದಾರೆ. ...ವೆಂದರೆ ರಾಷ್ಟ್ರೀಯತೆ, ಸಂಸ್ಕೃತಿ ಮತ್ತು ಧರ್ಮ ಈ ...ಮೂರನ್ನೂ ಬೆರೆಸುವಂತಹುದು. ಈ ಮೂರೂ ಒಬ್ಬ ...ಯಲ್ಲಿ ವಿವಿಧ ಸಂಯೋಜನೆಗಳಲ್ಲಿ ಒಂದಾಗಿರಬಹುದೇ ...ಹೊರತು, ಸಾಮಾಜಿಕವಾಗಿ ಎಂದಿಗೂ ಒಂದಾಗಿರಲು ...ಶ್ಯವೇ ಇಲ್ಲ. ಒಬ್ಬ ಧಾರ್ಮಿಕವಾಗಿ ಮುಸಲ್ಮಾನನಾದರೂ ...ಷ್ಟ್ರೀಯತೆಯಲ್ಲಿ ಭಾರತೀಯನಾಗಿ, ಸಂಸ್ಕೃತಿಯಲ್ಲಿ ...ಬಾವಳಿಯವನಾಗಿರಬಹುದು. ಆದರೆ, ಇವರ ವೈದಿಕ ...ಧರ್ಮವನ್ನೇ, ಆರ್ಯಸಂಸ್ಕೃತಿಯನ್ನೇ, ಭಾರತೀಯ ...ಷ್ಟ್ರೀಯತೆಯನ್ನಾಗಿಸುವುದು ಎಂದಿಗೂ ಒಪ್ಪದ, ಸಲ್ಲದ ...ಧೋರಣೆ. ಧ್ಯಾನಕ್ಕೆ ಸಾಧನವಾದ ಓಂಕಾರದ ಚಿಹ್ನೆಯನ್ನು ...ವರು ಸಂಕುಚಿತಾರ್ಥದಲ್ಲಿ ಬಳಸಿ, ಅದರ ಮೌಲ್ಯವನ್ನು ...ಮತ ಇನ್ನಾರೇ ಅದನ್ನು ಬಳಸಲು ನೋಡಿದರೂ, ...ಹಿಂದೂ ಮತಾಂಧರ ನೆನಪಾಗುವಂತೆ ಮಾಡಿ, ಓಂಕಾರವನ್ನು ...ತರ ಧ್ಯಾನಿಗಳು ಬಳಸದಿರುವಂತೆ ಮಾಡಿಬಿಟ್ಟರೆ ...ಷ್ಟರ್ಯವೇನಿಲ್ಲ. ಸುಂದರವಾದ ಕೇಸರೀ ಬಣ್ಣವನ್ನು ...ಕಳುಗೆಡಿಸಿದ್ದನ್ನು ಬೇರೆ ಹೇಳಬೇಕಾಗಿಲ್ಲ.

...ಕರ್ನಾಟಕದ ರಾಜ್ಯಪಾಲರಾದ ಹೆಚ್.ಆರ್.ಭಾರದ್ವಾಜ್ ...ಭಾರತ- ಧರ್ಮಗಳ ಮೈತ್ರಿಯ ನಾಡು' ಎಂಬ ತಮ್ಮ ...ಪುಸ್ತಕದಲ್ಲಿ ಭಾರತದಲ್ಲಿರುವ ಎಲ್ಲಾ ಧರ್ಮಗಳ ...ಸಾಮರಸ್ಯವನ್ನು ಬೆಸೆಯುವಂತಹ ಬರವಣಿಗೆಯಲ್ಲಿ ...ಧರ್ಮಸಂಸ್ಕೃತಿಯು ಪ್ರಪಂಚದ ನಾಗರಿಕತೆಗಳಲ್ಲಿ ಭಾರತಕ್ಕೆ ...ವಿಶಿಷ್ಟಸ್ಥಾನವನ್ನು ಕೊಟ್ಟು ಸಮಾಜದ ಬೌದ್ಧಿಕ ...ಸ್ವಾತಂತ್ರ್ಯವನ್ನು ರಕ್ಷಿಸಿತು' ಎಂದು ಹೇಳಿದ್ದಾರೆ. ಭಾರತದ ...ನಾಗರಿಕತೆಯು ಆರ್ಯಾಗಮನಕ್ಕೆ ಮುನ್ನವೇ ಎಂಬ ವಿಷಯ ...ವನ್ನು ಗಮನಿಸದೇ ಹೋದದ್ದು ಒಂದು ವಿಪರ್ಯಾಸ ...ಹಾಗೆಯೇ, ಆರ್ಯರ ಸಂಸ್ಕೃತಿಯೇ ನಾಗರಿಕವಾದದು ಎಂಬ ...ಧೋರಣೆ ಮತ್ತೊಂದು ವಿಪರ್ಯಾಸ. ಭಾರತದ ಸಾಂಸ್ಕೃತಿಕ ...ಶ್ರೀಮಂತಿಕೆಯನ್ನು ಆರ್ಯರ ಆಗಮನ(ಆಕ್ರಮಣ)ದಿಂದಲೇ ... ಮಾಡುವುದು ಒಂದು ಅಶಾಸ್ತ್ರೀಯವಾದ ಮತ್ತು ಅವೈಜ್ಞಾನಿಕವಾದ ಪದ್ಧತಿ. ಆರ್ಯರ ಮುನ್ನವೇ ಭಾರತದ ನಾಗರಿಕತೆ ಉಚ್ಚ ಸ್ಥಿತಿಯಲ್ಲಿತ್ತು. ಬೇರೆಯವರ ಆಗಮನದೊಂದಿಗೆ ಬಂದ ಸಂಸ್ಕೃತಿ ಮತ್ತು ಭಾಷೆಗಳನ್ನು ಸ್ವೀಕರಿಸಿ, ಸಮೀಕರಿಸಿಕೊಂಡು ಬಾಳಿದ ಉದಾಹರಣೆಗಳು ನೇರ ಹಾಗೂ ಸ್ಪಷ್ಟವಾಗಿದೆ. ಹಾಗೆಯೇ ಆರ್ಯರ ಸಂಸ್ಕೃತಿಯನ್ನೂ ನಾವು ಸ್ವೀಕರಿಸಿದ್ದಿದೆ. ಹಾಗಾದರೆ ನಾವು ಯಾರದ್ದನ್ನು ಸ್ವೀಕರಿಸಿದ್ದೇವೆ? ಯಾರನ್ನು ತಿರಸ್ಕರಿಸುತ್ತೇವೆ?

ಕುಟಿಲ ವೈದಿಕರು ಮತ್ತು ಶಿಷ್ಟ ಋಷಿಗಳು

ಆ ಮಹಾಬ್ರಾಹ್ಮಣ ನಡೆದುಹೋಗುತ್ತಿರುವಾಗ ಮಾರ್ಗದಲ್ಲಿನ ಮುಳ್ಳಿನ ಪುಟ್ಟ ಪೊದೆಯ ಮೇಲೆ ಕಾಲಿಟ್ಟ. ಸಹಜವಾಗಿ ಕಾಲಿಗೆ ಮುಳ್ಳು ಚುಚ್ಚಿತು. ನಾವಾಗಿದ್ದರೆ, ಚುಚ್ಚಿರುವ ಮುಳ್ಳನ್ನು ತೆಗೆದು ಇನ್ನಾರಿಗಾದರೂ ಚುಚ್ಚದಿರಲಿ ಎಂದು ಪಕ್ಕಕ್ಕೆ ಎಸೆಯುತ್ತಿದ್ದೆವು. ಇನ್ನೂ ಹೆಚ್ಚಿಗೆ ಎಂದರೆ, ನಮ್ಮ ಹಿಂದೆ ಬರುವವರಿಗೆ ಇಲ್ಲಿ ಮುಳ್ಳಿದೆ ಎಂದು ಎಚ್ಚರಿಸುತ್ತಿದ್ದೆವು. ಆದರೆ, ಆತ ಕ್ರೋಧಗೊಂಡು, ಆ ಮುಳ್ಳಿನ ಪೊದೆಯನ್ನು ಬೇರು ಸಮೇತ ಕಿತ್ತು.... ಬಿಸಾಡಿದ ಎಂದರೆ, ಪರವಾಗಿಲ್ಲ ಸ್ವಲ್ಪ ಆಗ್ರಹದ ಮನುಷ್ಯ ಎಂದುಕೊಂಡು ಸುಮ್ಮನಾಗಿಬಿಡಬಹುದಿತ್ತು. ಆದರೆ ಆತನ ಆಗ್ರಹವನ್ನು ಕೊಂಡಾಡುವ ಪರಿ ಹೀಗಿದೆ.... ಬೇರು ಸೈತಂ ಕಿತ್ತು ಪುಡಿಗಟ್ಟಿ ಸುಟ್ಟು ಅದನ್ ನೀರಿನೊಳ್ ಕದಡಿ ಕುಡಿದುಬಿಟ್ಟನ್!! ಮುಳ್ಳಿನ ಗಿಡ ಪ್ರಕೃತಿ ಸಹಜವಾಗಿ ಅದರ ತಾಣದಲ್ಲಿ ಅದು ಬೆಳೆದು ನಿಂತಿತ್ತು. ಅದು




ಅಟ್ಟಾಡಿಸಿಕೊಂಡು ಈ ಉಗ್ರಬ್ರಾಹ್ಮಣನ ಕಾಲಿಗೆ ಎರಗಲಿಲ್ಲ. ಆದರೆ ಈತನೇ ಅದರ ಅಸ್ತಿತ್ವವಿರುವ ಕಡೆಗೆ ಬಂದು ಅದರ ಮೇಲೆ ಕಾಲಿಟ್ಟದ್ದು. ಅದರ ಮೇಲೆಯೇ ದೌರ್ಜನ್ಯ! ಇದು ವೈದಿಕ ಬ್ರಾಹ್ಮಣರ ನೀತಿಗೆ ಬಹು ಉತ್ತಮ ನಿದರ್ಶನ. ಒಬ್ಬ ಆರೋಗ್ಯವಂತ ಮನಸ್ಥಿತಿಯವನ ನಡವಳಿಕೆಗೆ ಇದು ಎಂದಿಗೂ ಉದಾಹರಣೆಯಾಗುವುದಿಲ್ಲ.

ಇಂಥಾ ಚಾಣಕ್ಯನ ಮತ್ತೊಂದು ಉದಾಹರಣೆ ನೋಡಿ. ಚಂದ್ರಗುಪ್ತ ಮೌರ್ಯನ ಹೊಸದಾಗಿ ಕಟ್ಟಿದ ಅರಮನೆಯನ್ನು ಅವಲೋಕಿಸುತ್ತಾ ನಡೆದ ಈ ಕುಶಾಗ್ರಮತಿ ಬ್ರಾಹ್ಮಣನಿಗೆ ಅದೇನೋ ತಿಳಿಯಿತು. ಕೂಡಲೇ ಹೊಸ ಅರಮನೆಯನ್ನು ಸಂಪೂರ್ಣವಾಗಿ ಸುಡಿಸಿದ. ನಂತರ ತಿಳಿಯಿತು ಶತ್ರುಗಳ ಸೈನಿಕರು ಆ ಅರಮನೆಯಲ್ಲಿ ರಚಿಸಿಕೊಂಡಿದ್ದ ನೆಲಮಾಳಿಗೆಯಲ್ಲಿ ಅವಿತಿದ್ದರು ಎಂದು. ಇರುವೆಗಳು ಆಹಾರದ ಧಾನ್ಯಗಳನ್ನು ಹೊತ್ತುಕೊಂಡು ನೆಲಮಾಳಿಗೆಗೆ ಸಾಲುಗಟ್ಟಿದ್ದನ್ನು ನೋಡಿ ಅಲ್ಲಿ ಯಾರೋ ಅವಿತಿದ್ದಾರೆ, ಅವಿತಿರುವವರೆಂದರೆ ವಿರೋಧಿಗಳೇ ಸರಿ, ವಿರೋಧಿಗಳು ಬದುಕಿರಕೂಡದು; ಎಂದು ಚಂದ್ರಗುಪ್ತನ ಶತ್ರುಗಳ ಪಾಪದ ಕೂಲಿಯಾಳು ಸೈನಿಕರನ್ನು ನಿರ್ದಾಕ್ಷಿಣ್ಯವಾಗಿ ಸುಡಿಸಿದ ಕೌಟಿಲ್ಯ. ಬಂಧಿಸಿ, ವಿಚಾರಿಸುವುದು, ವಿಷಯವನ್ನು ಪರಾಮರ್ಶೆ ಮಾಡುವುದು; ಊಹುಂ, ಏನೂ ಬೇಡ! ಅದೇ ಬಗೆಯ ಕೌಟಿಲ್ಯರೇ ಒಂದು ಪುಸ್ತಕದಲ್ಲಿ ತಮ್ಮ ವಿರೋಧವಿದೆಯೆಂದರೆ ಅದನ್ನು ಓದುವ ಗೋಜಿಗೂ ಹೋಗದೇ, ವಿಚಾರ ವಿಮರ್ಶೆ ಮಾಡದೇ ಬರೆದವನ ಮೇಲೆ ಆಕ್ರಮಣ ಮಾಡುವ ಮನೋಭಾವದವರು.

ಇಂಥಾ ಚಾಣಕ್ಯನನ್ನು ಗುರುವಾಗಿ ಪಡೆದು ಸಾಮ್ರಾಜ್ಯ ಕಟ್ಟಿದ ಚಂದ್ರಗುಪ್ತ ಮೌರ್ಯನಿಗೆ ಕಟ್ಟಕಡೆಗೆ ಬಂದ ವೈರಾಗ್ಯವೆಂತದ್ದು! ಎಲ್ಲವನ್ನೂ ತೊರೆದು, ಶ್ರವಣಬೆಳಗೊಳಕ್ಕೆ ಬಂದು ಶ್ರಮಣ ದೀಕ್ಷೆ ಪಡೆದು ಸಲ್ಲೇಖನ ವ್ರತ ಸ್ವೀಕರಿಸಿ ಪ್ರಾಣ ತ್ಯಜಿಸಿದ್ದು ಇತಿಹಾಸ. ವೈದಿಕ ಬ್ರಾಹ್ಮಣರ ಪ್ರಭಾವ ಎಂತಹ ಭೀಭತ್ಸಕ್ಕೆ ಮತ್ತು ಜಿಗುಪ್ಸೆಗೆ ಕಾರಣವಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯೇ?

ಮಹರ್ಷಿ ವಾಮದೇವ ದ್ವೈಪಾಯನ ಆರುಣೇಯ ತನ್ನ ತಪಶ್ಚರ್ಯೆಯೆಂದರೆ ಮರಗಳನ್ನು ಬೆಳೆಸುತ್ತಾ ಅವುಗಳನ್ನು ಪಾಲಿಸುತ್ತಾ ಪೋಷಿಸುತ್ತಾ ಯೋಗಿಯಾಗಿ



ರೂಪುಗೊಂಡವರು. ನೆಲವೆಲ್ಲಾ ನಂದನವನವಾಗಬೇಕು, ಎಲ್ಲರ ಒಳಬಾಳು ಸುಂದರ ಸಫಲವಾಗಬೇಕು ಎಂದು ಬಯಸಿದ ವಾಮದೇವ ಬೆಳೆಸಿದ ವನವನ್ನೇ ಉಪನಿಷತ್ತು ಎಂದವರು. ಇಂತಹ ಉಪನಿಷತ್ತು ಋಷಿಗಳು ವೈದಿಕ ಸಂಪ್ರದಾಯವನ್ನು, ವೈದಿಕರ ರಾಜಕೀಯಗಳನ್ನು ನಿರಾಕರಿಸಿ ಶಿಷ್ಟ ಋಷಿಗಳಾಗಿದ್ದವರು. ಅನೇಕ ಉಪನಿಷತ್ತುಗಳ ದ್ರಷ್ಟಾರರು ವೈದಿಕ ಸಂಪ್ರದಾಯಗಳನ್ನು ನಿರಾಕರಿಸಿದ್ದವರೂ, ಪ್ರಗತಿಪರರೂ ಆಗಿದ್ದರು. ಹಾಗಾಗಿಯೇ ಅವರುಗಳು ಜಿಜ್ಞಾಸುಗಳಾಗಿ ಪೂರ್ವಾಗ್ರಹಪೀಡಿತರಾಗಲ್ಲದೇ ಅನೇಕ ವೈಚಾರಿಕ ಕೊಡುಗೆಗಳನ್ನು, ಸಿದ್ಧಾಂತಗಳನ್ನು, ಒಳನೋಟಗಳನ್ನು ಕೊಟ್ಟಿದ್ದಾರೆ.

ಹಾಗಾಗಿ ನಾವೂ ಬಹು ಎಚ್ಚರಿಕೆಯನ್ನು ವಹಿಸಬೇಕು. ಆರ್ಯರ ಕಿಲಾಡಿ ರಾಜಕಾರಣಿಗಳನ್ನು ಧಿಕ್ಕರಿಸುವ ಭರಾಟೆಯಲ್ಲಿ ಆರ್ಯ ಕವಿಗಳನ್ನು ಕಳೆದುಕೊಳ್ಳುವ ಅರಸಿಕರಾಗಕೂಡದು. ಅವೈಜ್ಞಾನಿಕ ಕುತಂತ್ರಿಗಳಾದ ವೈದಿಕ ಪುರೋಹಿತರನ್ನು ತಿರಸ್ಕರಿಸುತ್ತಾ ಜಿಜ್ಞಾಸುಗಳೂ, ವಿಚಾರವಾದಿಗಳೂ ಆದ ಶಿಷ್ಟ ಋಷಿಗಳನ್ನು ಕಡೆಗಣಿಸಬಾರದು. ವಿಪ್ರಾಃ ಕವಯೋ ವಿಚಾರಮೇಕಂ ಸಂತಂ ಬಹುಧಾ ಕಲ್ಪಯಂತಿಃ ಉಪನಿಷತ್ತು ಋಷಿಗಳು ಒಂದೇ ಸತ್ಯವನ್ನು ನಾನಾ ರೀತಿಗಳಲ್ಲಿ ವಿಚಾರ ಮಾಡುತ್ತಾರೆ.

ಸತ್-ಅಸತ್

ಉಪನಿಷತ್ತಿನ ಋಷಿಗಳು ಭೌತಿಕತೆಯ ಅಂತರ್ಗತವಾದ, ದೇಹದೊಳಗಿನ ಅಂತರಾತ್ಮವಾದ, ದೇಹದ ಆಚೆಯ ಅವಕಾಶವಾದ ಅಸ್ತಿತ್ವವನ್ನು ವಿಚಾರಿಸುವಾಗ, ಭೌತವಾದಿಗಳಾದ ಚಾರ್ವಾಕರಾಗಲಿ, ಲೋಕಾಯತರಾಗಲಿ ಜಿಜ್ಞಾಸುಗಳಾದ ಉಪನಿಷತ್ತಿನ ಋಷಿಗಳಿಗೆ ವಿರೋಧಿಗಳೆನಿಸಲಿಲ್ಲ. ಚಾರ್ವಾಕರ ಭೌತಿಕವಾದವು ವಿಚಾರಪರವಾಗಿದ್ದು, ಆರ್ಯ ವೈದಿಕರ ಲೌಕಿಕಾಪೇಕ್ಷೆಯು ಅದಕ್ಕಿಂತ ಭಿನ್ನವಾಗಿರುವುದಂತಹುದು. ಆದರೆ ಚಾರ್ವಾಕರು ಉಡಾಳರೆಂಬಂತೆ, ವಿಷಯಲೋಲುಪರು ಎಂಬಂತೆ ವೈದಿಕರು ಬಿಂಬಿಸಿದರು. ಪಕ್ಕಾ ಲೌಕಿಕ ಫಲಾಪೇಕ್ಷಿಗಳಾಗಿದ್ದ ಆರ್ಯರ ಜೀವನಕ್ರಮದಲ್ಲಿ ಆತ್ಮ ಮತ್ತು ಪರಮಾತ್ಮ ಎಂಬುವ ವಿಚಾರಗಳನ್ನು ಮಾಡುವವರಾಗಿರಲಿಲ್ಲ. ಆದರೆ, ಇವರ ಲೌಕಿಕ ಆಕಾಂಕ್ಷೆಗಳನ್ನು ಧಿಕ್ಕರಿಸಿ, ತಮ್ಮದೇ ಆದ ವಿಚಾರಗಳಲ್ಲಿ ತೊಡಗಿದ್ದು ಆತ್ಮವನ್ನು ಸತ್ ಎಂದೂ ಭೌತಿಕ ಅಸ್ತಿತ್ವವನ್ನು ಅಸತ್ ಎಂದೂ ನಡೆದಂತಹ ಅನೇಕ ಋಷಿಗಳ ಬಹು ವ್ಯಾಪಕವಾದ ಜಿಜ್ಞಾಸುಯಾತ್ರೆಯ ಖ್ಯಾತಿಯನ್ನು ವೈದಿಕ ಬ್ರಾಹ್ಮಣರು ಕಂಡುಕೊಂಡಿರಬೇಕು. ಗೆದ್ದೆತ್ತಿನ ಬಾಲ ಹಿಡಿದ ರಾಜಕೀಯ ಬುದ್ಧಿಯ ಈ ವೈದಿಕರು ತಮ್ಮ ಪಟ್ಟಭದ್ರ ಹಿತಾಸಕ್ತಿಯ ರಾಜಕಾರಣದಲ್ಲಿ ತಮ್ಮದಲ್ಲದ ದೃಷ್ಟಿಯಾದ ಆತ್ಮ-ಪರಮಾತ್ಮ ಕಲ್ಪನೆಯನ್ನೇ ಗಟ್ಟಿಯಾಗಿ ಹಿಡಿದಿಟ್ಟುಕೊಂಡಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಶ್ರೀ ತ್ರಿಪುರಾ ರಹಸ್ಯದ ಮಹಾತ್ಮ ಖಂಡದ 5ನೆಯ ಅಧ್ಯಾಯದಲ್ಲಿ "ಆಕೃಮಿ ಶ್ವಪಚಾಸ್ಸರ್ವೇ ಸುಖಾರ್ಥಂ ಸತತೋದ್ಯತಾಃ । ಯತ್ಸುಖಂ ವಿಟ್‌ಕೃಮೇರ್ಜಿಹ್ವಾ ಮೈಥುನೋತ್ಥಂ ತು ಯಾದೃಶಂ ॥8॥ ತದೇವ ತಾದೃಶಂ ಲೋಕತ್ರಯ ರಾಜಸ್ಯ ನೇತರುತ್ । ಸರ್ವಂ ಹಿ ಭೌತಿಕೋತ್ಥಸ್ಯ ದೇಹಸ್ಯಾರ್ಥಂ ಸಮೀಹಿತಂ ॥9॥" ಎಂದರೆ, ಮಲಮೂತ್ರಾದಿಗಳಲ್ಲಿರುವ ಕ್ರಿಮಿಗೆ ಜಿಹ್ವಾತೃಪ್ತಿಪಡಿಸುವುದರಿಂದಲೂ ಮತ್ತು ಮೈಥುನದಿಂದಲೂ ಯಾವ ಸುಖವು ಲಭಿಸುತ್ತದೋ, ಮೂರುಲೋಕಗಳಿಗೂ ರಾಜನಾದವನ ಶರೀರದ ಸುಖವೂ ಅದೇ ಅಲ್ಲದೇ ಬೇರೆಯಲ್ಲವು! ಎಂದು ಭೌತಿಕ ಸುಖವನ್ನು ತುಚ್ಛವಾಗಿ ಕಾಣುವ ಭೃಗುವಂಶದ ಪರಶುರಾಮ ದೇಹವಾದವನ್ನು ಅತಿಯಾಗಿ ನಿಂದಿಸುತ್ತಾನೆ. ಭೌತಿಕವಾದದ ಮೂಲಕ ತಮ್ಮ ಸಿದ್ಧಾಂತದ ಸಾಕ್ಷಾತ್ಕಾರವನ್ನು ಕಂಡುಕೊಳ್ಳಲೆತ್ನಿಸುವ ಚಾರ್ವಾಕರಂತವರನ್ನು ಕುರಿತಿದ್ದಾಗಿರಬಹುದಾದ ಪರಶುರಾಮನ ಮಾತನ್ನು ಗಮನಿಸಿ. "ಬಹು ಭಯಂಕರವಾದ ಮತ್ತು ದುಃಖಕ್ಕೆ ಕಾರಣೀಭೂತವಾದ ಈ ಶರೀರವನ್ನು ಆತ್ಮಬುದ್ಧಿಯಿಂದ ತಿಳಿಯುತ್ತಾರೆ. ಇದು ಅತಿ ನಿಂದಿತವಾದುದು." (ದೇಹಮಾತ್ಮಧಿಯಾ ದೃಷ್ಟ್ವಾ ಕರೋತ್ಯಪಿ ವಿನಿಂದಿತಂ । ಕೋ ನಾಮ ಗುಣಲೇಶೋತ್ರ ವರ್ತತೇ ಹತದೇಹಕೇ ॥12॥) ಬಹು ಜಿಗುಪ್ಸೆಯಿಂದ ಸಂಸಾರ ಮತ್ತು ಶಾರೀರಿಕ ಸುಖವನ್ನು ನಿಂದಿಸುವ, ರಕ್ತ ಮಾಂಸ, ಗಾಯ, ಕೀವುಗಳಿಂದ ಕೂಡಿದ ನೋವನ್ನೆಲ್ಲಾ ವಿವರವಾಗಿ ಹೊಂದಿರುವ ಅಧ್ಯಾಯದ ಈ ಗ್ರಂಥವು ಪ್ರಾಯಶಃ ವೇದಾಂತದ ಅಥವಾ ಉಪನಿಷತ್ತುಗಳ ನಂತರದ ಕಾಲದ್ದೇ ಆಗಿರುತ್ತದೆ. ದೇಹವಾದಿಗಳನ್ನು ಖಂಡಿಸುತ್ತಾ, ಆತ್ಮ ವಿಚಾರವನ್ನು ಬೆಂಬಲಿಸುತ್ತಾ ಇರುವ ವಿಷಯವೆಂದುಕೊಂಡರೂ, ಬುದ್ಧನ ಕಾಲದ ನಂತರದ ವೈರಾಗ್ಯದ ಚಿಂತನೆಗಳು ಮತ್ತು ಜಿಗುಪ್ಸೆಗಳೇನಾದರೂ ಇರಬಹುದೇ ಎಂಬ ಅನುಮಾನವೂ ಮೂಡುತ್ತದೆ. ಗ್ರಂಥವು ಇನ್ನೂ ಮುಂದುವರೆದು ಅಸುರರನ್ನು ಸೋಮಾರಿಗಳು, ದುಷ್ಟರು ಎಂದು ನಾನಾ ಬಗೆಯಲ್ಲಿ ನಿಂದಿಸುತ್ತದೆ.

ಅಸುರರ ಮೂಲವೇನಾಗಿರಬಹುದು ಮತ್ತು ಆರ್ಯರ ಅಷ್ಟು ಆಗ್ರಹಕ್ಕೆ ಇವರು ತುತ್ತಾಗಿರುವುದರ ಕಾರಣವೇನು ಎಂದು ಹುಡುಕುತ್ತಾ ಹೋದಾಗ ಮೆಸಪಟೋಮಿಯಾದ ಉತ್ತರಕ್ಕೆ ನಾಲ್ಕು ದೇಶಗಳನ್ನು ಒಳಗೊಂಡಿರುವ ಅಸ್ಸಿರಿಯಾ ಗೋಚರಿಸುತ್ತದೆ. ಇದರ ಮೂಲಕ ಎರಡು ಮಹಾನದಿಗಳಾದ ಯೂಫ್ರಟಿಸ್ ಮತ್ತು ಟೈಗ್ರಿಸ್ ಹರಿಯುತ್ತವೆ. ಬ್ಯಾಬಿಲೋನಿಯಾ ಮತ್ತು ಅಸ್ಸಿರಿಯಾ ನಡುವೆ ನೀರಾವರಿ ಕಾಣದ, ಕೃಷಿಗೆ ಕಷ್ಟವಾಗುವಂತಹ ಒಣಭೂಮಿಯೇ ನಡುಸೀಮೆಯಾಗುತ್ತದೆ. ಆದರೆ ಅಸ್ಸಿರಿಯಾದ ಭೂಮಿ ಫಲವತ್ತಾಗಿದ್ದು ಸಂಪದ್ಭರಿತವಾಗಿತ್ತು. ಅವರ ಭಾಷೆ ಅಸ್ಸಿರಿಯನ್ (ಅಕ್ಕಡಿಯಿನ್) ಮೂಲಗಳು ಮತ್ತು ಅಲ್ಲಿನ ಅಕ್ಕಡ್ ಮತ್ತು ಅಶುರ್ ಎಂಬ ನಗರಗಳೂ ಹಾಗೂ ಅಸ್ಸಿರಿಯಾ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ ಅಶುರ್‌ಬಲ್ಲಿಟ್ ಮತ್ತು ಅವನ ನಂತರದ ಅಶುರ್ ಎಂಬ ಹೆಸರಿನಿಂದ ಪ್ರಾರಂಭವಾಗುವ ಅರಸರು ನಮ್ಮ ಅಸುರರ ಮೂಲವನ್ನು ಹುಡುಕುವಾಗ ಎಡತಾಕುತ್ತಾರೆ. ಇದು ಕಲ್ಪಿತಸತ್ಯವಾದರೂ ತಳ್ಳಿಹಾಕುವ ಸಾಧ್ಯತೆಗಳಿಲ್ಲ. ನಿಷ್ಪಕ್ಷಪಾತವಾಗಿ ಇತಿಹಾಸವನ್ನು ಅಧ್ಯಯನ ಮಾಡುವಾಗ ಯಾವ ಪೂರ್ವಾಗ್ರಹಗಳನ್ನೂ ಇಟ್ಟುಕೊಳ್ಳದೇ ದೊರಕಿದ ಸಂಗತಿಗಳನ್ನು ಹಿಂಬಾಲಿಸಲೇಬೇಕಲ್ಲವೇ? ಅಸುರರಿಗಾಗಿ ಅಸ್ಸಿರಿಯಾವನ್ನು ಅನುಸರಿಸುತ್ತಾ ಹೋದಾಗ, ಸುಮೇರಿಯಾದವರು ಏಕೆ ಸಿಕ್ಕರು? ಸುಮೇರ್ ಸಂಸ್ಕೃತಿಯನ್ನು ಹೊಂದಿರುವ ಪ್ರದೇಶವೆಲ್ಲಿದೆ? ಆ ಸುಮೇರ್‌ಗೂ, ಸುಮೇರು ಶೃಂಗಸ್ಥಾ ಚಿಂತಾಮಣಿ ಗೃಹಾಂತಸ್ಥಾ ಎಂದು ಶ್ರೀವಿದ್ಯೆಯಲ್ಲಿ ಆರಾಧಿಸುವ ಲಲಿತೆಯ ಮೇರು(ಸುಮೇರು)ವಿಗೂ ಏನಾದರೂ ಸಂಬಂಧವಿದೆಯೇ? ಇತ್ಯಾದಿಗಳನ್ನು ಹಂತಹಂತವಾಗಿ, ಸಾವಕಾಶವಾಗಿ ಗಮನಿಸುತ್ತಾ ಹೋಗೋಣ. ■

ದೌರ್ಜನ್ಯ ಇಂದು ನಿನ್ನೆಯದಲ್ಲ...

ಸೌಜನ್ಯಳ ಅತ್ಯಾಚಾರ-ಕೊಲೆ ಪ್ರಕರಣದ ಕುರಿತು ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವ ಬರಹದಲ್ಲಿ "ಖಾವಂದರೆ, ಆಣೆ ಮಾಡ್ತೀರಾ?" ಎಂದು ಸವಾಲು ಹಾಕಲಾಗಿದೆ. ಇದರಿಂದ ಖಾವಂದರ ಆಣೆ ಪ್ರಮಾಣ ಮತ್ತು ಕ್ಷೇತ್ರದ ನ್ಯಾಯವನ್ನು ಪತ್ರಿಕೆಯೂ ಎತ್ತಿ ಹಿಡಿಯುತ್ತಿದೆಯೆ ಎಂಬ ಸಂದೇಹ ತಲೆದೋರುತ್ತದೆ. ಖಾವಂದರೆ ಸ್ವತಃ ಕ್ಷೇತ್ರದ ಮಂಜುನಾಥಸ್ವಾಮಿ ಮತ್ತು ಅಣ್ಣಪ್ಪ ದೈವಗಳ ಸಮ್ಮುಖದಲ್ಲಿ, ತಾವು ಅಪರಾಧದಲ್ಲಿ ಶಾಮೀಲಾಗಿಲ್ಲ ಎಂದು ಆಣೆ ಪ್ರಮಾಣ ಮಾಡಿದರೆ ಸೌಜನ್ಯಳ ಆತ್ಮಕ್ಕೆ ಶಾಂತಿ ಮತ್ತು ಅವಳ ಹೆತ್ತವರಿಗೆ ನ್ಯಾಯ ದೊರೆಯುತ್ತದಾ?

ಇಲ್ಲಿನ ಧರ್ಮದರ್ಶಿ ಹಾಗೂ ಅವರ ಕುಟುಂಬಕ್ಕೆ ಅತ್ಯಾಚಾರ, ಕೊಲೆ, ಲೂಟಿ, ದಬ್ಬಾಳಿಕೆಗಳ ಒಂದು ಸುದೀರ್ಘ ಇತಿಹಾಸವೇ ಇದೆ. ಹಾಗಿರುತ್ತ ಆಣೆ ಪ್ರಮಾಣದ ಹೆಸರಿನಲ್ಲಿ ಒಂದು ಸುಳ್ಳು ಹೇಳುವುದು ಖಾವಂದರಿಗೆ ಕಷ್ಟವೆ? ಅಷ್ಟೆಲ್ಲ ಅಪರಾಧ ಮಾಡಿ ಜೀರ್ಣಿಸಿಕೊಂಡವರು ಅವನ್ನು ಸಮರ್ಥಿಸಿಕೊಂಡು ಆಣೆ ಪ್ರಮಾಣ ಕೂಡ ಮಾಡಿಯಾರು. ಆದರೆ ಖಾವಂದರ ಮಾತಿನಲ್ಲಿ ಈಗ ಇಲ್ಲಿನ ಆಸುಪಾಸಿನ ಜನರಿಗೇನೆ ವಿಶ್ವಾಸವಿಲ್ಲ. ಮೊನ್ನೆ ಶುಕ್ರವಾರ (ತಾ 25-10-2013) ಬೆಳ್ತಂಗಡಿಯಲ್ಲಿ ಸೌಜನ್ಯ ಪ್ರಕರಣವನ್ನು ಸಿ.ಬಿ.ಐ ತನಿಖೆಗೆ ಒಪ್ಪಿಸಬೇಕು ಎಂಬ ಹಕ್ಕೊತ್ತಾಯಕ್ಕೆ ಸೇರಿದ ಸಭೆಯನ್ನು ನೀವು ನೋಡಬೇಕಿತ್ತು. ಕ್ಷೇತ್ರ, ಬೆಳ್ತಂಗಡಿ, ಉಜಿರೆ, ಗುರುವಾಯನಕೆರೆ, ಮಡಂತ್ಯಾರು, ಅಳದಂಗಡಿ, ನಾರಾವಿ, ಮೂಡಬಿದಿರೆ, ಕಾರ್ಕಳ ಮುಂತಾದ ಆ ಪರಿಸರದ ಊರುಗಳಿಂದ ನಲವತ್ತು ಸಾವಿರಕ್ಕೂ ಹೆಚ್ಚು ಜನರು ಸಭೆಯಲ್ಲಿ ಭಾಗವಹಿಸಿದ್ದರು. ವಿಶೇಷವೆಂದರೆ ನೆರೆದಿದ್ದವರಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿದ್ದರು. ಸೌಜನ್ಯ ಪ್ರಕರಣದಲ್ಲಿ ಧರ್ಮದರ್ಶಿ ಹಾಗೂ ಅವರ ಕುಟುಂಬದವರ ಕೈವಾಡ ಖಂಡಿಸಿ ಬೆಳ್ತಂಗಡಿಯಲ್ಲಿ ಒಂದು ವಾರದಲ್ಲಿ ನಡೆದ ಎರಡನೆ



ದೊಡ್ಡ ಪ್ರತಿಭಟನಾ ಸಭೆ ಅದಾಗಿತ್ತು. ವಾರದ ಮೊದಲಲ್ಲಿ ಸಿ.ಪಿ.ಎಂ.ನ ಯುವ ಸಂಘಟನೆ ಡಿ.ವೈ.ಎಫ್.ಐ ಆ ಪುಟ್ಟ ಊರಿನಲ್ಲಿ ಐದು ಸಾವಿರದಷ್ಟು ಜನರನ್ನು ಸಂಘಟಿಸಿ ಸೌಜನ್ಯ ಪ್ರಕರಣ ಕುರಿತು ತನಿಖೆಯ ಜೊತೆ, ಕಳೆದ 10 ವರ್ಷಗಳಲ್ಲಿ ಕ್ಷೇತ್ರದಲ್ಲಿ ಸಂಭವಿಸಿದ 400 ಕ್ಕೂ ಮಿಕ್ಕಿ ಅಸಹಜ ಸಾವು ಹಾಗೂ ಧರ್ಮದರ್ಶಿಗಳ ಭೂಕಬಳಿಕೆ ಮುಂತಾದ ಅವ್ಯವಹಾರಗಳ ಕುರಿತು ನ್ಯಾಯಾಂಗ ವಿಚಾರಣೆಗೆ ಆಗ್ರಹಿಸಿತ್ತು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕಾಂಗ್ರೆಸ್, ಜೆ.ಡಿ.ಎಸ್ ಮತ್ತು ಬಿ.ಜೆ.ಪಿ.ಗಳ ನಾಯಕರು, ಶಾಸಕರು, ಉಸ್ತುವಾರಿಗಳು, ಉಭಯ ಜಿಲ್ಲೆಗಳ ಸಾಮಾಜಿಕ ಮುಖಂಡರು, ಪೇಜಾವರಶ್ರೀ ಮೊದಲಾದ ಮಠಾಧೀಶರು, ವಿವಿಧ ಸಂಘಸಂಸ್ಥೆಗಳ ಹೆಸರಿನಲ್ಲಿ ದೇಣಿಗೆ ಎತ್ತುವವರು ಹೀಗೆ- ಬಗೆಬಗೆಯ 'ಫಲಾನುಭವಿ'ಗಳು ಧರ್ಮದರ್ಶಿಗಳಿಗೆ ಬಹುಪರಾಕ್ ಹೇಳುತ್ತಿರುವಾಗಲೇ ಆ ಪರಿಸರದ ಜನಸಾಮಾನ್ಯರು ಮಾತ್ರ ಎರಡೆರಡು ಭಾರಿ ಬೆಳ್ತಂಗಡಿಯಲ್ಲಿ ಅವರ ವಿರುದ್ಧ ಪ್ರತಿಭಟನೆ ನಡೆಸಿದರು. ಕರಾವಳಿಯ ಜನರಿಗೆ ಕ್ಷೇತ್ರದ ಮೇಲೆ ಭಕ್ತಿ ಇರಬಹುದು. ಆದರೆ ಕ್ಷೇತ್ರದ ನಾಯಕರ ಬಗ್ಗೆ ಅವರಲ್ಲಿರುವುದು ಭಯ ಮಾತ್ರ; ಭಕ್ತಿ ಹೋಗಲಿ ಗೌರವ ಕೂಡ ಯಾವತ್ತೂ ಇರಲಿಲ್ಲ. ಉದಾಹರಣೆಗೆ 1967 ರ ಆಗಿನ ಮೈಸೂರು ಪ್ರಾಂತ್ಯದ ವಿಧಾನಸಭಾ ಚುನಾವಣೆಯಲ್ಲಿ ಹಾಲಿ ನಾಯಕರ ತಂದೆ ಕಾಂಗ್ರೆಸ್ ಪಕ್ಷದ ವತಿಯಿಂದ ಕಾಪು ಕ್ಷೇತ್ರದಲ್ಲಿ ಸ್ಪರ್ಧಿಸಿ, ಹೀನಾಯವಾಗಿ ಸೋತಿದ್ದರು.

ಅವರ ಎದುರಾಳಿ ಪ್ರಜಾಸೋಶಲಿಸ್ಟ್ ಪಕ್ಷದ ಭಾಸ್ಕರ ಶೆಟ್ಟಿ ಭಾರೀ ಬಹುಮತದೊಂದಿಗೆ ಆಯ್ಕೆಯಾದರು. ಕ್ಷೇತ್ರದ ನಾಯಕರು ಎನ್ನುವುದನ್ನು ಬಿಟ್ಟರೆ ಅವರು ಹೆಸರು ಮಾಡಿದ್ದು ತನ್ನ ಹೆಣ್ಣುಬಾಕತನಕ್ಕೆ ಮಾತ್ರ. ಕಾಪುವಿನ ಮತದಾರರಿಗೆ ಅದು ಗೊತ್ತಿತ್ತು.

ಹಾಲಿ ನಾಯಕರು ಮತ್ತು ಅವರಿಗಿಂತ ಹೆಚ್ಚಾಗಿ ಅವರ ಸೋದರರ ಸುಪರ್ದಿಯಲ್ಲಿ ನಡೆಹ ದೌರ್ಜನ್ಯಗಳ ಬಗ್ಗೆ ಮೊನ್ನೆ ಬೆಳ್ತಂಗಡಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಾಕಷ್ಟು ವಿಷಯ ಹೊರಬಿದ್ದಿದೆ. ಸೌಜನ್ಯ ಪ್ರಕರಣಕ್ಕೆ ಹಲವು ವರ್ಷಗಳ ಮೊದಲು ಕ್ಷೇತ್ರದಲ್ಲಿ ಕೊಲೆಯಾದ ಪದ್ಮಲತಾ ಅವರ ತಂದೆ ಹಾಗೂ ವೇದವಲ್ಲಿಯವರ ಪತಿ ಸೌಜನ್ಯಳ ಹೆತ್ತವರ ಜೊತೆ ವೇದಿಕೆಯಲ್ಲಿದ್ದರು.

ಕ್ಷೇತ್ರದ ಹಾಲಿ ನಾಯಕರು ದೌರ್ಜನ್ಯಪರ್ವ 70ರ ದಶಕದಲ್ಲಿ ಉಜಿರೆಯ ಒಬ್ಬ ಸಿಪಿಎಂ ಕಾರ್ಯಕರ್ತ ದಿ|| ಕೆ.ವಿ.ರಾವ್ ಉಜಿರೆ ಅವರ ಮೇಲೆ ನಡೆದ ಸರಣಿ ಹಲ್ಲೆಗಳೊಂದಿಗೆ ಪ್ರಾರಂಭವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿ.ಪಿ.ಎಂ. ಗೆ ಯಾವತ್ತೂ ಹೇಳಿಕೊಳ್ಳುವ ಜನ ಬೆಂಬಲವಿರಲಿಲ್ಲ. ಕ್ಷೇತ್ರ, ಉಜಿರೆಗಳಲ್ಲಂತೂ ಪಕ್ಷದ ಬ್ಯಾನರ್ ಹಿಡಿಯಲು ಕೂಡಾ ಬಹುಶಃ ಇಬ್ಬರು ಸಿಗುತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಕೆ.ವಿ. ರಾವ್ ಸಿ.ಪಿ.ಎಂ.ನ ರೈತ ಸಂಘದ ಕಾರ್ಯಕರ್ತರಾಗಿ ಕರ್ನಾಟಕ ಸರಕಾರದ ಭೂ ಸುಧಾರಣೆಯ ಪ್ರಾಮಾಣಿಕ ಅನುಷ್ಠಾನಕ್ಕೆ ಹೋರಾಟ ನಡೆಸಿದ್ದರು. ಬಡತನದಲ್ಲಿದ್ದ ಕೆ.ವಿ.ರಾವ್, ಉಜಿರೆಯಲ್ಲಿ ಒಂದು ಸಣ್ಣ ಚಪ್ಪಲಿ ಅಂಗಡಿ ನಡೆಸುತ್ತಿದ್ದು ಕ್ಷೇತ್ರದ ನಾಯಕರ ಸಾಮ್ರಾಜ್ಯವನ್ನು ಏಕಾಂಗಿಯಾಗಿ ಎದುರು ಹಾಕಿಕೊಂಡಿದ್ದರು. ಕ್ಷೇತ್ರದ ನಾಯಕರ ಗೂಂಡಾಪಡೆ, ನಾಲ್ಕು ಸಲ ಅವರ ಅಂಗಡಿಗೆ ಬೆಂಕಿ ಹಚ್ಚಿತ್ತು. ಹಲವು ಬಾರಿ ಅವರ ಮೇಲೆ ದೈಹಿಕ ಹಲ್ಲೆ ನಡೆಸಿತ್ತು. ಕೆಲವು ವರ್ಷಗಳ ಹಿಂದೆ ತನ್ನ 70ರ ಇಳಿವಯಸ್ಸಿನಲ್ಲಿ ಕೆ.ವಿ. ರಾವ್ ತೀರಿಕೊಂಡರು. ಅವರು ಪ್ರಾರಂಭಿಸಿದ ಹೋರಾಟವನ್ನು ಈಗ ಬೆಳ್ತಂಗಡಿಯ ಜನ ಮುಂದುವರಿಸಿದ್ದು, ಅದಕ್ಕೆ ಸಿ.ಪಿ.ಎಂ. ಕೈ ಜೋಡಿಸಿರುವುದರಲ್ಲಿ ಒಂದು ಚಾರಿತ್ರಿಕ ಅನಿವಾರ್ಯತೆ ಇದೆ ಎನ್ನಿಸುತ್ತದೆ.

■ ಜೆ. ರಾಜಶೇಖರ

ಬೆಳ್ತಂಗಡಿಯ ಜನರೇ, ಮೂಗು ಹಿಡಿದರೆ ಬಾಯಿ ತೆರೆದೇ ತೆರೆಯುತ್ತದೆ-'ಪದ್ಮಲತಾ'

ಬೆಳ್ತಂಗಡಿಯಲ್ಲಿ ಹೋರಾಡುತ್ತಿರುವ ನನ್ನ ಜನರೇ,

ನಾನು ಪದ್ಮಲತಾ. ನಿಮ್ಮ ಸೌಜನ್ಯಾ ನನಗೆ ಗೊತ್ತು. ನಾನು ಅವತ್ತು ದುರುಳರಿಗೆ ಬಲಿಯಾಗದೇ ಬದುಕಿದ್ದಿದ್ದರೆ ನನಗೆ ಈಗ ಈಕೆಯ ವಯಸ್ಸಿನ ಮಗಳೊಬ್ಬಳು ಇರುತ್ತಿದ್ದಳು. ಹಾಗಾಗಿ ಈ ಸೌಜನ್ಯಾ ನನಗೆ ಮಗಳ ಸಮಾನ.

ನನ್ನಂತೆಯೇ ಸಂತ್ರಸ್ತೆಯಾದ ಈ ಮುದ್ದು ಮಗು ಇದೀಗ ನನ್ನೊಡನೆಯೇ ಇದ್ದಾಳೆ. ಕಾಲುಶತಮಾನದ ಬಳಿಕ ಜನತೆ ನನ್ನನ್ನು ಹಾಗು ನನ್ನ ಕರಾಳಕಥೆಯನ್ನು ಪುನಃ ನೆನಪಿಸಿಕೊಳ್ಳಲು ಈಕೆಯ ದುರಂತ ಕಥೆ ಒಂದು ನೆಪವಾಗುತ್ತಿರುವುದಕ್ಕೆ ನನಗೆ ಅತೀವ ದುಃಖವಿದೆ ಹಾಗು ವಿಷಾದವಿದೆ. ಯಾಕೆಂದರೆ ಮುಂದೆ ನಮ್ಮಿಬ್ಬರನ್ನು ಮತ್ತು ವೇದವಲ್ಲಿಯನ್ನೂ - ಪುನಃ ನೆನಪಿಸಿಕೊಳ್ಳಲು ಇಂತಹ ದುರ್ಘಟನೆ ಮತ್ತೊಮ್ಮೆ ಮರುಕಳಿಸುವ ಸಾಧ್ಯತೆಯನ್ನು ಖಂಡಿತಾ ಅಲ್ಲಗಳೆಯಲಾಗದು ತಾನೆ? ಹಾಗಾಗದಿರಲಿ ಮತ್ತು ಹಾಗಾಗದಿರಲು ಇದಕ್ಕೊಂದು ಪೂರ್ಣ ವಿರಾಮ ಹಾಕುವ ಕೆಲಸ ನಿಮ್ಮಿಂದಲೇ ಆಗಬೇಕಿದೆ.

ನಮ್ಮೀ ದುಃಖದ ನಡುವೆಯೂ ಇದೀಗ ಕಾಣಿಸಿಕೊಳ್ಳುತ್ತಿರುವ ಪಾಳೇಗಾರಿಕೆಯ ವಿರುದ್ಧದ ಜನಜಾಗೃತಿ ನಮಗೊಂದು ಆಶಾಕಿರಣವಾಗೇ ಗೋಚರಿಸುತ್ತಿದೆ. ನಿಮ್ಮ ಸೋದರಿಯರಲ್ಲೇ ಒಬ್ಬರಾದ ನಮ್ಮನ್ನು ದಯವಿಟ್ಟು ನಿರಾಶೆಗೊಳಿಸದಿರಿ. ಬಹುಶಃ ಈ ಪರಿಸರದಲ್ಲಿ ಹೆಣ್ಣಾಗಿ ಹುಟ್ಟಿ ಬಂದಿದ್ದೇ ನಾವೆಲ್ಲ ಮಾಡಿದ ಮೊದಲ ತಪ್ಪೆಂದೆನಿಸುತ್ತಿದೆ. ನಮ್ಮ ಪೋಷಕರ ಮೇಲಿನ ಸಿಟ್ಟಿಗೆ ಸಂಬಂಧವೇ ಇಲ್ಲದ ಸಾವುಗಳು ದಾರುಣವಾಗಿ ಬಲಿಯಾಗಬೇಕಾಗಿ ಬಂತು. ದೇಶಕ್ಕೇ ನ್ಯಾಯದಾನ, ಅಭಯದಾನ ನೀಡುತ್ತದೆಂದು ಖ್ಯಾತಿಯಾದ ಈ ಕ್ಷೇತ್ರದಲ್ಲಿ ನಮಗೆ ಮಾತ್ರ ಎಂದೂ ನ್ಯಾಯ ಸಿಕ್ಕಿಲ್ಲ.


ಒಂದು ದಿನ ಬೇರೆ ಬೇರೆ ಜಿಲ್ಲೆಯ ಊರಿನ ನನ್ನ ಗೆಳತಿಯರೊಂದಿಗೆ ನಾನು ಕೊಚ್ಚಿಕೊಂಡಿದ್ದೆ "ನಮ್ಮದು ಬುದ್ಧಿವಂತರ ಜಿಲ್ಲೆ", "ಅಬ್ಬಕ್ಕ ರಾಣಿಯ ಜಿಲ್ಲೆ", "ಅನ್ಯಾಯದ ವಿರುದ್ಧ ಸಿಡಿದು ನಿಂತ ತುಳುನಾಡಿನ ಅಪ್ಪೆ 'ಸಿರಿ'ಯ ನಾಡು ನಮ್ಮದು" ಎಂದು. ಆದರೆ ಅವೆಲ್ಲ ಈಗ ಬರೀ ತಮಾಷೆಗಳಾಗಿ ತೋರುತ್ತಿದೆ. ಯಾಕೆಂದರೆ ಈ ಕ್ಷೇತ್ರದ ನಾಯಕರು ನಡೆಸುವ 'ಗ್ರಾಮೀಣಾಭಿವೃದ್ಧಿ' ಯೋಜನೆಗಷ್ಟೇ ಆ 'ಸಿರಿ'ಯ ಹೆಸರು ಇದೆಯೇ ಹೊರತು ಈ ಅಪ್ಪೆ ಸಿರಿಯ ಸ್ತ್ರೀ ಕುಲದ ಪರ ವಹಿಸಿ ಮಾತಾಡುವುದು ಕೂಡ ಇಲ್ಲಿ ಅಕ್ಷಮ್ಯ ಅಪರಾಧವೆನಿಸುತ್ತಿದೆ.

ನನ್ನ ಪ್ರೀತಿಯ ಅಣ್ಣಂದಿರೇ ಮತ್ತು ಅಕ್ಕಂದಿರೇ, ನೀವು ಹೋರಾಡಿ, ಬೊಬ್ಬೆಯೇ ಹೊಡಿಯಿರಿ, ಸಿಐಡಿಯೋ ಸಿಬಿಐಯೋ ಇನ್ನೊಂದೋ ಮಾಡಿ. ಇದರಿಂದ ನೇರವಾಗಿ ನಮಗಾಗಲೀ ನಮ್ಮ ಹೆತ್ತವರಿಗಾಗಲೀ ಏನೇನೂ ಲಾಭವಿಲ್ಲ. ಯಾಕೆಂದರೆ ನೀವೇನೇ ಮಾಡಿದರೂ ಹೋದ ನಮ್ಮ ಜೀವವನ್ನು ಮರಳಿ ತಂದು ಕೊಡಲಾದೀತೆ? ಹೋದ ನಮ್ಮ ಮಾನವನ್ನು ತಂದು ಕೊಡಲಾದೀತೆ? ಉಹುಂ.. ಆದರೂ ಕೈಚೆಲ್ಲಿ ಹೋರಾಟ ಮಾತ್ರ ನಿಲ್ಲಿಸದಿರಿ. ಇಲ್ಲವಾದರೆ ನಾಳೆ ನಿಮ್ಮ ಮನೆಯದೇ ಹೆಣ್ಣಿಗೆ ಇದೇ ಸ್ಥಿತಿ ಕಾದಿಟ್ಟದ್ದು ಖಂಡಿತಾ.

ಟಿವಿಯಲ್ಲಿ ಮೊನ್ನೆ ಈ ವಿಚಾರ ಬಂದಾಗ "ಕ್ಷೇತ್ರದ ಮರ್ಯಾದೆ ಹೋಯಿತು" ಎಂದೆಲ್ಲಾ ಕೆಲವರು ವಿಚಾರವನ್ನು ತಿರುಚುತ್ತಿರುವುದನ್ನು ನೋಡಿ ನನಗೆ, ವೇದವಲ್ಲಿಗೆ ಮತ್ತು ಈ ಪುಟ್ಟ ಕಂದ ಸೌಜನ್ಯಳಿಗೆ ಶಾಕ್ ಆಯಿತು. ಈ ಕ್ಷೇತ್ರದ ಹೆಸರನ್ನು ಕೆಲ ದುರುಳರು ಅತ್ಯಾಚಾರ, ಕೊಲೆ ಹಾಗು ದರ್ಪ ದಬ್ಬಾಳಿಕೆಗಳ ಮೂಲಕ ಕೆಡಿಸುತ್ತಿರುವಾಗ ಹೋಗದ ಕ್ಷೇತ್ರದ ಮಾನಮರ್ಯಾದೆ ಈ ವಿಚಾರ ಟಿವಿಯಲ್ಲಿ ಬಂದ ಮಾತ್ರಕ್ಕೆ ಏಕಾಏಕಿ ಹೋದದ್ದು ಹೇಗಪ್ಪಾ ಎಂಬ ಪ್ರಶ್ನೆ ನಮ್ಮನ್ನೆಲ್ಲ ಕಾಡಿತು.

ದುರುಳರಿಂದ ಹಿಂಸೆ ಅನುಭವಿಸಿದ ನಮಗೆ ಆ ನೋವು ಗೊತ್ತು, ನೀವೂ ಅದನ್ನು ಊಹಿಸಬಲ್ಲಿರಿ. ಆದರೆ ಅದನ್ನು ಕಡೆಗಣಿಸಿ, ಕ್ಷೇತ್ರದ ಕೆಲವರ ಬಗ್ಗೆ ಅನುಮಾನಗಳಿವೆ ಎಂದ ಮಾತ್ರಕ್ಕೇ "ಕ್ಷೇತ್ರವನ್ನು ಅವಮಾನಿಸಲಾಯಿತು, ಕಳಂಕ ಹಚ್ಚಲಾಯಿತು" ಎಂದು ನೊಂದು ಕೆಲವರು ಸಭೆ ಸೇರುತ್ತಾರೆಂದರೆ ಅವರೆಲ್ಲ ಮನಸಾಕ್ಷಿ ಸತ್ತ ಪ್ರೇತಗಳು ಎಂದೇ ಭಾವಿಸಬೇಕಾಗುತ್ತದಲ್ಲವೇ?

27 ವರ್ಷಗಳ ಹಿಂದೆ ನನ್ನ ಕೊಲೆ ನಡೆದಾಗ ಕೆಲ ಪತ್ರಿಕೆಗಳು ಆ ಬಗ್ಗೆ ಬರೆದಿದ್ದವು. ಆಗಲೂ ಅಂತಹ ವರದಿಗಳನ್ನು ವಿರೋಧಿಸಿ ಕೆಲವರು ಪ್ರತಿಭಟಿಸಿದ್ದು ನನಗಿನ್ನೂ



ನೆನಪಿದೆ.. ಇವತ್ತು ಸಮಾಜವಾದಿ ಸಿದ್ಧಾಂತದ ಸಿದ್ದರಾಮಯ್ಯರವರ ನೇತೃತ್ವದಲ್ಲಿಯೂ ಅದು ಇನ್ನೊಂದು ರೀತಿಯಲ್ಲಿ ಅತೀ ಕೆಟ್ಟದಾಗಿ ಮುಂದುವರೆಯುತ್ತಿರುವುದು ವಿಪರ್ಯಾಸವೇ ಸರಿ. ಅದರಲ್ಲೂ ತಾವು ಪ್ರಗತಿಪರರೆಂದು ಬಿಂಬಿಸಿಕೊಳ್ಳುವ ಜನಾರ್ದನ ಪೂಜಾರಿ, ಬಿ.ಎಲ್.ಶಂಕರ್, ವಿನಯ್ ಕುಮಾರ್ ಸೊರಕೆ, ಕಮಲಾ ಹಂಪನಾ ತರಹದವರು (ಶಂಕರ್‌ಗೆ ಕ್ಷೇತ್ರದ ಕಾಲೇಜಿನಲ್ಲಿ ಕಲಿತ ಋಣವಿದ್ದರೆ, ಹಂಪನಾಗೆ ಸ್ವಜಾತಿ ಪ್ರೇಮ. ಆದರೆ ಅವರ ಮಕ್ಕಳಿಗೂ ನಮಗಾದಂತಹ ಅನ್ಯಾಯವಾದರೆ ಅವರು ಹೀಗೇ ವರ್ತಿಸುವರೇ?) ನ್ಯಾಯಾನ್ಯಾಯಗಳ ವಿಶ್ಲೇಷಣೆಗಿಳಿಯದೇ ಪಾಳೇಗಾರರ ಪರ ಬಹಿರಂಗ ಹೇಳಿಕೆ ನೀಡಿದ್ದನ್ನು ನೋಡಿದಾಗ ಈ ಹಿರಿಯರ ಬಗ್ಗೆ ಹೇಸಿಕೆ ಹುಟ್ಟಿತು.

ಮೊನ್ನೆ ಪ್ರಧಾನಿ ಮನಮೋಹನಸಿಂಗರೇ "ದೇಶದ ಕಾನೂನಿಗೆ ಯಾರೂ ಅತೀತರಲ್ಲ, ನಾನೂ ಕೂಡ" ಎಂದು ಹೇಳಿದ್ದಾರೆ. ಇತ್ತೀಚೆಗೆ ಪ್ರಭಾವಶಾಲಿ ಸ್ವಘೋಷಿತ 'ದೇವಮಾನವ' ಅಸಾರಾಂ ಬಾಪು ಎಂಬಾತನನ್ನೇ ಲೈಂಗಿಕ ಆರೋಪದ ಮೇಲೆ ಜೈಲಿಗೆ ತಳ್ಳಲಿಲ್ಲವೇ? ಕೆಲವರ್ಷಗಳ ಹಿಂದೆ ಕಂಚಿ ಕಾಮಕೋಟಿ ಶ್ರೀಯನ್ನೇ ಕೊಲೆ ಆರೋಪದಡಿಯಲ್ಲಿ ಬಂಧಿಸಿರಲಿಲ್ಲವೇ? ಅಂತಾದ್ದರಲ್ಲಿ ಈ ಕ್ಷೇತ್ರ ಮಾತ್ರ ಇವಕ್ಕೆಲ್ಲ ಹೊರತಾದುದು ಎಂಬಂತೆ ಮಾತಾಡುವ ಈ ಭಂಡರಿಗೆ ಏನನ್ನುವುದು?

ಇತ್ತೀಚೆಗೆ ಈ ವಿವಾದದ ಬಗ್ಗೆ ಈ ಕ್ಷೇತ್ರದ 'ನಾಯಕರು' "ಸೆಕ್ಸ್ ಸಂಬಂಧಿ ವಿಚಾರಗಳು ಮೀಡಿಯಾದವರಿಗೆ ಪ್ರಿಯ. ಅದಕ್ಕೆ ಇದು ಭಾರೀ ಪ್ರಚಾರ ಪಡೆಯುತ್ತಿದೆ" ಎಂದಿದ್ದರು. ಮಾನ್ಯರೆ, ಇದು ಸೆಕ್ಸ್‌ಗೆ ಸಂಬಂಧಿಸಿದ್ದಲ್ಲ. ಬದಲಾಗಿ ಅತ್ಯಾಚಾರಕ್ಕೆ, ಕೊಲೆಗೆ ಸಂಬಂಧಿಸಿದ್ದು. ಇವುಗಳ ವ್ಯತ್ಯಾಸವನ್ನು ನಾಯಕರು ಆದಷ್ಟು ಬೇಗ ಅರ್ಥಮಾಡಿಕೊಂಡರೆ ಅವರಿಗೇ ಒಳ್ಳೆಯದು.

ದೆಲ್ಲಿಯ ನಿರ್ಭಯಾ ಪ್ರಕರಣದಲ್ಲಿ ಜನ ದಂಗೆ ಎದ್ದಾಗ ಪೊಲೀಸರು ಚುರುಕಾಗಿ ಆರೋಪಿಗಳು ಸಿಗುವಂತಾಯ್ತು. ಹತ್ತಿರದ ಮಣಿಪಾಲದಲ್ಲೂ ಜನ ಒಟ್ಟಾಗಿ ಪ್ರತಿಭಟಿಸಿದ ಕಾರಣ ಕಷ್ಟವಾದರೂ ಆರೋಪಿಗಳನ್ನು ಹಿಡಿಯಲಾಯ್ತು. ಆದರೆ ನನ್ನ ಮತ್ತು ವೇದವಲ್ಲಿ ಕೇಸುಗಳಿರಲಿ, ಸೌಜನ್ಯಾ ಕೇಸಿನಲ್ಲಾದರೂ ಯಾಕೆ ಇಂತಹ ಬೆಳವಣಿಗೆ ನಡೆಯುಲಿಲ್ಲ?

ಸೌಜನ್ಯಾ ಪ್ರಕರಣದಲ್ಲಿ ಬೆಳ್ತಂಗಡಿಯ ಜನ ಒಂದು ವರ್ಷ ಕಾದಿದ್ದು ಅವರ ತಾಳ್ಮೆಗೆ ಸಾಕ್ಷಿಯಾಗಿದೆ. ಜನ ಬೀದಿಗಿಳಿವರೆ ಮಾತ್ರ ಅಧಿಕಾರಿವರ್ಗ ಎಚ್ಚೆತ್ತುಕೊಳ್ಳುತ್ತದೆ. ಮೂಗು ಹಿಡಿದರೆ ಬಾಯಿ ತೆಗೆಯಲೇ ಬೇಕಲ್ಲವೇ? ಜನ ಇದೇ ರೀತಿ ಒಗ್ಗಟ್ಟಾಗಿ ನಿಂತರೆ ಒಂದು ವರ್ಷವಲ್ಲ ಹತ್ತು ವರ್ಷದ ಕೇಸಾದರೂ ಅದು ಎಷ್ಟೇ ಪ್ರಭಾವಿಯ ಕೈಯೊಳಗಿದ್ದರೂ ಹೊರಬರಲಾರದೇ ಇರದು. ಜನಶಕ್ತಿಯ ಬಲದೆದುರು ಯಾರ ಆಟವೂ ಸಾಗದು. ನಿಜವಾದ ಆರೋಪಿಗಳು ಬೆಳ್ತಂಗಡಿಯ ಜನರ ಹೋರಾಟದ ಮೂಲಕವೇ ಸಿಗುವಂತಾಗಿ ಹೊಸ ಇತಿಹಾಸ ಸೃಷ್ಟಿಯಾಗಲಿ.

ಆಶಾವಾದದೊಂದಿಗೆ,

ಇಂತಿ ನಿಮ್ಮ


ಪದ್ಮಲತಾ

(■ Avinash Kumar)

11 ಕೋಟಿ ಖರ್ಚಿನ ಸದ್ಭಾವನಾ ಉಪವಾಸ


ನರೇಂದ್ರ ಮೋದಿ ಪಾಲಿಗೆ ಸೆಪ್ಟೆಂಬರ್ 12, 2011 ಭಾರಿ ಮಹತ್ವದ ದಿನ. ಕಾರಣವೇನೆಂದರೆ ಸುಪ್ರೀಂಕೋರ್ಟ್ ಅಂದು ಎಸ್‌ಐಟಿಗೆ ಎಹಸಾನ್ ಜಾಫ್ರಿ ಪ್ರಕರಣದ ತನಿಖಾ ವರದಿಯನ್ನು ಕೆಳಕೋರ್ಟ್‌ಗೆ ಸಲ್ಲಿಸುವಂತೆ ಹೇಳಿದೆ. ವರದಿಯ ಆಧಾರದಲ್ಲಿ ಮೋದಿ ವಿರುದ್ಧ ಪ್ರಕರಣ ದಾಖಲಿಸಲು ಬರುತ್ತದೆಯೆ ಎಂಬುದನ್ನು ನಿರ್ಧರಿಸುವ ಹೊಣೆಗಾರಿಕೆಯನ್ನು ಕೆಳಕೋರ್ಟ್‌ಗೆ ವಹಿಸಲಾಗಿದೆ. ಸುದ್ದಿ ತಿಳಿದಾಕ್ಷಣ ಮೋದಿಯ ಉದ್ವಿಗ್ನತೆ ಕಡಿಮೆಯಾಯಿತು. ಇದು ತನಗೆ ಕ್ಲೀನ್ ಚಿಟ್ ಸಿಕ್ಕಿದಂತೆಯೆ ಎಂದಾತ ಭಾವಿಸಿದ. ವಾರದೊಳಗಾಗಿ ರಾಜ್ಯಾದ್ಯಂತ 34 'ಸದ್ಭಾವನಾ ಉಪವಾಸ'ಗಳನ್ನು ಹಮ್ಮಿಕೊಂಡ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ತಾನೊಬ್ಬ ಪರಿಶುದ್ಧ ವ್ಯಕ್ತಿ; ತನ್ನ ಮೇಲಿರುವ ಕಳಂಕವನ್ನು ಉಪವಾಸ ಮೂಲಕ ತೊಳೆಯುತ್ತಿರುವೆನೆಂದು ಬಿಂಬಿಸಲೆತ್ನಿಸಿದ. ಆತನ ಹುಟ್ಟುಹಬ್ಬ 17.9.2011ರಿಂದ ಅಹಮದಾಬಾದ್‌ನಲ್ಲಿ ಆರಂಭಗೊಂಡ ಈ ಕಾರ್ಯಕ್ರಮ ಸುಮಾರು 6 ತಿಂಗಳ ಬಳಿಕ 12.2.2012ರಂದು ಬನಸ್ಕಾಂತದಲ್ಲಿ ಸಮಾಪನೆಗೊಂಡಿದೆ. ಕೋಮು ಸೌಹಾರ್ದದ ಹೆಸರಿನಲ್ಲಿ ಮಾಡಿದ ಈ ಕಾರ್ಯಕ್ರಮವನ್ನು ವಾಸ್ತವದಲ್ಲಿ ಕೇವಲ ವೈಯಕ್ತಿಕ ಪ್ರಚಾರಕ್ಕೋಸ್ಕರ ನಡೆಸಲಾಗಿದೆ. ತಮಾಷೆಯೆಂದರೆ ಕಾರ್ಯಕ್ರಮದ ವೇಳೆ ಮೋದಿ ಘೋಷಿಸಿದ 'ಹೊಸ' ಯೋಜನೆಗಳೆಲ್ಲ ಒಂದೋ ಕೇಂದ್ರ ಸರ್ಕಾರದ ಜವಾಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ನಿರ್ಮಾಣ ಯೋಜನೆಯ (JNNURM) ವ್ಯಾಪ್ತಿಯವು ಅಥವಾ ಈಗಾಗಲೆ ಚಾಲ್ತಿಯಲ್ಲಿದ್ದಂಥ ಯೋಜನೆಗಳು!

ಇದೊಂದು ಯೋಜನಾಬದ್ಧವಾಗಿ ಮಾಡಿದ ಕಾರ್ಯಕ್ರಮ ಆಗಿರಲಿಲ್ಲ. ವೆಚ್ಚದ ಅಂದಾಜು ಮಾಡಿರಲಿಲ್ಲ. ಕಾರ್ಯಕ್ರಮ ಆರಂಭವಾಗಿ ಒಂದೂವರೆ ತಿಂಗಳ ನಂತರ 3 ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿಸಿಕೊಳ್ಳಲಾಗಿದೆ. ಈ ಸದ್ಭಾವನಾ ಪ್ರಹಸನಕ್ಕೆ ಮೋದಿ ತನ್ನ ಕಿಸೆಯಿಂದ ನಯಾಪೈಸೆ ಖರ್ಚು ಮಾಡಿಲ್ಲ. ಎಲ್ಲ ಖರ್ಚುವೆಚ್ಚಗಳನ್ನು ಸರ್ಕಾರದಿಂದ ಅರ್ಥಾತ್ ಜನರ ತೆರಿಗೆ ದುಡ್ಡಿನಿಂದ ಭರಿಸಲಾಗಿದೆ. ಇಲ್ಲಿ ಸಂವಿಧಾನದ ಕಲಮು 266-267-283(2) ಮತ್ತು ರಾಜ್ಯ ಸರ್ಕಾರದ ವಿತ್ತೀಯ ನಿಯಮಗಳ ಉಲ್ಲಂಘನೆಯಾಗಿರುವುದು ಸ್ಪಷ್ಟ. ಬಜೆಟ್‌ಗಳಲ್ಲಿ ಉಲ್ಲೇಖವಾಗದ ಈ ಖರ್ಚುವೆಚ್ಚಗಳನ್ನು 'ಹೊಸ ಸೇವೆಗಳು' ಎಂದು ಕರೆಯಲಾಗಿದೆ! ಸದನದಲ್ಲಿ ನೀಡಲಾಗಿರುವ ಪೂರಕ



ಹೇಳಿಕೆಯಲ್ಲಿ 15.48 ಕೋಟಿ ಅಂದಾಜನ್ನು ಸಲ್ಲಿಸಲಾಗಿದೆ. ಆದರೆ ಕಾರ್ಯಕ್ರಮದ ಲೆಕ್ಕಪತ್ರಗಳು ಮಾತ್ರ ಇದುವರೆಗೂ ನಾಪತ್ತೆ.

ಪ್ರತಿಯೊಂದು ಸಭೆಗೂ ಜನರನ್ನು ಕರೆತರಲು ಬಸ್ಸುಗಳ ಏರ್ಪಾಟು ಮಾಡಲಾಗಿದೆ. 34 ಜಿಲ್ಲೆಗಳ ಪೈಕಿ 24ರ ಮಾಹಿತಿ ಲಭ್ಯವಾಗಿದ್ದು ಬಾಡಿಗೆ ಬಸ್ಸುಗಳಿಗೆ ಒಟ್ಟು ರೂ 11.14 ಕೋಟಿ ವೆಚ್ಚ ಮಾಡಲಾಗಿದೆಯೆಂದು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ದಾಖಲೆಗಳು ಹೇಳುತ್ತವೆ. ಮುಸ್ಲಿಮರೂ ಭಾಗವಹಿಸುತ್ತಿದ್ದಾರೆಂದು ತೋರಿಸಲು ಸಭಿಕರ ನಡುವಿನಲ್ಲಿ ಮುಸ್ಲಿಮರ ವಿಶಿಷ್ಟ ಟೊಪ್ಪಿಗೆಗಳು ಕಾಣಿಸಿಕೊಳ್ಳುವಂತೆ ಮಾಡಲಾಗಿದೆ. ವಾಸ್ತವವೇನೆಂದರೆ ಈ ಟೊಪ್ಪಿಗೆಗಳನ್ನೆಲ್ಲ ಖರೀದಿಸಿ ಹಂಚಲಾಗಿದೆ. ಇದಕ್ಕಾಗಿ ನವಸಾರಿ ಜಿಲ್ಲೆಯೊಂದರಲ್ಲೆ ರೂ. 28,800 ಖರ್ಚಾಗಿದೆ! ಹಾಲ್, ಮೈದಾನ, ಟೆಂಟ್, ವೇದಿಕೆ, ಕರಪತ್ರ, ಪ್ರಚಾರ, ಲೈಟು, ಮೈಕು, ಸಿಸಿ ಟಿವಿ, ಭದ್ರತಾ ವ್ಯವಸ್ಥೆ, ಬಾಡಿಗೆ ಬಸ್ಸುಗಳು ಇತ್ಯಾದಿ, ಇತ್ಯಾದಿಗಳಿಗೆ ಒಟ್ಟು ಸುಮಾರು ರೂ 12.83 ಕೋಟಿ ಖರ್ಚು ಮಾಡಲಾಗಿದೆ. ಇನ್ನು ಊಟ, ತಿಂಡಿ, ತೀರ್ಥ, ಮೋದಿಯ ಹೆಲಿಕಾಪ್ಟರ್ ಪ್ರಯಾಣ ಇತ್ಯಾದಿಗಳಿಗೆ ಎಷ್ಟು ಖರ್ಚಾಗಿದೆಯೊ ಗೊತ್ತಿಲ್ಲ.



ಸರ್ವಾಧಿಕಾರಿ ಗುಣದ ಮೋದಿ ಹೇಗೆ ಪ್ರಜಾಸತ್ತಾತ್ಮಕ ವಿಧಾನಗಳನ್ನು ಕಡೆಗಣಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕರ ಹಣದ ದುರ್ಬಳಕೆ ಮಾಡುತ್ತಾನೆ ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

(ಇನ್ನಷ್ಟು ವಿವರಗಳಿಗೆ: www.anhadin.net; www.secularstore.net; www.pheku.in ನೋಡಿ) ■

ನಮೋ ಶಿಶುಪ್ರಾಸಗಳು

ನಮೋ ನಮೋ?
ಎಸ್ ಪಪ್ಪ!
ಡ್ರಿಂಕಿಂಗ್ ಬ್ಲಡ್?
ನೋ ಪಪ್ಪ!
ಓಪನ್ ಯುವರ್ ಮೌತ್!
ಹ ಹ ಹ್ಹಾ!

* * * *



ಒಂದು ಎರಡು
ಶಾಖೆಗೆ ಹೊರಡು
ಮೂರು ನಾಲ್ಕು
ಚೆಡ್ಡಿ ಹಾಕು.
ಐದು ಆರು
ದ್ವೇಷವ ಸಾರು
ಏಳು ಎಂಟು
ಕೊಲೆ ನೂರೆಂಟು
ಒಂಬತ್ತು ಹತ್ತು
ಪಟ್ಟಕ್ಕೆ ಹತ್ತು.
ಒಂದರಿಂದ ಹತ್ತು
ಹೀಗಿತ್ತು
ದೇಶಕೆ ಬರಲಿದೆ
ಆಪತ್ತು.

* * * *

ನಮೋ ಮರಿ ನಮೋ ಮರಿ ಪಟ್ಟ ಬೇಕೇ?
ಪಟ್ಟ ಬೇಕು ಚಟ್ಟ ಬೇಕು ಎರಡೂ ಬೇಕು.
ನಮೋ ಮರಿ ನಮೋ ಮರಿ ಪಟ್ಟ ಹತ್ತಿ ಏನು ಮಾಡುವೆ?
ಪಟ್ಟ ಹತ್ತಿ ದೇಶದ ಚಟ್ಟ ಕಟ್ಟುವೆ!

* * * *

ನಮೋ ನಮೋ ಕಿಲ್ಲರ್ ಸ್ಟಾರ್
ಹೌ ಐ ಫಿಯರ್ ವಾಟ್ ಯು ಆರ್
ಡೀಪ್ ಇನ್ ಡಾರ್ಕ್ ವರ್ಲ್ಡ್ ಸೋ ಡೌನ್
ಲೈಕ್ ಎ ಡೆವಿಲ್ ಇನ್ ದ ಥ್ರೋನ್.

* * * *

ನಮೋ ಬ್ಲಾಕ್ ಶೀಪ್ ಹ್ಯಾವ್ ಯು ಎನಿ ವೂಲ್?
ಎಸ್ ಸಾರ್ ಎಸ್ ಸಾರ್ ಥ್ರೀ ಬ್ಯಾಗ್ಸ್ ಫುಲ್.
ಒನ್ ಫಾರ್ ಟಾಟ, ಅಂಬಾನಿ ಮೆನ್
ಒನ್ ಫಾರ್ ಖಾಕಿ ಶಾರ್ಟ್ಸ್ ಇನ್ ನಾಗ್‌ಪುರ್ ಲೇನ್.

* * * *

ಬಣ್ಣದ ತಗಡಿನ ತುತ್ತೂರಿ
ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಊದೋನು ನಮೋ ಮರಿ
ಸ-ರಿ-ಗ-ಮ- ಚೂರಿ ಇರಿಯುವನು
ಪ-ದ-ನಿ-ಸ-ಚೆತ್ತಲೆ ಬೀಗುವನು
ತಾನೇ ಊರಿನ ದೊರೆ ಎಂದ
ಬೇರಾರಿಗು ಧಮ್ಮ್ ಇಲ್ಲೆಂದ
ತುತ್ತೂರಿ ಊದುತ ಜನರ ಬಳಿ
ಜಂಬದ ಕೋಳಿಯ ರೀತಿಯಲಿ
ನಮೋ ನಡೆದನು ಗತ್ತಿನಲಿ

* * * *

ನಮೋ ಬೂಸಿ ಬಸ್ಯಾರೀ
ಬಿಡೋದು ನಂಬರ್ ಒನ್ ಬೊಗಳೇರೀ
ಸ-ರಿ-ಗ-ಮ ಊದಲು ನೋಡುವನು
ಗ-ಗ-ಗ-ಗ ಸದ್ದನು ಮಾಡುವನು
ನಮೋ ಬಣ್ಣ ತೊಳೆದೋಗ್ಲಿ
ಜಂಬದ ಕೋಳಿಗೆ ಗೋಳಾಗ್ಲಿ

* * * *

ನಮೋ ಎಂಬ ಸಣ್ಣ ಪಾಪ
ನಮೋ ಎಂಬ ಪುಟ್ಟ ಪಾಪವಿರುವುದು
ಪಟ್ಟ ಕೊಡದೆ ಹೋದರದಕೆ ಕೋಪ ಬರುವುದು ॥1॥

ಕೋಪ ಬರಲು ಗಟ್ಟಿಯಾಗಿ ಕಿರಿಚಿಕೊಳ್ಳುವುದು
ಕಿರುಚಿಕೊಂಡು ಕಂಡೋರ್ ಮೈಯ್ಯ ಪರಚಿಬಿಡುವುದು ॥2॥

ಮೈಯ್ಯ ಪರಚಿ ನಮೋ ಮರಿ ಅತ್ತು ಕರೆದರೆ,
ಕಣ್ಣಿಂದ ಕೊಳ್ಳೆ ನೀರು ಸುರಿವುದು ॥3॥

ಪಾಪ ಅತ್ತರಮ್ಮಾ ನೀನೂ ಅತ್ತು ಬಿಡೋದೇ
ಅಯ್ಯೋ ಪಾಪ ಎಂದುಕೊಂಡು ಮುತ್ತು ಕೊಡೋದೇ ॥4॥

ಪರಚಿ ಪರಚಿ ಅಳುವ ಆಟ ಅರಿತುಕೊಳ್ಳದ
ನಮೋ ಹುಟುಕ್ಕರದು ಹುಟ್ಟು ಪಾಠವ ॥5॥

■ ಕೆ. ಫಣಿರಾಜ್

ಈ ಪೇಜಾವರ ಸ್ವಾಮೀನ ಮಂಗಳ ಗ್ರಹಕ್ಕೆ ಕಳುಹಿಸಿಬಿಡೋಣವೆ?



☛ ದೇವಸ್ಥಾನಗಳ ಸಂಖ್ಯೆ ಜಾಸ್ತಿಯಾಗ್ತಾನೆ ಇದ್ದರು ಜನರ ಸುಳ್ಳು-ಮೋಸ ಹೆಚ್ಚಾಗುತ್ತಿದೆಯಲ್ಲ...!

- ಕವೀಶ್, ರಾಜಾಜಿನಗರ

☝ ಪುರೋಹಿತನ 'ನೋಡಿ ಕಲಿ ಮಾಡಿ ಕಲಿ' ಸೂತ್ರದ ಪ್ರಭಾವ.

☛ ನಾವು ಇನ್ನೊಬ್ಬರಿಗೆ ಸಹಾಯ ಮಾಡಿದರೆ ಸಾರ್ಥಕ ಅನ್ನುತ್ತಾರಲ್ಲ, ಹಾಗಾದ್ರೆ ಆ ಇನ್ನೊಬ್ಬರ ಸಾರ್ಥಕತೆ ಯಾವುದರಲ್ಲಿದೆ?

- ತೇಜಸ್, ದಾವಣಗೆರೆ

☝ ನಿನ್ನನ್ನು ಸಾಲಗಾರನನ್ನಾಗಿಸುವುದರಲ್ಲಿ.

☛ ಇನ್ಮುಂದೆ ಮೋದಿ ಹೋದಲೆಲ್ಲಾ ಬಾಂಬ್ ಸ್ಫೋಟಿಸುತ್ತಾ?

- ರವಿ, ಹಿರಿಯೂರು

☝ ಬಹುಶಃ ಮೋದಿಯ ತಪ್ಪಿಗೆ ಶಿಕ್ಷೆ ಆಗುವವರೆಗೂ.....

☛ ಬಿಜೆಪಿಯ ಮುಖ್ಯಮಂತ್ರಿ ಚಂದ್ರು ಕಾಂಗ್ರೆಸ್ ಜೊತೆ ಇದ್ದಾರಲ್ಲ?

- ಶೂದ್ರ, ರವಿ, ಧಾರವಾಡ

☝ ಬಿ.ಎಲ್. ಶಂಕರ್ ಈಗ ಬಿಜೆಪಿಲಿ ಇರೋ ತರಾ!

☛ ಅನಿಲ್ ಕುಂಬ್ಳೆ-ಜಾವಗಲ್ ಶ್ರೀನಾಥ್ ಈ ಬಾರಿ ಕ್ರಿಕೆಟ್ ಸಂಸ್ಥೆ ಎಲೆಕ್ಷನ್‌ಗೆ ನಿಲ್ಲಲ್ವಂತೆ!

- ಡಿಸೋಜಾ, ರಾಯಚೂರು

☝ ಅಲ್ಲಿ ಅವರ ಭೋಜನ ಮುಗಿದಿದೆ.

☛ ಜೀವನ ಅಂದ್ರೆ ಏನು ಗುರು?

- ಚಂದ್ರಶೇಖರ್, ತುಮಕೂರು

☝ ಬೇಗ ಖರ್ಚಾಗುವ ಸರಕು ಅನಿಸುತ್ತೆ.

☛ ಚಾಮರಾಜನಗರಕ್ಕೆ ಹೋಗಿ ಬಂದ ಮೇಲೂ ಸಿದ್ದರಾಮಯ್ಯ ಆರಾಮಾಗಿದ್ದಾರಲ್ಲ!

- ಅಮರೇಶ್, ಬಳ್ಳಾರಿ

☝ ಹಾಗಂತ ನಿರಾಶರಾಗಿರುವುದು ಕ್ಯಾಂಗೈಗಳು.

☛ ಬರಾಕ್ ಒಬಾಮ ಜರ್ಮನ್ ಅಧ್ಯಕ್ಷೆ ಏಂಜೇಲಾ ಫೋನ್ ಕದ್ದು ಕೇಳಿದ್ದು ಸರೀನಾ?

- ಕೆ.ಎಲ್. ಸವಿತಾ, ಹುಮ್ನಾಬಾದ್

☝ ತಾನು ಕಳ್ಳ ಪರರ ನಂಬ.

☛ ಈ ಪೇಜಾವರ ಸ್ವಾಮೀನ ಮಂಗಳ ಗ್ರಹಕ್ಕೆ ಕಳುಹಿಸಿಬಿಡೋಣವೆ?

- ಎಸ್. ದೇವರಾಜ್, ಹೆಚ್.ಡಿ. ಕೋಟೆ



☝ ಕ್ಷಮಿಸಿ ಅಲ್ಲಿಗೆ ಕೊಳೆತ ವಸ್ತುಗಳನ್ನು ಸಾಗಿಸುವುದಿಲ್ಲ.

☛ ಜನ ದೇವಸ್ಥಾನಗಳಿಗೆ ಸಿಕ್ಕಾಪಟ್ಟೆ ಹೋಗ್ತಾರಲ್ಲ ಯಾಕೆ?

- ತೂಬುಗೆರೆ ಲಕ್ಷ್ಮೀ, ದೊಡ್ಡಬಳ್ಳಾಪುರ

☝ ಆತ್ಮವಿಮರ್ಶೆ ಮಾಡಿಕೊಳ್ಳದೆ ತಾವು ಒಳ್ಳೆಯೋರು ಅಂತ ತೋರಿಸಿಕೊಳ್ಳುವ ದಾರಿ ಅದು.

☛ ಕಮಲಾ ಹಂಪನಾ ಇತ್ತೀಚೆಗೆ ತರಲೆ ರಾಜಕೀಯ ಬಿಟ್ಟು ಬೇರೇನಾದರು ಬರೆದಿದ್ದಾರಾ?

- ರವೀಶ, ಶಿವಮೊಗ್ಗ

☝ ಅವರ ಹೊಸ ಪುಸ್ತಕ 'ಏನೇ ಬರಲಿ- ಅತ್ಯಾಚಾರ ಇರಲಿ!' ಶೀಘ್ರದಲ್ಲೇ ಧರ್ಮಸ್ಥಳದಲ್ಲಿ ಬಿಡುಗಡೆಯಾಗಲಿದೆ.

☛ ಇಂಡಿಯಾದಲ್ಲಿ ಕೋಟ್ಯಾಧೀಶರು-ಬಡವರ ಸಂಖ್ಯೆ ಎರಡೂ ಜಾಸ್ತಿಯಾಗುತ್ತಿದೆ, ಹೇಗೆ?

- ವಿ.ಎಸ್. ಸುದರ್ಶನ, ಹಿರಿಸಾವೆ

☝ ಕೋಟ್ಯಾಧೀಶರ ಗುಟ್ಟು ಆ ಬಡವರ ಸಂಖ್ಯೆಯಲ್ಲಿದೆ.

☛ ನಟಿ ರಮ್ಯಾ 'ನಂಗೀಗ ನೀರ್‌ದೋಸೆ ಬೇಡ' ಅನ್ನಲು ಕಾರಣ ಏನು?

- ಸಂಜಯ್, ಜಯನಗರ

☝ ಡೆಲ್ಲಿಲಿ ಈರುಳ್ಳಿ ದೋಸೆ ರುಚಿ ಕಂಡ ಮೇಲೆ ಇನ್ನೇನಾಗುತ್ತೆ.

☛ ಈಗಿನ ಯುವ ಪೀಳಿಗೆಯವರು ಫೇಸ್‌ಬುಕ್‌ನಲ್ಲೆ ಕಾಲ ಕಳೀತಿದ್ದಾರಲ್ಲ?

- ಈರೇಶ್, ನೆಲಮಂಗಲ

☝ ಆತ್ಮರತಿಗೆ ಅದಕ್ಕಿಂತಾ ಒಳ್ಳೇ ಜಾಗ ಯಾವುದಿದೆ ಹೇಳಿ?

☛ ಹುಡುಗೀಯರು ಜಾಸ್ತಿ ಮಾತಾಡಿದ್ರೆ ಬಜಾರಿ ಅಂತಾರೆ, ಅದ್ರೆ ಹುಡುಗರಿಗೆ ಹಾಗೆ ಕರಿಯಲ್ಲ ಯಾಕೆ?

- ಆರ್. ಆಶಾ, ಬನಶಂಕರಿ

☝ 'ಡಬರಿ' ಅಂದುಕೊಳ್ಳಿ ಬೇಕಿದ್ರೆ.

☛ ಹುಡುಗೀಯರಿಗೆ ಹುಡುಗರು ಯಾಕೆ ದುಡ್ಡು ಖರ್ಚು ಮಾಡ್ತಾರೆ?

- ಕೆ. ವೈ. ಅನಿಲ್‌ಕುಮಾರ್, ನಂದಗುಡಿ

☝ ಅಷ್ಟಕ್ಕೇ ಇಂಪ್ರೆಸ್ ಆಗಿಬಿಡ್ತಾರೆ ಅನ್ನೋ ಭ್ರಮೆಯಿಂದ

(ಸೂಚನೆ: ಕಣ್ಣಾಮುಚ್ಚಾಲೆಗೆ ಪತ್ರ ಕಳುಹಿಸುವವರು ಅಂಚೆ ಮೂಲಕ, ಮೊಬೈಲ್ ನಂ. 9980331427ಗೆ SMS ಮತ್ತು kannamucchale@gmail.com ಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು. ನಿಮ್ಮ ಹೆಸರು, ಊರು ತಪ್ಪದೆ ಬರೆಯಿರಿ.)

ಕುರುಬರಿಗೆ ದೀಕ್ಷೆ ಕೊಡೋನು ಕೋಡಂಗಿ ಸ್ವಾಮಿ

ಥೂತ್ತೇರಿ

ಎಲ್ಲ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿರುವಾಗ ಮನುಷ್ಯ ಏಕೆ ತನ್ನ ಸ್ವಸ್ಥ ಜೀವನವನ್ನು ಹದಗೆಡಿಸಿಕೊಂಡು ಪಡಿಪಾಟಲಿಗೆ ತುತ್ತಾಗುತ್ತಾನೆ ಎಂಬ ಪ್ರಶ್ನೆ ಸಾವಿರಾರು ವರ್ಷಗಳಿಂದ ಒಗಟಿನಂತೆ ಕಾಡುತ್ತಿದೆಯಂತಲ್ಲಾ. ನರಮನುಷ್ಯರಲ್ಲಿರಬಹುದಾದ ಇಂತಹ ತಹತಹ ನಮ್ಮ ಉಡುಪಿಯ ದೇವಾಂಶ ಸಂಭೂತರು ಮತ್ತು ಪವಿತ್ರ ಬ್ರಾಹ್ಮಣ ಧರ್ಮಗುರುಗಳೂ ಆದ ಪೇಜಾವರ ಸ್ವಾಮಿಗಳನ್ನೂ ಬಿಟ್ಟಿಲ್ಲವಂತಲ್ಲಾ. ಸಧ್ಯಕ್ಕೆ ಕರ್ನಾಟಕ ಕುರುಬರ ಬಹುದಿನದ ಕನಸೊಂದು ಈಡೇರಿದೆ. ಆ ಜನಾಂಗದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಅಂತೂ ನಮ್ಮವನೊಬ್ಬ ಆದನಲ್ಲ ಎಂದು ಕುರುಬ ಜನಾಂಗ ತಾವಾಯಿತು ತಮ್ಮ ಕುರಿಮಂದೆಯಾಯ್ತು ಎಂಬಂತೆ ನಿಶ್ಚಿಂತೆಯಿಂದಿರುವಾಗ, ಹಿಂದೂ ಜಗತ್ತಿನ ಗುರುವರ್ಯರಾದ ಪೇಜಾವರ "ಕುರುಬರು ಬಂದರೆ ವೈಷ್ಣವ ದೀಕ್ಷೆ ಕೊಡುತ್ತೇನೆ" ಎಂದುಬಿಟ್ಟಿದ್ದಾರಲ್ಲ. ಈ ವಯಸ್ಸಿನಲ್ಲಿ ಪೃಷ್ಠಪ್ರಾಂತ್ಯದಲ್ಲಿ ಕೆರೆದುಕೊಂಡು ರಣಗಾಯ ಮಾಡಿಕೊಳ್ಳುವ ಅಗತ್ಯವೇನಿತ್ತು ಎಂಬ ಬಗ್ಗೆ ಅವರನ್ನೇ ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ, ನಿಮ್ಮೊಳಗಿಹನಾರಮ್ಮಾ. ತಮ್ಮ ಗೋನವ್ವೆರಿ ಸುತನಾದ ಸೊಂಡಿಲ ಹೆಮ್ಮೆಯ ಗಣನಾಥನೇ ನಮ್ಮಮ್ಮ....."

"ಹಲೋ ಯಾರು?"

"ನಮಸ್ತೆ ಸ್ವಾಮೀಜಿ. ನಾನು ಯಾಹು."

"ಸ್ವಲ್ಪಹೊತ್ತು ಬಿಟ್ಟು ಫೋನ್ ಮಾಡ್ತಿರಾ?"

"ಯಾಕೆ ಸ್ವಾಮೀಜಿ?"

"ಕುರುಬ ಸ್ವಾಮಿಗಳನ್ನು ಸೋಲಿಸಲಿಕ್ಕೆ ಕನಕನ ಬಗ್ಗೆ ಯೋಚನೆ ಮಾಡ್ತಯಿದ್ದೇನೆ."

"ಆ ಯೋಚನೆ ಹಂಚಿಕೊಬಹುದಲ್ಲ, ನನಗೆ ತಿಳಿದದ್ದು ಹೇಳ್ತೀನಿ."

"ಬೇರೆಯವರ ಆಲೋಚನೆ, ಸಲಹೆ ಆಗತ್ಯವಿಲ್ಲ"

"ಅಹಂಬ್ರಹ್ಮಾಸ್ಮಿಗಳ ಸಮಸ್ಯೆನೆ ಅದಲ್ವಾ ಸ್ವಾಮೀಜಿ?"

"ಅದು ಹಾಗಲ್ಲ. ನಮ್ಮ ಅಭಿಪ್ರಾಯಕ್ಕೆ ಸಮಜಾಯಿಶಿ ಕೊಡುವುದು ನಮ್ಮ ಜವಾಬ್ದಾರಿ."

"ನಿಮ್ಮ ಅಭಿಪ್ರಾಯನೆ ತಪ್ಪಾಗಿದ್ರೆ?"

"ಯಂತ ತಪ್ಪು, ವೈಷ್ಣವನಾದ ಕನಕನನ್ನು ಕುರುಬರು ಆರಾಧಿಸುವುದಾದರೆ, ನೀವೂ ವೈಷ್ಣವರಾಗಿ, ನಾನು ಬೇಕಿದ್ದರೆ ದೀಕ್ಷೆ ಕೊಡ್ತೇನೆ ಅನ್ನುವುದು ತಪ್ಪು ಅಭಿಪ್ರಾಯವ?"

"ನೂರು ಪರಸೆಂಟು ತಪ್ಪು ಸ್ವಾಮೀಜಿ."

"ಅದು ಹೇಗೆ?"

"ಮೊದಲನೆದಾಗಿ, ದೀಕ್ಷೆ ಅನ್ನೋದೆ ಹಾಸ್ಯಾಸ್ಪದ ಸಂಗತಿ. ಅದನ್ನು ಕೊಡೋನಂತೂ ಕೋಡಂಗಿ."

"ನೀವು ನಮ್ಮನ್ನು ಕೋಡಂಗಿ ಅನ್ನುವುದು ಬೇಡ. ಸರಿಯಾಗಿ ಮಾತನಾಡಿ."

"ಮಾತಿಗಂಗಂದೆ ಸ್ವಾಮೀಜಿ. ನೀವಿನ್ನು ದೀಕ್ಷೆನೆ ಕೊಡದೆ ಇರೋದ್ರಿಂದ ಕೋಡಂಗಿ ಆಗಕ್ಕೆ ಸಾಧ್ಯವೇ ಇಲ್ಲ. ಈ ಕುರುಬರು ನಿಮ್ಮ ದೀಕ್ಷೆಗೆ ಬಗ್ಗೊ ಅಂತ ಜನಗಳಲ್ಲ"

"ಬಗ್ಗುವುದು ಬೇಡ. ದೀಕ್ಷೆ ತೆಕ್ಕೊಂಡ ನಂತರ ವೈಷ್ಣವರಾಗಿ ಬದುಕಿದರಾಯ್ತು."

"ಈಗೇನಾಗಿದೆ ಅವರ ಬದುಕು?"

"ಹೇಳುವುದೊಂದು, ಮಾಡುವುದೊಂದು ಆಗಿದೆ."

"ನಿಮ್ಮದು ಅಂತದೇ ಬದುಕಾಗಿಲ್ಲವ?"

"ಇಲ್ಲ ನಾವು ಸರಿಯಿದ್ದೇವೆ. ನಾವು ಕೃಷ್ಣನ ಆರಾಧಕರು, ವೈಷ್ಣವರು."


"ಕೃಷ್ಣ ಗೊಲ್ಲ, ನೀವು ಮಾಧ್ವರು. ಕನಕ ಕುರುಬರೋನು. ಈ ನಾಡಿನ ಅವೆರಡೂ ಜಾತಿ ಉಡುಪಿಗೆ ಬಂದು ಮತೀಯವಾದ ಹಕ್ಕು ಸ್ಥಾಪಿಸಿದರೆ ಎಲ್ಲಿಗೋಯ್ತಿರಿ ನೀವು?"

"ಅದು ಸಾಧ್ಯವಿಲ್ಲ. ಕೃಷ್ಣ ನಮ್ಮ ದೇವರು. ದೇವರಾದವನು ಎಲ್ಲರಿಗೂ ದೇವರು. ಪರಂಪರೆಯಿಂದ ಅವನನ್ನು ಪೂಜಿಸಿಕೊಂಡು ಬಂದ ನಾವು ಹಕ್ಕು ಸ್ಥಾಪಿಸುತ್ತೇವೆ."

"ಹಾಗಂದುಕೊಂಡು ಸುಮ್ಮನಿರಕ್ಕೇನಾಗಿದೆ ನಿಮಗೆ?"

"ನಾವು ಸುಮ್ಮನೆ ಇದ್ದೇವಲ್ಲಾ"

"ಇಲ್ಲ ನಿಮಗೆ ಕನಕ ಒಂದು ಮಗ್ಗುಲು ಮುಳ್ಳಾಗಿದಾನೆ. ಉಡುಪಿಯಿಂದ ಆತನ ಅಸ್ತಿತ್ವವನ್ನೇ ತೆಗೆಯಕ್ಕೆ ಮಾಡಿದ್ದೀರಿ. ಮೊದಲು ಗೋಪುರದ ಸಮಸ್ಯೆ ತಗದ್ರಿ. ನಂತರ ಕನಕನಕಿಂಡಿ ವಿಷಯ. ಮತ್ತೀಗ ವೈಷ್ಣವ ದೀಕ್ಷೆ ಅಂತಿರಿ. ಯಾಕೆ ಅಂದ್ರೆ ಇವತ್ತು ನಿಮಗೆ ಕನಕ ಬೇಡ ಅಲ್ಲವಾ ಸ್ವಾಮಿ?"



"ನೀವು ಹಾಗೆ ಹೇಳುವುದು ಬೇಡ. ಕನಕ ನಮಗೆ ಯಾವತ್ತಿಗೂ ಬೇಕಾದವ."

"ಇಲ್ಲ ಸ್ವಾಮಿ, ಆತನ ಕತೆನೆ ನಿಮ್ಮ ಜನಾಂಗವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತೆ. ಆದಕ್ಕೆ ಅವನ ಕತೆನ ಮುಗಿಸೊದಕ್ಕೆ ಹೊರಟಿದ್ದಿರಿ."

"ನೀವು ಹಾಗೆ ಹೇಳುವುದು ಬೇಡ. ಕೃಷ್ಣ ಮೆಚ್ಚಿದ ಕನಕನನ್ನು ಮುಗಿಸುವುದು ನಮ್ಮ ಉದ್ದೇಶವಲ್ಲ. ಹರಿಯೇ ಸರ್ವೋತ್ತಮ ಎಂದ ಕನಕರು ಪ್ರತಿನಿಧಿಸುವ ಜನಾಂಗದವರೂ ಕೂಡ ಹರಿಮಯವಾಗಬೇಕು ಎಂಬುದು ನಮ್ಮ ಕಳಕಳಿ. ಅದಕ್ಕಾಗಿ ನಾವು ದೀಕ್ಷೆಯ ಮುಖಾಂತರ ಆ ಜನಾಂಗದವರನ್ನು ವೈಷ್ಣವರಾಗಿ ಮಾಡಲು ಹೊರಟಿದ್ದು."

"ಜಿ.ಕೆ. ಗೋವಿಂದರಾವ್ ಹೇಳಿದಂಗೆ ಮದುವೆ ಆಗದ ಬ್ರಾಹ್ಮಣ ಹೆಣ್ಣುಮಕ್ಕಳನ್ನು ಕುರುಬರಿಗೆ ಕೊಟ್ಟು ಮದುವೆ ಮಾಡಿದ್ರೆ ಆ ಹೆಣ್ಣು ದೀಕ್ಷೆಯಿಂದ ಕ್ರಮೇಣ ಕುರುಬರು ವೈಷ್ಣವರಾಗಲ್ಲವೆ?"

"ಅದು ಸಾಧ್ಯವಿಲ್ಲ, ಈಗಾಗಲೇ ನಮ್ಮ ಜನಾಂಗದಲ್ಲಿ ಹೆಣ್ಣುಮಕ್ಕಳು ಕಡಮೆಯಾಗಿದ್ದುಂಟು."

"ಹಾಗಿದ್ರೆ ನಿಮ್ಮವರೆಲ್ಲಾ ಹೆಣ್ಣು ಭ್ರೂಣಹತ್ಯೆ ಮಾಡಿಸಿರಬೇಕು."

"ಇಂತ ಪ್ರಶ್ನೆಗೆ ನಾನು ಉತ್ತರ ಕೊಡುವುದಿಲ್ಲ"

"ನೋಡಿ ಸ್ವಾಮಿ, ನಿಮಗಿನ್ನೂ ಕುರುಬರ ವಿಷಯ ಗೊತ್ತಿಲ್ಲ, ನಿಮ್ಮ ಶಿಷ್ಯ ಈಶ್ವರಪ್ಪನ್ನು ನೋಡಿ ಕುರುಬರೆಲ್ಲಾ ಹೀಗೇ ಇರತರೆ ಅನ್ನಕೊಂಡಿದ್ದಿರಿ. ಉತ್ತರ ಕರ್ನಾಟಕದ ಕುರುಬರೆಲ್ಲಾ ಮೈಲಾರಲಿಂಗನ ಒಕ್ಕಲು. ದಕ್ಷಿಣದವರೆಲ್ಲಾ ಬೀರೇದೇವರ ಒಕ್ಕಲು. ಇನ್ನು ಕೆಲವು ಕಡೆ ಅವರ ಪೂಜಿಸಿಕೊಂಡಿರೊ ಮಾಯಮ್ಮ, ಮಾರಮ್ಮ, ಜಲಗೀರಮ್ಮ, ಅಟ್ಟಿಲಕಮ್ಮ, ಆದುವಿನಮ್ಮ, ಮುತ್ತಿನಮ್ಮನ್ನು, ಇವುರು ಬಟ್ರೆ ಬೇರೆ ದೇವರಿಲ್ಲ ಅನ್ನೊ ಕುರುಬರೂ ಅವುರೆ. ಇನ್ನು ದೊಡ್ಡಯ್ಯ ಚಿಕ್ಕಯ್ಯ ಅನ್ನೊ ಕುರುಬರೂ ಅವುರೆ. ಅಂಗೇ ನೋಡಿದ್ರೆ ಕುರುಬರ ಕುಲಕ್ಕೆಲ್ಲಾ ಒಬ್ಬೊಬ್ಬ ದೇವರು ದೇವತೆ ಅವುರೆ. ಕೆಲವರು ಆದಿಚುಂಚನಗಿರಿ ಮಠಕ್ಕೂ ನಡಕೊಳ್ತರೆ. ಧರ್ಮಸ್ಥಳದ ಮಂಜುನಾಥನಿಗೂ ನಡಕೊಳ್ತರೆ. ಈ ಎಲ್ಲಾ ಕಾರಣಕ್ಕೆ ಹನ್ನೆರಡನೇ ಶತಮಾನದ ಬಸವಣ್ಣನಿಗೇ ಸವಾಲಾದ್ರು."

"ಅದು ಹೇಗೆ ಸವಾಲಾದರು?"

"ಹೇಗಂದ್ರೆ ಬಸವಣ್ಣ ಸ್ಥಾಪಿಸಿದ ಲಿಂಗಾಯತ ಧರ್ಮಕ್ಕೆ ಹಿಂದೂ ಧರ್ಮದ ಎಲ್ಲಾ ಜಾತಿಗಳೂ ಹೋಗಿ ಸೇರಿಕೊಂಡ್ರು. ಈ ಕುರುಬರು ಮಾತ್ರ ಹೋಗಲಿಲ್ಲ. ಕೆಲವರಂತೂ ಬಸವಣ್ಣ ಕೊಟ್ಟ ಲಿಂಗನ "ಆಯ್ತು ಕೊಡಪ್ಪ ಕಟ್ಗೊತ್ತಿವಿ" ಅಂತ ಈಸಗೊಂಡು ಕಟ್ಟಕೊಂಡು ಕುರುಬರಂಗೇ ಉಳಕೊಂಡ್ರು. ಈಗ ನೀವು ಕೊಟ್ಟ ದೀಕ್ಷೆನೂ ತಗತರೆ. ಆದ್ರೆ ಅಂಗೇ ಉಳಕೊತ್ತರೆ. ಈಗ ನೀವು ದೀಕ್ಷೆ ಕೊಡದಾದ್ರೆ ಯಾವ ಕುರುಬರಿಗೆ ಕೊಡ್ತಿರಿ? ಹಾಲುಮತ ಕುರುಬರಿಗೋ? ಹಳೆ ಕುರುಬರಿಗೊ? ಹೊಸ ಕುರುಬರಿಗೊ? ಅಥವಾ ಮಡ್ಡಕುರುಬರಿಗೋ? ಇಲ್ಲ ಉಣ್ಣೆ ಕಂಕಣದವರಿಗೊ? ಅಥವಾ ಹತ್ತಿ ಕಂಕಣದವರಿಗೊ? ನ್ವಾಲೆ ಕುರುಬ್ರು, ಜೇನು ಕುರುಬ್ರು, ಹಂಡೆ ಕುರುಬ್ರು, ಮಗ್ಗದ ಕುರುಬ್ರು, ಕಂಬಳಿ ಕುರುಬ್ರು- ಹಿಂಗೆ ಯಾರಿಗೆ ಅಂತ ಕೊಡ್ತಿರೀ?

ಹಲೋ.... ಹಲೋ... ಹಲೋ??"

ಥೂತ್ತೇರಿ!!! ■

'ಬ್ರಾಹ್ಮಣ್ಯ ಅಂದು-ಇಂದು' ಸಂಚಿಕೆ ಸಂಗ್ರಹಯೋಗ್ಯವಾಗಿದೆ

ಅಕ್ಟೋಬರ್ 16ರ 'ಗೌರಿ ಲಂಕೇಶ್' ಪತ್ರಿಕೆಯಲ್ಲಿ ಪ್ರಕಟಗೊಂಡ 'ಬ್ರಾಹ್ಮಣ್ಯ ಅಂದು-ಇಂದು' ಲೇಖನಗಳು ಪ್ರತಿಯೊಬ್ಬ ಭಾರತೀಯನೂ ತನ್ನ ಲೈಬ್ರರಿಯಲ್ಲಿ ಭದ್ರವಾಗಿಡಬಹುದಾದ ಚಾರಿತ್ರಿಕ ವಿಷಯಗಳನ್ನು ಅನಾವರಣಗೊಳಿಸಿದೆ. ಅದಕ್ಕಾಗಿ ಪ್ರಪ್ರಥಮವಾಗಿ ಪತ್ರಿಕೆಗೆ ಅಭಿನಂದನೆಗಳು.

ಶತಶತಮಾನಗಳಿಂದ ಕಾಲಘಟ್ಟಕ್ಕೆ ತಕ್ಕಂತೆ ಒಳಸಂಚು ರೂಪಿಸಿ ಬೆವರು ಸುರಿಸದೆ ಸುಖಜೀವನ ನಡೆಸುತ್ತಿರುವ ಬ್ರಾಹ್ಮಣ್ಯ ಭಾರತದ ಪಾಲಿಕ್ಕೊಂದು ಶಾಪವಾಗಿದೆ. ಇನ್ನೊಂದೆಡೆ ಶ್ರಮ ಜೀವನದಲ್ಲೇ ಹಸಿವಿನಿಂದ, ನಿರ್ಲಕ್ಷತೆಯಿಂದ, ಅಪಮಾನದಿಂದ ಬೆಂದಿರುವ ಬಹುಸಂಖ್ಯಾತ ಶೋಷಿತರು ಹಿಂದೂ ಧರ್ಮದಲ್ಲಿದ್ದೇ ಧರ್ಮಹೀನರಾಗಿ ಅನಿವಾರ್ಯವಾಗಿ ಅರ್ಧದಡಿ ಸಿಲುಕಿ ನಲುಗುತ್ತಿದ್ದಾರೆ. ದುರ್ಬಲ ಮನಸ್ಸಿನ ಸುಪ್ತ ಪ್ರಜ್ಞೆಯೊಂದಿಗೆ ಆಟವಾಡಿ ದೇವರು, ಶಾಸ್ತ್ರ, ಪೌರೋಹಿತ್ಯ, ಭವಿಷ್ಯ, ಪುನರ್‌ಜನ್ಮ, ಪಾಪ-ಪುಣ್ಯ, ಕರ್ಮಫಲ ಮುಂತಾದ ವಿಚಾರಗಳಿಂದ ಬ್ರಾಹ್ಮಣ್ಯ ನಡೆಸುತ್ತಿರುವ ಶೋಷಣೆಗಳು ಬಡವನೊಬ್ಬ ಕಷ್ಟಪಟ್ಟು ಕೂಡಿಟ್ಟ ಹಣ ಮತ್ತು ನೆಮ್ಮದಿ ನಿರಾಯಾಸವಾಗಿ ಕರಗುವಂತೆ ಮಾಡಿ ಆತ ಮತ್ತಷ್ಟು ಕಂಗಾಲಾಗುವಂತೆ ಮಾಡಿದೆ. ಆದರೂ ಎಂದೂ ತಾಳ್ಮೆ ಕಳೆದುಕೊಳ್ಳದ ಬಡ ಭಾರತೀಯ ಎಲ್ಲವನ್ನೂ ಸಹಿಸಿಕೊಂಡು ಬಂದಿದ್ದಾನೆ.



ಆದರೆ ಕಾಲ ಬದಲಾಗಲೇ ಬೇಕು. ದಲಿತರು ಮತ್ತು ಸ್ತ್ರೀಯರು ಪಟ್ಟಂತಹ ಮಾನಸಿಕ ಹಿಂಸೆ ಕೊನೆಗಾಣಬೇಕು.

ಮತ್ತೊಮ್ಮೆ ತಮಗೆ ಅಭಿನಂದನೆಗಳು.

- ಡಾ. ಪ್ರೇಮದಾಸ್, ಕಾರ್ಕಳ

ಸಿಓಡಿಯಿಂದ ಏನೂ ಸಾಧ್ಯವಿಲ್ಲ

ಕಳ್ಳತನದಲ್ಲಿ ಗಿನ್ನೆಸ್ ದಾಖಲೆ ಸ್ಥಾಪಿಸಿದ ಬೇಲೆಕೇರಿ ಅದಿರು ಕಳ್ಳತನ ಪ್ರಕರಣದಲ್ಲಿ ಇದೇ ಸಿಐಡಿ ತಮ್ಮ ಕೈಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಖಚಿತ ದಾಖಲೆಗಳು ಇದ್ದರೂ ಎಲ್ಲಾ ಖದೀಮರನ್ನು ಖುಲಾಸೆಗೊಳಿಸಿತ್ತು, ಸಿಬಿಐ ಅಲ್ಲದಿದ್ದರೆ ಆ ಎಲ್ಲಾ ಖದೀಮರು ಇಂದು ಸುಖವಾಗಿರುತ್ತಿದ್ದರು. ಈಗ ಬೆಳ್ತಂಗಡಿಯ ಸೌಜನ್ಯ ಅತ್ಯಾಚಾರ - ಕೊಲೆ ಕೇಸಿನಲ್ಲಿ ಸ್ಥಳೀಯ ಪೊಲೀಸರು ಮತ್ತೂ ಕೊಲೆಗಾರ ಜೈನೇಂದ್ರರು ಕೂಡಿ ಎಲ್ಲಾ ಪುರಾವೆಗಳನ್ನೂ ವ್ಯವಸ್ಥಿತವಾಗಿ ನಾಶ ಮಾಡಿದ್ದಾರೆ.

ಇವರಿಗೆ ಮಾರ್ಗದರ್ಶನ ಮಾಡಿದವನು ಮಂಗಳೂರಿನ ಒಬ್ಬ ಕುಖ್ಯಾತ ಕ್ರಿಮಿನಲ್ ಲಾಯರ್. ಇವನೇ ಕಳೆದ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು ಬೆಳ್ತಂಗಡಿಯಲ್ಲಿ ಗಾಂಧೀಜಿಗೆ ಮತ್ತು ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಸಂಘ ಪರಿವಾರದವರು.

ಟನ್ನುಗಟ್ಟಲೆ ಪುರಾವೆಯಿದ್ದೂ ಬೇಲೆಕೇರಿಯ ಕೇಸನ್ನು ಹಳ್ಳ ಹಿಡಿಸಿದ ಕರ್ನಾಟಕದ ಸಿಐಡಿಗೆ ಈಗ ಯಾವುದೇ ಪುರಾವೆಗಳಿಲ್ಲದ ಸೌಜನ್ಯ ಕೊಲೆ ಪ್ರಕರಣವನ್ನೂ ಹಳ್ಳ ಹಿಡಿಸುವುದು ಕಷ್ಟವೇನೂ ಆಗಲಾರದು. ಸಿಬಿಐ ತನಿಖೆಯಿಂದ ಮಾತ್ರ ನಿಜ ಗೊತ್ತಾಗಲೂ ಸಾಧ್ಯ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪತ್ರಿಕೆ ಸರಿದಾರಿಯಲ್ಲಿ ಸಾಗುತ್ತಿದೆ

ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ಜನರು ನಡೆಸುತ್ತಿರುವ ಹೋರಾಟದೊಂದಿಗೆ ಪತ್ರಿಕೆ ಕೂಡ ದನಿಗೂಡಿಸಿರುವುದು ಸ್ವಾಗತಾರ್ಹ ಬೆಳವಣಿಗೆ.

ಯೋಗೇಶ್ ಮಾಸ್ಟರ್ ಅವರ ಪರಿಚಯವನ್ನು ನಾಡಿನ ಜನತೆಗೆ ಮಾಡು ವುದರ ಮೂಲಕ ಪತ್ರಿಕೆ ಉತ್ತಮವಾದ ಹೆಜ್ಜೆ ಇಟ್ಟಿದೆ. ಈ ರೀತಿಯ ಹೊಸ ತಲೆಮಾರಿನ ಹೊಸ ಲೇಖಕರನ್ನು ಪತ್ರಿಕೆ ಪರಿಚಯಿಸುವಂತಾಗಲಿ.

ಲಂಕೇಶ ಬಳಗವು ವಿಚಾರಗೋಷ್ಠಿಯ ಮೂಲಕ ರಾಜ್ಯದಲ್ಲಿ ಒಂದು ಚಳವಳಿಯನ್ನು ಪ್ರಾರಂಭಿಸಿದೆ. 'ಬ್ರಾಹ್ಮಣ್ಯ' ಒಂದು ಜೀವವಿರೋಧಿ ಸಿದ್ಧಾಂತವಾಗಿದೆ. ಜ್ಯೋತಿಷ್ಯದ ಪ್ರಚಾರದ ಮೂಲಕ, ವಾಸ್ತು ಸಿದ್ಧಾಂತದ ಮೂಲಕ, ಟಿ.ವಿ ವಾಹಿನಿಯ ಮುಖಾಂತರ ಜನರನ್ನು ತಪ್ಪು ದಾರಿಗೆಳೆಯುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಮೌಢ್ಯವಿರೋಧಿ ಕಾನೂನು ರಚಿತವಾಗಬೇಕು.

ಲಂಕೇಶ್ ಪತ್ರಿಕೆ ಉತ್ತಮವಾದ ವೈಚಾರಿಕ ಲೇಖನಗಳ ಮೂಲಕ ರಾಜ್ಯದ ಯುವ ಸಮುದಾಯದಲ್ಲಿ ವೈಚಾರಿಕ ಮನೋಭಾವ ಬೆಳೆಸಲಿ ಎಂದು ಆಶಿಸುತ್ತೇನೆ.

ನಿಮ್ಮ ಬಳಗದವನೇ ಆದ,

- ಎಲ್.ಪಿ.ಸುಭಾಸ್‌ಚಂದ್ರ ಭೋಸ್, ಎಐಪಿಎಫ್ ಸದಸ್ಯ, ಕಾನಾಮಡುಗು, ಬಳ್ಳಾರಿ ಜಿಲ್ಲೆ

ಸೌಜನ್ಯ ಕೊಲೆ: ಸತ್ಯ ಹೊರಬರುತ್ತದೆ ಎಂಬ ಭರವಸೆ ಇಲ್ಲ


ಪತ್ರಿಕೆಯಲ್ಲಿ ಬರೆದಂತೆ ಧರ್ಮಸ್ಥಳದ ನತದೃಷ್ಟೆ ಸೌಜನ್ಯಳ ಕೊಲೆಯ ತನಿಖೆಯನ್ನು ಸಿಓಡಿಗೆ ವಹಿಸಿದ್ದರಿಂದ ಸತ್ಯ ಹೊರಗೆ ಬರುತ್ತದೆ ಎಂದು ಆಸೆ ಇಟ್ಟುಕೊಳ್ಳುವುದು ಮೂರ್ಖತನವಾಗುತ್ತದೆ. ಕೊಲೆಯ ನಂತರ ಅಲ್ಲಿಯ ಪೊಲೀಸರು ಉದ್ದೇಶಪೂರ್ವಕವಾಗಿ ಮಹಜರನ್ನೂ ತಪ್ಪುತಪ್ಪಾಗಿ ಸಿದ್ಧಪಡಿಸಿ ಸಿಓಡಿಯವರ ಕೈ ಕಟ್ಟಿ ಹಾಕಿದ್ದಾರೆ. ಅಂತಹ ತಪ್ಪು ಮಹಜರನ್ನು ಹಿಡಿದುಕೊಂಡು ಒಂದು ವರ್ಷದ ನಂತರ ಎಲ್ಲ ಸಾಕ್ಷ್ಯಗಳು ನಾಶವಾಗಿರುವಾಗ ಸಿಓಡಿಯವರು ಸತ್ಯ ಹೊರತರುವುದು ಸಾಧ್ಯವೇ ಇಲ್ಲ.

ಮೇಲಾಗಿ ಸುಪ್ರೀಂಕೋರ್ಟ್ ಹೇಳಿರುವಂತೆ ಸಿಬಿಐ ಕೇಂದ್ರ ಸರಕಾರದ ಪಂಜರದ ಗಿಳಿಯಾದರೆ ಸಿಓಡಿಯು ರಾಜ್ಯ ಸರಕಾರದ ಪಂಜರದ ಗಿಳಿ. ಹಾಗಿರುವಾಗ ಪಟ್ಟಭದ್ರರ ಹಿತಾಸಕ್ತಿಯ ಕಾವಲುಗಾರರಾದ ರಾಜಕಾರಣಿಗಳು ಸತ್ಯ ಹೊರತೆಗೆಯಲು ಸಿಓಡಿಗಳಿಗೆ ಬಿಟ್ಟರೆ ತಾನೇ.

ಕರ್ನಾಟಕದ ಸಿಓಡಿಯ ದಕ್ಷತೆಯನ್ನು ನಾನು ಸ್ವತಃ ನೋಡಿದ್ದೇನೆ. ನಾಲ್ಕೂವರೆ ವರ್ಷಗಳ ಹಿಂದೆ ನನ್ನ ಮಿತ್ರರಾಗಿದ್ದ ಬೆಳಗಾವಿಯ 60 ವರ್ಷ ಮೀರಿದ ಹಿರಿಯರನ್ನು ಅವರ ಪಾರ್ಟನರ್‌ಗಳೇ ಕೊಲೆಮಾಡಿಸಿ ಗೋಕಾಕಿನಲ್ಲಿ ತೂಗು ಹಾಕಿದ್ದರು. ಶವದ ಕುತ್ತಿಗೆಗೆ ಹಗ್ಗ ಕಟ್ಟದೇ ಹೊಟ್ಟೆಗೆ ಹಗ್ಗ ಕಟ್ಟಿ ಶವ ನೇತಾಡಿಸಿದ್ದರೂ, ಶವದ ಬಾಯಿಗೆ ಆಳವಾಗಿ ಬಟ್ಟೆ ತುರುಕಿದ್ದರೂ ಅದು ಸಿಓಡಿಗಳಿಗೆ ಆತ್ಮಹತ್ಯೆಯಾಗಿ ಕಾಣಿಸಿತು. ಹೊಟ್ಟೆಗೆ ಹಗ್ಗ ಕಟ್ಟಿಕೊಂಡು ಬಾಯಿಗೆ ಬಟ್ಟೆ ತುರುಕಿಕೊಂಡು ಜಗತ್ತಿನಲ್ಲಿ ಯಾರಾದರೂ ಆತ್ಮಹತ್ಯೆ ಮಾಡಿಕೊಂಡವರಿದ್ದಾರೆಯೇ? ಮೇಲಾಗಿ ಮೃತನು ಜೀವನದಲ್ಲೆಂದೂ ಕಂಪ್ಯೂಟರ್ ಮುಟ್ಟಿರದಿದ್ದರೂ, ಅವನಿಗೆ ಕನ್ನಡ ಭಾಷೆ ಗೊತ್ತೇ ಇರದಿದ್ದರೂ, ಶವದ ಕಿಸೆಯಲ್ಲಿದ್ದ ಕಂಪ್ಯೂಟರಿನಲ್ಲಿ ಟೈಪ್ ಆದ ಶುದ್ಧ ಕನ್ನಡ ಭಾಷೆಯ ಡೆತ್-ನೋಟು ಅವನೇ ಕಂಪ್ಯೂಟರಿನಲ್ಲಿ ಬರೆದಿದ್ದೆಂದು ಸಿಓಡಿ ಪರಿಗಣಿಸಿತು. ಮೃತನು ಕೊಲೆಯಾಗುವುದಕ್ಕೆ ಮುಂಚಿ ಕೊನೆಯ ಕ್ಷಣದಲ್ಲಿ ಅದು ಹೇಗೆ ಕಂಪ್ಯೂಟರ್ ಹಾಗೂ ಕನ್ನಡ ಕಲಿಯುವ ಪವಾಡ ತೋರಿಸಿದ್ದು ಎಂಬುದನ್ನು ಸಿಓಡಿಯವರು ಹೇಳಲೇ ಇಲ್ಲ. ಅವನ ಮೊಬೈಲಿನಲ್ಲಿಯ ಕೊನೆಯ ದಿನದ ಕಾಲ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಸಂದರ್ಶನ



"ಬ್ಯಾಗಲ್ಲಿ ಕಥೆ ಇಟ್ಟುಕೊಂಡು ಕಾಯ್ತಿದೀನಿ"

ಸಂಭಾಷಣೆಕಾರ: ರಘು ನಿಡುವಳ್ಳಿ

ಮೈಲಾರಿ' ಮತ್ತು 'ನಂದಾದೀಪ' ಚಿತ್ರಗಳಿಗೆ ...ಭಾಷಣೆ ಬರೆದು, 'ಜಂಗಲ್ ಜಾಕಿ' ಹಾಗೂ 'ಟೀನೇಜ್' ...ಗಳಿಗೆ ಹಾಡುಗಳನ್ನು ಬರೆದು, ಅನೇಕ ಸಿನಿಮಾಗಳಿಗೆ ...ನಿರ್ದೇಶಕರಾಗಿಯೂ ಕೆಲಸ ಮಾಡಿ, ಇದೀಗ ಸ್ವತಂತ್ರ ...ೇಶಕರಾಗುವ ಆಕಾಂಕ್ಷೆ ಹೊಂದಿರುವ, ಮೂಲತಃ ...ರ ಕವಿ, ಕಥೆಗಾರರೂ ಆಗಿರುವ ಗ್ರಾಮೀಣ ...ಶದಿಂದ ಬಂದ ಯುವಪ್ರತಿಭೆ ರಘು ನಿಡುವಳ್ಳಿ ... ಮಾತಾಡಿದ್ದಾರೆ.

ಪ್ರಶ್ನೆ: ನಿಮ್ಮ ಹೆಸರೇ ರಘು ನಿಡುವಳ್ಳಿನಾ?

- ನನ್ನ ನಿಜವಾದ ಹೆಸರು ಎನ್.ಬಿ.ರಾಘವೇಂದ್ರ ಅಂತ. ನಿಡುವಳ್ಳಿ ನಾನೇ ಇಟ್ಟುಕೊಂಡ ಹೆಸರು.

ಪ್ರಶ್ನೆ: ನಿಮ್ಮ ಊರು, ನಿಮ್ಮ ಕುಟುಂಬ, ನಿಮ್ಮ ಹಿನ್ನೆಲೆ ಬಗ್ಗೆ ಹೇಳ್ತೀರಾ?

- ಚಿಕ್ಕಮಗಳೂರು ಜಿಲ್ಲೆಯ ಕಡೂರು ಹತ್ತಿರದ ನಿಡುವಳ್ಳಿ ನನ್ನೂರು. ತಂದೆ ಬಸವರಾಜು ಸಾರಾಯಿ ವ್ಯಾಪಾರಿ. ತಾಯಿ ಜಯಮ್ಮ ಗೃಹಿಣಿ. ಸ್ಕೂಲು ಉಜಿರೆಯ ಎಸ್‌ಡಿಎಂ. ಬಿಎಸ್ಸಿ ಮುಗಿಸಿದ್ದು ಬೆಂಗಳೂರಿನ ವಿಜಯಾ ಸಂಜೆ ಕಾಲೇಜಿನಲ್ಲಿ.

ಪ್ರಶ್ನೆ: ಕಲೆಯ ಒಲವು ಹೇಗೆ ಶುರುವಾಯ್ತು?

- ನಮ್ಮಪ್ಪ ಸಾಮಾಜಿಕ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದರು. ನಾಟಕ ಮುಗಿದ ಮಾರನೇ ಬೆಳಗ್ಗೆ ಅವರು ಮುಖಕ್ಕೆ ಹಚ್ಚಿದ್ದ ಬಣ್ಣವನ್ನು ತೀರಾ ಕಷ್ಟ ಪಟ್ಟು ತೊಳೆಯುವಾಗ ಉತ್ಸಾಹದಿಂದ ನೋಡುತ್ತಿದ್ದೆ. ನಾಟಕವಾಡುವಾಗ ಯಾಕೆ ಬಣ್ಣ ಹಚ್ಚಿಕೊಳ್ಳುತ್ತಾರೆ ಅಂತ ನನಗೆ ನಾನೇ ಯೋಚಿಸುತ್ತಿದ್ದೆ. ಅದೇ ವೇಳೆಗೆ ನನ್ನ ಸೋದರ ಸಂಬಂಧಿಯೊಬ್ಬರು ಸಿನಿಮಾರಂಗದಲ್ಲಿ ಮೇಕಪ್ ಮ್ಯಾನ್ ಆಗಿದ್ರು. ಅವರ ಹೆಸರು ಕಾಂತರಾಜ್ ಅಂತ. ನನಗೆ ಬಣ್ಣದ ಬಗ್ಗೆ ಇದ್ದ ಆಸಕ್ತಿ ಗಮನಿಸಿದ ಕಾಂತಣ್ಣ ಒಂದು ದಿನ 'ಸಿನಿಮಾ ಇಂಡಸ್ಟ್ರಿಗೆ ಬರ್ತಿಯೇನೋ? ಅಂತ ಕೇಳಿದ್ರು. ಆಗ, ನಾನು ನಮ್ಮಪ್ಪನ ಮುಖ ನೋಡಿದೆ. ನಮ್ಮಪ್ಪ ನಮ್ಮಮ್ಮನ ಮುಖ ನೋಡಿದ್ರು. ಅಮ್ಮ ಹೋಗುವಂತೆ ಸ್ಮೈಲ್ ಕೊಟ್ಟರು. ಸಿನಿಮಾರಂಗಕ್ಕೆ ಬಂದೆ. ನಮ್ಮಣ್ಣನಿಗೆ ಅಸಿಸ್ಟೆಂಟ್ ಆಗಿ ಕೆಲಸ ಶುರು ಮಾಡಿದೆ.

ಪ್ರಶ್ನೆ: ನೀವು ಮೊದಲಿಗೆ ಯಾವ ಸಿನಿಮಾಗಳಲ್ಲಿ ಮೇಕಪ್ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ್ರಿ?

- ನಾನು ಬೆಂಗಳೂರಿಗೆ ಬಂದಾಗ ನಮ್ಮಣ್ಣ ಎಸ್.ನಾರಾಯಣ್ ಅವರ ಧಾರಾವಾಹಿಗಳಲ್ಲಿ ಮೇಕಪ್ ಮ್ಯಾನ್ ಆಗಿ ಕೆಲಸ ಮಾಡ್ತಿದ್ರು. ಜೊತೆಗೆ ಶ್ರುತಿಯವರ ಪರ್ಸನಲ್ ಮೇಕಪ್ ಮ್ಯಾನ್ ಕೂಡ ಅವರೇ ಆಗಿದ್ರು. ನನ್ನ ಬಣ್ಣದ ಬದುಕು ಶುರುವಾಗಿದ್ದು ಎಸ್. ನಾರಾಯಣ್ ಅವರ ಧಾರಾವಾಹಿಗಳ ಮೂಲಕ. ಅವುಗಳಲ್ಲಿ 'ಡುಂ ಡುಂ ಡುಂ', 'ವೈಶಾಲಿ', 'ಸುಮತಿ', 'ಸೂರ್ಯವಂಶ' ಮುಖ್ಯವಾದವು.

ಪ್ರಶ್ನೆ: ನೀವು ಸಹಾಯಕ ನಿರ್ದೇಶಕರಾಗಿ ಕೂಡ ಕೆಲವು ಸಿನಿಮಾಗಳಿಗೆ ಕೆಲಸ ಮಾಡಿದೀರಿ. ಆ ಕಡೆಗೆ ಆಸಕ್ತಿ ಹುಟ್ಟಿದ್ದು ಹೇಗೆ?

-ನಾನು ಚಿಕ್ಕಂದಿನಿಂದಲೂ ನಾಟಕಗಳನ್ನು ನೋಡ್ತಿದ್ನಲ್ಲಾ ಅದು ಒಂದು ಕಾರಣವಾದರೆ, ಎಸ್. ನಾರಾಯಣ್ ಧಾರಾವಾಹಿಗಳಲ್ಲಿ ಕೆಲಸ ಮಾಡುವಾಗ ಅವರ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಆಗ ನಾನೂ ನಿರ್ದೇಶಕನಾಗಬೇಕು ಅಂತ ಕನಸು ಕಂಡೆ. ಅದೇ ವೇಳೆಗೆ ನನ್ನಂಥ ಗೆಳೆಯರೆಲ್ಲ ಸೇರಿ ಒಂದು ಟೀಮ್ ಕಟ್ಟಿ ಸಿನಿಮಾ ಕುರಿತಾಗಿ ಏನೇನೋ ಕನಸು ಕಂಡೆವು. ಆ ನಿಟ್ಟಿನಲ್ಲಿ ಮಾಸ್ಟರ್ ಕಿಶನ್ ಅವರ ತಾಯಿ ಶ್ರೀಶೈಲ ಅವರು 'ಡಿ.ಬಿ.72' ಅಂತ ಒಂದು ಕಿರುಚಿತ್ರ ಮಾಡಿದ್ರು. ಆ ಕಿರುಚಿತ್ರದ ಮೂಲಕ ಮೊದಲ ಬಾರಿಗೆ ಅಸಿಸ್ಟೆಂಟ್ ಡೈರೆಕ್ಟರಾದೆ. ಆನಂತರ ಮಾಸ್ಟರ್ ಕಿಶನ್ ನಿರ್ದೇಶನದ 'ಕೇರಾಫ್ ಫುಟ್‌ಪಾತ್' ಚಿತ್ರ ಅಸಿಸ್ಟೆಂಟ್ ಡೈರೆಕ್ಟರಾಗಿ ನನ್ನ ಮೊದಲ ಸಿನಿಮಾವಾಯಿತು. ತದನಂತರ, 'ಚಂಡ', 'ಮೈಲಾರಿ', 'ಒಲವೇ ಮಂದಾರ', 'ಟೋನಿ', 'ಜಂಗಲ್ ಜಾಕಿ', 'ನಂದಾದೀಪ' ಸೇರಿದಂತೆ ಇನ್ನೂ ಕೆಲವು ಸಿನಿಮಾಗಳಿಗೆ ಅಸಿಸ್ಟೆಂಟ್, ಅಸೋಸಿಯೇಟ್ ಡೈರೆಕ್ಟರಾಗಿ ಕೆಲಸ ಮಾಡಿದೆ.

ಪ್ರಶ್ನೆ: ನೀವು ಸಂಭಾಷಣೆ ಹಾಗೂ ಹಾಡುಗಳನ್ನೂ ಬರೀತೀರಿ ಅಂತ ಕೇಳಿದೀನಿ...

- ಶಿವರಾಜ್‌ಕುಮಾರ್ ಅಭಿನಯದ ಮೈಲಾರಿ ಹಾಗೂ ನಂದಾದೀಪ ಚಿತ್ರಗಳಿಗೆ ಸಂಭಾಷಣೆ ಬರೆದೆ. ನಾನೂ ಕೂಡ ಸಂಭಾಷಣೆ ಬರೆಯಬಲ್ಲೆ ಅಂತ ಗುರುತಿಸಿ ಪ್ರೋತ್ಸಾಹಿಸಿದ್ದು ನಿರ್ದೇಶಕ ಶಿವು ಹಿರೇಮಠ್ ಅವರು. ಇನ್ನು ಹಾಡಿನ ವಿಷಯಕ್ಕೆ ಬಂದರೆ, 'ಜಂಗಲ್‌ಜಾಕಿ'ಗೆ ವಿ.ಮನೋಹರ್ ಸಂಗೀತದಲ್ಲಿ ಬರೆದೆ. ಹಾಗೇನೆ, 'ಟೀನೇಜ್' ಚಿತ್ರಕ್ಕೂ ಹಾಡು ಬರೆದೆ.

ಪ್ರಶ್ನೆ: ಮುಂದೆ ನಿರ್ದೇಶಕನಾಗಬಯಸುವ ನೀವು ಯಾವ್ಯಾವ ಸಾಹಿತಿಯ ಕೃತಿಗಳನ್ನು ಓದಿಕೊಂಡಿದ್ದೀರಿ?

- ಯಂಡಮೂರಿ ವೀರೇಂದ್ರನಾಥ್ ನನ್ನಿಷ್ಟದ ಲೇಖಕ. ಜೊತೆಗೆ, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್ ಹಾಗೂ ಖಲೀಲ್ ಗಿಬ್ರಾನ್ ಕೂಡ ನಾನು ಇಷ್ಟ ಪಡುವ ಸಾಹಿತಿಗಳು. ಲಂಕೇಶ್ ಅವರ ನೀಲು ಕಾವ್ಯ ಓದಿದ ನಂತರ ನನಗೂ ಬರೆಯುವ ಆಸಕ್ತಿ ಹುಟ್ಟಿಕೊಂಡಿತು. ಆ ಪ್ರಯತ್ನದಲ್ಲಿ ಕೆಲವು ಸಣ್ಣ ಪುಟ್ಟ ಕವಿತೆಗಳನ್ನು ಬರೆದೆ. ಗೆಳೆಯರು ಮೆಚ್ಚಿಕೊಂಡರು. ತಪ್ಪುಗಳಿದ್ದಲ್ಲಿ ತಿದ್ದಿ ಪ್ರೋತ್ಸಾಹಿಸಿದರು. ನಾ ಸದಾ ಕಲಿಯಲು ಸಿದ್ಧ.

ಪ್ರಶ್ನೆ: ನೀವು ಸಣ್ಣಕಥೆಗಳನ್ನೂ ಬರೆಯುತ್ತೀರಂತೆ?

- ಯಾವಾಗಲೋ ಒಮ್ಮೊಮ್ಮೆ ಬರೆಯುತ್ತೇನೆ. ಗೆಳೆಯರ ಒತ್ತಾಯದ ಮೇರೆಗೆ ನನ್ನದೊಂದು 'ಹಾರಲು ಮರೆತ ಹಕ್ಕಿ' ಎನ್ನುವ ಕಥೆಯನ್ನು 2009ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಗೆ ಬರೆದು ಕಳಿಸಿದ್ದೆ. ತೀರ್ಪುಗಾರರು ಆ ಕಥೆಯನ್ನು 'ಮೆಚ್ಚುಗೆ ಪಡೆದ ಕಥೆ' ಅಂತ ತೀರ್ಮಾನಿಸಿದ್ರು. ಆ ಫಲಿತಾಂಶ ನನ್ನ ಆತ್ಮವಿಶ್ವಾಸ ಹೆಚ್ಚಿಸಿತು. ಆ ಕಥೆ ಮುಂದೊಂದು ದಿನ ಪ್ರಜಾವಾಣಿಯ 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟವಾದಾಗಂತೂ ಇನ್ನೂ ಖುಷಿಯಾಯಿತು. ಆನಂತರ ಮತ್ತೊಂದಿಷ್ಟು ಕಥೆಗಳನ್ನು ಬರೆದೆ. ನನ್ನ ಕೆಲವು ಕವಿತೆಗಳನ್ನು 'ತರಂಗ' ಸೇರಿದಂತೆ ಕೆಲವು ಪತ್ರಿಕೆಗಳು ಪ್ರಕಟಿಸಿ ಪ್ರೋತ್ಸಾಹಿಸಿವೆ. ನಾನು ಸದಾ ಸಿನಿಮಾ ಕೆಲಸದಲ್ಲೇ ತೊಡಗಿಕೊಳ್ಳುವುದರಿಂದ ಹೆಚ್ಚಿಗೆ ಬರೆಯಲಾಗುತ್ತಿಲ್ಲ, ಮುಂದೆ ಇನ್ನಷ್ಟು ಬರೆಯುವತ್ತ ಆಸಕ್ತಿ ತೋರುವೆ.

ಪ್ರಶ್ನೆ: ನಿಮ್ಮ ನೆಚ್ಚಿನ ಸಿನಿಮಾ ನಿರ್ದೇಶಕರು ಯಾರ‍್ಯಾರು?

- ಕನ್ನಡದಲ್ಲಿ ಸುನಿಲ್ ಕುಮಾರ್ ದೇಸಾಯಿ, ರಾಷ್ಟ್ರಮಟ್ಟದಲ್ಲಿ ಮಣಿರತ್ನಂ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಕಿರಾ ಕುರೋಸೋವ ನನ್ನ ಮೆಚ್ಚಿನ ನಿರ್ದೇಶಕರು.

ಪ್ರಶ್ನೆ: ನಿಮ್ಮ ಮುಂದಿನ ಯೋಜನೆಗಳೇನು?

- ಸದ್ಯಕ್ಕೆ ಜಯತೀರ್ಥ ಅವರ "ಬ್ಯೂಟಿಫುಲ್ ಮನಸುಗಳು' ಹಾಗೂ ಕಿಶನ್ ನಿರ್ದೇಶನ 'ಕೇರಾಫ್ ಫುಟ್‌ಪಾತ್-2' ಚಿತ್ರಗಳಿಗೆ ಅಸೋಸಿಯೇಟ್ ಡೈರೆಕ್ಟರಾಗಿ ಕೆಲಸ ಮಾಡುತ್ತಿದ್ದೇನೆ. ಜೊತೆಗೆ ಬ್ಯಾಗಲ್ಲಿ ಕಥೆಗಳನ್ನಿಟ್ಟುಕೊಂಡು ಒಳ್ಳೆಯ ನಿರ್ಮಾಪಕರ ನಿರೀಕ್ಷೆಯಲ್ಲಿದ್ದೇನೆ. ಉತ್ತಮ ಬರಹಗಾರ ಹಾಗೂ ಉತ್ತಮ ನಿರ್ದೇಶಕನಾಗುವುದೇ ನನ್ನ ಬದುಕಿನ ಗುರಿ. ಜೊತೆಗೊಂದಿಷ್ಟು ಬರಹ.

ಪ್ರಶ್ನೆ: ಕೊನೆಯದಾಗಿ ನೀವು ಬರೆದ ಒಂದು ಕವಿತೆ ಹೇಳ್ತೀರಾ?

ಶೀರ್ಷಿಕೆ: ಪುನರಾವರ್ತನೆ


ಹರೆಯದ ತೇರಿಗೆ ಪುಳಕದ ಜೋರು ಜಾತ್ರೆ
ಬೆರಗಿನ ಕಂಗಳಲಿ ಕನಸಿನ ಅಕ್ಷಯ ಪಾತ್ರೆ
ಮೈಗೆ ಹೆಣ್ತನದ ಧಾವಂತ!
ಮನಕೆ ಕಾಡುವ ಏಕಾಂತ!!

ನಿಲುವುಗನ್ನಡಿ ಮುಂದೆ ತಾಸು ಗಟ್ಟಲೆ ನಿಂತು,
ಹತ್ತು ಬಾರಿ ಹುಬ್ಬು ತೀಡಿ
ಹನ್ನೊಂದು ಬಾರಿ ಸೆರಗ ನೀವಿ,
ಹೆರಳ ಸಡಿಲ ಬಿಟ್ಟು ಮುಡಿಗೆ ಮೊಳ ಮಲ್ಲಿಗೆಯಿಟ್ಟು,
ಪುಟ್ಟ ಹೊಕ್ಕಳ ಕಾಣಲು ಅಸ್ಪಷ್ಟ ಬಿಟ್ಟು
ನೆರಿಗೆ ಒದೆಯುತ್ತ ನೀರಿಗೆಂದು ಹೊರಟರೆ
ಬಳುಕುವ ನಡು ಕೀಲುಕುದುರೆ
ಜಾರುವ ಜೀವ ಜಗಿಯೋ ಚಿಗರೆ
ತಬ್ಬಲಿ ತೋಳಿಗೆ ತಬ್ಬುಗೆಯ ತವಕ!
ಅಮ್ಮನಿಗೆ ಸಂಶಯ ಮಿಳಿತ ಆತಂಕ!!

ಆಗ ನಾನು ಹುಡುಗಿಯಾಗಿದ್ದೆ, ಈಗ ಎಲ್ಲವೂ ಇತಿಹಾಸ
ಮಾಸಲು ಭಿತ್ತಿ ಚಿತ್ರ.
ಅಕ್ಕಿಯಂತೆ ಅಗಲು, ನೂಲಿನಂತೆ ಸೀರೆ!
ಮಗಳದು ಬಹುತೇಕ ನನ್ನದೇ ವರ್ತನೆಯ ಪುನರಾವರ್ತನೆ.
ಸಡಗರಗಳ ಸರದಿ ಅವಳದು!
ತಲ್ಲಣಿಸುವ ಸರದಿ ನನ್ನದು!!

ಸಂದರ್ಶಕ
ಹೃದಯಶಿವ





...ಸಿಐಡಿಯವರು ಪರೀಕ್ಷಿಸಲೇ ಇಲ್ಲ. ಮೃತನನ್ನು ...ಮಾಡಿಸಿದ ಪಾರ್ಟನರ್‌ಗಳೂ ರಾಜಕೀಯ ...ನಾಗಿದ್ದುದರಿಂದ ಸಿಓಡಿ ಈ ಪ್ರಕರಣವನ್ನು ಆತ್ಮಹತ್ಯೆ ... ಸಲೀಸಾಗಿ ಮುಚ್ಚಿ ಹಾಕಿತು. ಹೀಗಿರುವಾಗ ...ದ್ದರ ಕೈವಾಡವಿರುವ ಸೌಜನ್ಯಳ ಕೊಲೆಯ ...ಯನ್ನು ಸಿಓಡಿ ಎಷ್ಟು ಪ್ರಾಮಾಣಿಕವಾಗಿ ...ಬಲ್ಲದು?

...ಹರೀಶ್ ಎಂ. ಆರ್. ಖಾನಾಪೂರ, ಬೆಳಗಾವಿ

'ದೇವರ' ಕತೆಗಳನ್ನು ಎಷ್ಟು ಸುಲಭವಾಗಿ ನಂಬುತ್ತೇವೆ

...ನ್ನ ಹೆಸರು ಸುನೀಲ್ ಅಂತ. ಶಿವಮೊಗ್ಗೆಯವನು. ... ನಾನು ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ 'ರಾಮ ಸಮಸ್ಯೆ' ಲೇಖನವನ್ನು ಓದಿ ಮೂಕನಾಗಿದ್ದೇನೆ, ...ಗೊಂಡಿದ್ದೇನೆ. ಗೌರಿ ಅವರು ಅನುವಾದಿಸಿದ ...ಡ್ಸ್ ಅವರ ಲೇಖನವು ನನ್ನನ್ನು ಯೋಚನೆಗೀಡು ...ತು. ಹೇಗೆ ನಾವು ವಾಸ್ತವವನ್ನು ಅರಿಯದೇ ...ವಾಗಿ 'ದೇವರ' ಕತೆಗಳನ್ನು ನಂಬುತ್ತೇವಲ್ಲ ಅನ್ನಿಸಿತು. ...ಖನವು ನನ್ನ ಕಣ್ಣನ್ನು ತೆರೆಸಿದೆ. ...ಮಗೆ ನನ್ನ ಧನ್ಯವಾದಗಳು.

- ಸುನೀಲ್, ಶಿವಮೊಗ್ಗ

...ಲಕ್ಷ್ಮಣ್‌ಪುರ್‌ಬಾಥೆ ಹತ್ಯಾಕಂಡ: ದಲಿತರಿಗೆ ನ್ಯಾಯ ಮರೀಚಿಕೆ?


...ತ್ರಿಕೆಯ ಅಕ್ಟೋಬರ್ 30, 2013ರ ...ಯಲ್ಲಿ ಗೌರಿ ಲಂಕೇಶರು ತಮ್ಮ 'ಕಂಡಹಾಗೆ' ...ದಲ್ಲಿ ಲಕ್ಷ್ಮಣ್‌ಪುರ್‌ಬಾಥೆ ಎಂಬ ಹಳ್ಳಿಯಲ್ಲಿ ... ದಲಿತರ ಮಾರಣಹೋಮಕ್ಕೆ ಸಂಬಂಧಪಟ್ಟಂತೆ ... '58 ದಲಿತರು ಕೊಲೆಯಾದದ್ದು ನಿಜ, ಆದರೆ ... ಅವರನ್ನು ಕೊಲ್ಲಲಿಲ್ಲ' ಎಂಬ ತೀರ್ಪನ್ನು ... ಹೈಕೋರ್ಟ್ ನೀಡಿದ್ದು ಒಂದು ದುರದೃಷ್ಟಕರ ...ಗೆ.

...ವೀರ ಸೇನೆ ಎಂಬ ಮೇಲ್ಜಾತಿ ಭೂಮಿಹಾರ ...ದಾಯದ ದೌರ್ಜನ್ಯಕೋರರ ಗುಂಪು 1997ರ ಡಿಸೆಂಬರ್ 1ರ ಮಧ್ಯರಾತ್ರಿ 11 ಗಂಟೆಗೆ 27 ಮಹಿಳೆಯರು, 16 ಮಕ್ಕಳೂ ಒಳಗೊಂಡಂತೆ ಲಕ್ಷ್ಮಣ್‌ಪುರ್‌ಬಾಥೆ ಗ್ರಾಮದ 58 ದಲಿತರನ್ನು ಸಾಮೂಹಿಕವಾಗಿ ಕೊಂದಿತ್ತು. ಈ ಕಗ್ಗೊಲೆಗೆ ಸಂಬಂಧಿಸಿದಂತೆ 2010ರಲ್ಲಿ ಪಾಟ್ನಾದ ಜಿಲ್ಲಾ ಸೆಷನ್ಸ್ ನ್ಯಾಯಾಲಯ 16 ಆರೋಪಿಗಳಿಗೆ ಮರಣದಂಡನೆಯನ್ನೂ, 10 ಆರೋಪಿಗಳಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಿ ತೀರ್ಪು ನೀಡಿತ್ತು. ಆ ಸಂದರ್ಭದಲ್ಲಿ ತೀರ್ಪು ನೀಡಿದ್ದ ನ್ಯಾಯಾಧೀಶ ವಿಜಯ್ ಪ್ರಕಾಶ್ ಮಿಶ್ರಾ ಅವರು "ಡಿಸೆಂಬರ್ 1, 1997ರ ಲಕ್ಷ್ಮಣ್‌ಪುರ್‌ಬಾಥೆ ಘಟನೆ ನಾಗರಿಕ ಸಮಾಜಕ್ಕೆ ಕಳಂಕದ ಮಾದರಿಯದ್ದು ಮತ್ತು ಕ್ರೂರತೆಯಲ್ಲಿ ಅಪರೂಪದಲ್ಲೇ ಅಪರೂಪದ್ದು" ಎಂದು ಬಣ್ಣಿಸಿದ್ದರು. ಆ ಮೂಲಕ ದಲಿತರಿಗೆ ಮಿಶ್ರಾ ನ್ಯಾಯ ಒದಗಿಸಿದ್ದರು. ಆದರೆ ಈಗ ಏನಾಗಿದೆ? ಮೊನ್ನೆ ಬಿಹಾರ್ ಹೈ ಕೋರ್ಟ್ ನೀಡಿರುವ ತೀರ್ಪಿನಲ್ಲಿ ಎಲ್ಲಾ ಆರೋಪಿಗಳನ್ನು ದೋಷಮುಕ್ತಗೊಳಿಸಲಾಗಿದೆ!

ಇಂತಹದ್ದೇ ತೀರ್ಪುಗಳು ಅಯೋಧ್ಯೆ ವಿಷಯದಲ್ಲಿ, 2002ರ ಗುಜರಾತ್ ಹಿಂಸೆಯ ಸಂದರ್ಭದಲ್ಲಿ, 1996ರ ಬೊತಾನಿ ತೋಲಾ ದಲಿತರ ಹತ್ಯಾಕಾಂಡದ ವಿಷಯದಲ್ಲಿ, 2006 ಖೈರ್ಲಾಂಜಿ ಘಟನೆಯಲ್ಲಿ ಹೊರಬಿದ್ದಿವೆ. ಒಟ್ಟಾರೆ ದಲಿತರ ನರಮೇಧ ಮತ್ತು ಅವರಿಗೆ ನ್ಯಾಯ ಎಂದರೆ ಈ ಥರ! ಅದೇ ದಲಿತರಿಂದ ಇಂತಹದ್ದೇ ಘಟನೆಯಾದಾಗ?

ಉದಾಹರಣೆಗೆ 1992 ಫೆಬ್ರವರಿಯಲ್ಲಿ ದಲಿತರಿಂದ 15 ಜನ ಮೇಲ್ವರ್ಗದವರ ಹತ್ಯೆಯಾದಾಗ ಅಂದಿನ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಸರ್ಕಾರ ಆರೋಪಿಗಳನ್ನು ಟಾಡಾ ಕಾಯ್ದೆಯಡಿ ಬಂಧಿಸಿ ದಲಿತ ಆರೋಪಿಗಳಿಗೆ ಉಗ್ರಶಿಕ್ಷೆಯಾಗುವಂತೆ ನೋಡಿಕೊಂಡಿತ್ತು! ಆದರೆ ಲಕ್ಷ್ಮಣ್‌ಪುರ್‌ಬಾಥೆಯಲ್ಲಿ ದಲಿತರ ಹತ್ಯೆಯಾದಾಗ ಅದೇ ಲಾಲೂ ಪ್ರಸಾದ್ ಯಾದವ್ ಸರ್ಕಾರ ರಣವೀರಸೇನೆ ವಿರುದ್ಧ ಅಂತಹ ಉಗ್ರಕ್ರಮಕ್ಕೆ ಮುಂದಾಗಲಿಲ್ಲ! ಬದಲಿಗೆ ದಲಿತರ ಕಣ್ಣೊರೆಸಲು ಅಮೀರ್‌ದಾಸ್ ಎಂಬ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣಾ ಆಯೋಗವೊಂದನ್ನು ನೇಮಿಸಿ ಅದು ಕೈತೊಳೆದುಕೊಂಡಿತು! ಅಂದಹಾಗೆ ತದನಂತರವಾದರೂ ಏನಾಯಿತು? ಲಾಲೂ ಯಾದವ್‌ನಂತರ ಬಂದ ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ರಣವೀರಸೇನೆ ಬಗ್ಗೆ ತನಿಖೆ ನಡೆಸುತ್ತಿದ್ದ ಆ ಅಮೀರ್‌ದಾಸ್ ಆಯೋಗವನ್ನೇ ರದ್ದುಗೊಳಿಸಿದರು! ಆ ಮೂಲಕ ವ್ಯವಸ್ಥೆ ಯಾರಪರ ಎಂಬುದನ್ನು ನಿತೀಶ್ ತೋರಿಸಿಕೊಟ್ಟಿದ್ದರು.

ಆಶ್ಚರ್ಯಕರ ಬೆಳವಣಿಗೆಯೊಂದರಲ್ಲಿ ದಲಿತರ ಇಂತಹ ರಕ್ತದಾಹ ಪೀಡಿತ ರಣವೀರ ಸೇನೆಯ ಮುಖ್ಯಸ್ಥ ಬ್ರಹ್ಮೇಶ್ವರ್ ಸಿಂಗ್ ಅಲಿಯಾಸ್ ಮುಖಿಯಾ ಕಳೆದ 2012ರ ಜೂನ್ 1ರಂದು ಅನಾಮಧೇಯರಿಂದ ಹತ್ಯೆಗೀಡಾದ. ಈ ನಿಟ್ಟಿನಲ್ಲಿ ವ್ಯವಸ್ಥೆಯು ಇಂತಹ 'ವ್ಯತಿರಿಕ್ತ ತೀರ್ಪು'ಗಳಿಗೆ ಒಮ್ಮೊಮ್ಮೆ ಇಂತಹ ಪ್ರತಿಹಿಂಸೆಯೇ ಉತ್ತರದಂತೆ ಕಂಡರೆ ಆಶ್ಚರ್ಯವೇನಿಲ್ಲ.



- ರಘೋತ್ತಮ ಹೊ.ಬ. ಚಾಮರಾಜನಗರ

ಗಂಗೂ, ಗೋವಿಂದು ಅಂಬಿ ಭೇಟಿ



'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಇದೇ ಮೊದಲ ಬಾರಿಗೆ ಎಚ್.ಡಿ.ಗಂಗರಾಜು ಅವರು ನೂತನ ಕಾರ್ಯದರ್ಶಿ ಸಾ.ರಾ.ಗೋವಿಂದು ಜೊತೆ ವಿಧಾನಸೌಧದಲ್ಲಿ ಅಂಬರೀಶ್ ಅವರನ್ನು ಭೇಟಿಯಾಗಿದ್ದಾರೆ. ವಸತಿ ಸಚಿವರೂ ಆಗಿರುವ ಅಂಬರೀಶ್ ತಮಗೆ ಮಾರ್ಗದರ್ಶನ ನೀಡಬೇಕೆಂದೂ, ಆ ಮೂಲಕ ಕನ್ನಡ ಚಿತ್ರರಂಗ ಮತ್ತಷ್ಟು ಉನ್ನತಿಯತ್ತ ಸಾಗಬೇಕೆಂದೂ ಬಯಸಿದ್ದಾರೆ. ಇವರ ಮಾತಿಗೆ ಒಗೊಟ್ಟ ಅಂಬರೀಶ್ ಮುಂದಿನ ವಾರ ವಾಣಿಜ್ಯ ಮಂಡಳಿಯ ಹೊಸ ತಂಡವನ್ನು ಭೇಟಿಯಾಗಿ ಚಿತ್ರರಂಗದ ಆಗುಹೋಗುಗಳ ಬಗ್ಗೆ ಹೊಸದಾಗಿ ಕೈಗೊಳ್ಳಬಹುದಾದ ಯೋಜನೆಗಳ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಇದಕ್ಕೂ ಮೊದಲು ಎಚ್.ಡಿ.ಗಂಗರಾಜು ಅವರು ಸದಾಶಿವನಗರದ ರಾಜ್ ನಿವಾಸಕ್ಕೆ ಭೇಟಿ ನೀಡಿ, ಪಾರ್ವತಮ್ಮ ರಾಜಕುಮಾರ್ ಅವರೊಂದಿಗೂ ಸಮಾಲೋಚಿಸಿದ್ದಾರೆ.



ಇದೆಲ್ಲಾ ಓಕೆ! ಇಲ್ಲಿ ಒಂದು ವಿಷಯವನ್ನು ನೆನಪಿಸಿಕೊಳ್ಳಬೇಕು: ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಗಂಗರಾಜು ಬಹುತೇಕ ಎಲ್ಲ ನಿರ್ಮಾಪಕರನ್ನು ಕರೆದು ಇತ್ತೀಚೆಗಷ್ಟೇ ಚನ್ನಸ್ವಾಮಿ ಕ್ರೀಡಾಂಗಣ ಕ್ಲಬ್‌ನಲ್ಲಿ ಪಾರ್ಟಿ ಕೊಟ್ಟಿದ್ದು. ಆ ಪಾರ್ಟಿಗೆ ಎಲ್ಲಾ ನಿರ್ಮಾಪಕರ ಚೇಲಾಗಳು ಬಂದಂತೆಯೇ ಸಾ.ರಾ.ಗೋವಿಂದು ರೈಟ್ ಹ್ಯಾಂಡ್ ಎನ್ನಬಹುದಾದ ವ್ಯಕ್ತಿಯೊಬ್ಬ ಬಂದಿದ್ದ. ಅವನನ್ನು ನೋಡಿದ್ದೇ ತಡ ಅನೇಕರು 'ಇವನಿಗಿಲ್ಲೇನು ಕೆಲಸ?' ಅಂತ ಚಕಾರ ಎತ್ತಿದ್ದರು. ನಿರ್ಮಾಪಕ ಶಾಂತರಾಜು ಹಾಗೂ ಸಾ.ರಾ.ಗೋವಿಂದು ಗ್ಯಾಂಗುಗಳ ನಡುವೆ ತಣ್ಣಗೆ ಜಗಳವೂ ಆಯಿತು. ಪಾರ್ಟಿಯ ಮಾರನೇ ದಿನ ನಡೆಯಲಿದ್ದ ಪದಾಧಿಕಾರಿಗಳ ಆಯ್ಕೆಯ ವಿಷಯವೂ ಜಗಳಕ್ಕೆ ಮತ್ತಷ್ಟು ಇಂಬು ನೀಡಿತ್ತು. ಇಷ್ಟಕ್ಕೂ ದಶಕಕ್ಕೆ ಒಂದೋ, ಎರಡೋ ಸಿನಿಮಾ ಮಾಡುವಂಥ ಎಚ್.ಡಿ.ಗಂಗಾರಾಜು ಅಥವಾ ಸಾ.ರಾ.ಗೋವಿಂದು ಸದಾ ವಾಣಿಜ್ಯ ಮಂಡಳಿಯ ಅಧಿಕಾರಕ್ಕಾಗಿ ಹಂಬಲಿಸುತ್ತಾರೆ!

ಸಕ್ರಿಯವಾಗಿ ಸಿನಿಮಾ ಮಾಡುವಂಥ ನಿರ್ಮಾಪಕರಿಗೆ, ಚಿತ್ರರಂಗದ ಬಗ್ಗೆ ನಿಜವಾದ ಕಾಳಜಿ ಇರುವಂಥವರಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧಿಕಾರ ಸಿಗುವ ಕಾಲ ಆದಷ್ಟು ಬೇಗ ಬಂದರೆ ಹಿರಿಯರಾದ ಪಾರ್ವತಮ್ಮ ರಾಜಕುಮಾರ್, ಅಂಬರೀಶ್ ತರಹದವರು ನೀಡಬಹುದಾದ ಮಾರ್ಗದರ್ಶನಕ್ಕೂ ಒಂದು ಬೆಲೆ ಬರುತ್ತದೆ. ಕನ್ನಡ ಚಿತ್ರರಂಗಕ್ಕೆ ಹೊಸದಿಕ್ಕು ತೆರೆಯುತ್ತದೆ.

ಕಾಂಬ್ಳಿ ಸೆಕೆಂಡ್ ಇನ್ನಿಂಗ್ಸ್



ಆತ್ತ ಬಾಲ್ಯದ ಗೆಳೆಯ ಸಚಿನ್ ತೆಂಡೂಲ್ಕರ್ ಜಗತ್ತನ್ನೇ ಬೆರಗಾಗಿಸುವಂಥ ಸಾಧನೆಗೈದು, ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರನ್ನು ಸ್ಥಿರವಾಗಿ ದಾಖಲಿಸಿ ಕ್ರಿಕೆಟ್‌ಗೆ ಗುಡ್‌ಬೈ ಹೇಳಿದ್ದರೆ, ಇತ್ತ ವಿನೋದ್ ಕಾಂಬ್ಳಿ ಸಿನಿಮಾವೊಂದರಲ್ಲಿ ನಟಿಸಲು ಮುಂದಾಗಿದ್ದಾರೆ. ಹಿಂದಿ ಸಿನಿಮಾ ಅಂದುಕೊಂಡಿರಾ? ಅಲ್ಲ, ಕಾಂಬ್ಳಿ ಬಣ್ಣ ಹಚ್ಚುತ್ತಿರುವುದು ಕನ್ನಡ ಚಿತ್ರವೊಂದಕ್ಕೆ. ಅಕ್ಷಯ್, ಸುಮಂತ್ ಶೈಲೇಂದ್ರ ನಟಿಸುತ್ತಿರುವ ಚಿತ್ರವೊಂದರಲ್ಲಿ ಕಾಂಬ್ಳಿ ಪ್ರಮುಖ ಪಾತ್ರ ನಿರ್ವಹಿಸುವ ಸುದ್ದಿ ಖಾತ್ರಿಯಾಗಿದೆ. ನೈಜ ಘಟನೆಯನ್ನಾಧರಿಸಿದ ಈ ಚಿತ್ರಕ್ಕೆ ಬಿ.ಎನ್.ಸ್ವಾಮಿ ಹಣ ಹಾಕುತ್ತಿದ್ದರೆ, ಮೋಹನ್ ಗೌಡ ಎನ್ನುವವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ.

ಅಂದಮಾತ್ರಕ್ಕೆ ವಿನೋದ್ ಕಾಂಬ್ಳಿಗೆ ಚಿತ್ರರಂಗದ ನಂಟು ಹೊಸದೇನಲ್ಲ. ಈ ಮೊದಲು ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ 'ಮಿಸ್ ಇಂಡಿಯಾ' ಅನ್ನುವ ಧಾರಾವಾಹಿಯಲ್ಲಿ ನಟಿಸಿದ್ದ ಅನುಭವ ಹೊಂದಿದ್ದಾರೆ. ಇದೇ ಮೊದಲಬಾರಿಗೆ ಹಿರಿತೆರೆಗೆ ಬರುತ್ತಿದ್ದಾರೆ.

ಬಾಲ್ಯದಲ್ಲಿ ಸಚಿನ್‌ನನ್ನೂ ಮೀರಿಸುತ್ತಿದ್ದ ಪ್ರತಿಭಾವಂತ ಬ್ಯಾಟ್ಸ್‌ಮನ್ ಕಾಂಬ್ಳಿ ಸದಾ ಒಂದಿಲ್ಲೊಂದು ಸಮಸ್ಯೆಯನ್ನು ಎದುರಿಸುತ್ತಲೇ ಬಂದವರು. ಸಿಕ್ಕ ಅವಕಾಶಗಳಲ್ಲಿ ತಮ್ಮ ಸಾಮರ್ಥ್ಯ ತೋರಿಸಿದವರು. ಅದೇಕೋ ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ ಸಿಕ್ಕ ಪ್ರೋತ್ಸಾಹ, ರಣಜಿ, ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್‌ನಲ್ಲಿ ಕಾಂಬ್ಳಿಗೆ ಸಿಗಲಿಲ್ಲ. ಮೇಲ್ವರ್ಗಕ್ಕೆ ಸೇರಿದ ಸಚಿನ್‌ಗೆ ಸಿಕ್ಕ ಪ್ರೋತ್ಸಾಹ ಹಿಂದುಳಿದ ವರ್ಗಕ್ಕೆ ಸೇರಿದ ಕಾಂಬ್ಳಿಗೂ ಸಿಕ್ಕಿದ್ದರೆ ಭಾರತಕ್ಕೂ ಒಬ್ಬ ಬ್ರಿಯಾನ್ ಲಾರಾ ಸಿಕ್ಕುತ್ತಿದ್ದ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಕೆಳ ಸಮುದಾಯದಿಂದ ಬಂದ ಶೋಷಿತ ವಿನೋದ್ ಕಾಂಬ್ಳಿ ಸಿನಿಮಾ ಮೂಲಕ ಹೊಸ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಅವರಿಗೆ ನೋವಿನಿಂದಲೇ ಶುಭ ಕೋರೋಣ.



ರಾಗಿಣಿ ದ್ವಿವೇದಿ

ರಾಗಿಣಿ ವಿತ್ ಸಮುದ್ರಕಣಿ



ಕನ್ನಡದಲ್ಲಿ ಬೇಡಿಕೆ ಕಳೆದುಕೊಂಡ ನಂತರ ರಾಗಿಣಿ ದ್ವಿವೇದಿ ಕಥೆ ಮುಗಿದೇಹೋಯಿತು ಅಂತ ಕೆಲವರು ಭಾವಿಸಿದ್ದರು. ಅಂಥವರಿಗೆ ಶಾಕ್ ಕೊಡುವ ರೀತಿಯಲ್ಲಿ ರಾಗಿಣಿ ತೆಲುಗು, ತಮಿಳು ಭಾಷೆಯ ಸಿನಿಮಾಗಳಲ್ಲಿ ಬ್ಯುಸಿ ಆಗುತ್ತಿದ್ದಾರೆ. ಸದ್ಯಕ್ಕೆ ಖ್ಯಾತ ನಿರ್ದೇಶಕ ಸಮುದ್ರಕಣಿ ನಿರ್ದೇಶನದ ತಮಿಳು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈಗಾಗಲೇ ತಮಿಳುನಾಡಿನ ಮಧುರೈನಲ್ಲಿ ಚಿತ್ರೀಕರಣಗೊಳ್ಳುತ್ತಿರುವ ಈ ಚಿತ್ರದ ಹೀರೋ ನಾಣಿ ಎನ್ನುವ ಹೊಸಮುಖ. ಇದೇ ಚಿತ್ರದ ತೆಲುಗು ವರ್ಶನ್ ಕೂಡ ಸ್ವತಃ ಸಮುದ್ರಕಣಿಯೇ ನಿರ್ದೇಶಿಸುತ್ತಿದ್ದಾರೆ. ಇದರಲ್ಲಿ ರಾಗಿಣಿ ಜೊತೆಗೆ ಜಯಂ ರವಿ ಲೀಡ್ ರೋಲ್ ನಿರ್ವಹಿಸುತ್ತಿದ್ದಾರೆ.

ಇದೇ ವೇಳೆಗೆ ರಾಗಿಣಿಯ 'ರಾಂಬೋ ರಾಜ್‌ಕುಮಾರ್' ಪ್ರಸಿದ್ಧ ಐಟಂ ಸಾಂಗ್ ಮುಂಬೈನಲ್ಲಿ ಚಿತ್ರೀಕರಿಸಲಾಗಿದ್ದು ನವೆಂಬರ್ ತಿಂಗಳಲ್ಲಿ ಹೊರಬರಲಿದೆ. ಅಂದಹಾಗೆ, ರಾಗಿಣಿ ನಟಿಸಿರುವ 'ರಾಗಿಣಿ ಐಪಿಎಸ್' ಹೊರತುಪಡಿಸಿದರೆ ಉಪೇಂದ್ರ ಜೊತೆಗಿನ ಹೆಸರಿಡದ ಚಿತ್ರವೊಂದು ಬಿಡುಗಡೆಯಾಗಬೇಕಿದೆ.


ನಾ ರಾಜ ನೀ ಹುಲಿ

'ಯಶ್ ಹುಲಿಯಾದರೆ ನಾನು ರಾಜ' ಎನ್ನುವುದು ನಿರ್ಮಾಪಕ ಕೆ.ಮಂಜು ಉವಾಚ. 'ರಾಜಾ ಹುಲಿ' ಚಿತ್ರ ಇದೇ ವಾರ ಬಿಡುಗಡೆಯಾಗುತ್ತಿದೆ. 'ಸುಂದರಪಾಂಡಿಯನ್' ಚಿತ್ರದ ರಿಮೇಕ್ ಆಗಿದ್ದರೂ 'ರಾಜಾ ಹುಲಿ' ಕರ್ನಾಟಕದ ನೇಟಿವಿಟಿಗೆ ತಕ್ಕಂತೆ ಬದಲಾಗಿದೆಯಂತೆ. ಆ ನಿಟ್ಟಿನಲ್ಲಿ ಚಿತ್ರಕ್ಕೆ ಸಂಭಾಷಣೆ ಬರೆದ ಮಂಜು ಮಾಂಡವ್ಯ ಮಂಡ್ಯ ಶೈಲಿಯ ಕನ್ನಡವನ್ನು ಬಳಸಿದ್ದಾರಂತೆ. ಹಂಸಲೇಖಾರ ಸಂಗೀತ ಚಿತ್ರಕ್ಕೆ ಮತ್ತಷ್ಟು ಶಕ್ತಿ ತುಂಬಿ ನೀಡಿರುವುದರ ಜೊತೆಗೆ, ಟೈಟಲ್ ಸಾಂಗ್ ಹಿಟ್ ಆಗುವ ಸೂಚನೆಗಳಿವೆಯಂತೆ. ಯಶ್ ಪ್ರಯಾಣ ಮಾಡುವಾಗ ಯಾವಾಗಲೂ ಹಂಸಲೇಖಾರ ಹಾಡುಗಳನ್ನೇ ಕೇಳೋದಂತೆ.

'ವಾರಸ್ದಾರ' ಫ್ಲಾಪ್ ಆದನಂತರ ಖಾಲಿ ಕುಳಿತಿದ್ದ ನಿರ್ದೇಶಕ ಗುರುದೇಶಪಾಂಡೆ ಈ 'ರಾಜಾ ಹುಲಿ' ಎನ್ನುವ ರೀಮೇಕ್ ಚಿತ್ರ ಗೆಲ್ಲುತ್ತದೆಂದೂ, ಆ ಮೂಲಕ ತಾವು ಬ್ಯುಸಿಯಾಗುವ ಕನಸು ಕಂಡಿದ್ದಾರೆ. ಚಿತ್ರದ ಶೇ. 60ರಷ್ಟು ಭಾಗ ಬಸ್ಸಿನಲ್ಲೇ ಇರುತ್ತದಂತೆ. ಮೂರು ಸಲ ಲೊಕೇಶನ್ ನೋಡಲು ಹೋದರೂ ನಿರ್ಮಾಪಕರು ಬೇಜಾರುಮಾಡಿ ಕೊಳ್ಳಲಿಲ್ಲವಂತೆ. ನಾಯಕಿ ಮೇಘನರಾಜ್ ಬೇರಾವುದೋ ಚಿತ್ರದ ಶೂಟಿಂಗ್‌ನಲ್ಲಿ ಬ್ಯುಸಿ ಇರುವ ಕಾರಣ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲಾಗ ಲಿಲ್ಲವಂತೆ. ಕೊನೆಯದಾಗಿ, ಕೆ.ಮಂಜು ತಾವೇ ಹೇಳಿಕೊಳ್ಳುವ ಪ್ರಕಾರ 'ಯಾರಿಗೂ ಬಗ್ಗಲ್ಲವಂತೆ, ಯಾವುದಕ್ಕೂ ಕುಗ್ಗಲ್ಲವಂತೆ!'

ಹ್ಯಾಪಿಡೇಸ್ ಹೀರೋ ಕನ್ನಡಕ್ಕೆ

ಹ್ಯಾಪಿ ಡೇಸ್, ಕೊತ್ತ ಬಂಗಾರ ಲೋಕಂ, ಎವ್ವರೈನ ಎಪ್ಪುಡೈನ, ಕುರ್ರಾಡು ಮುಂತಾದ ಚಿತ್ರಗಳ ಮೂಲಕ ತೆಲುಗು ಪ್ರೇಕ್ಷಕರ ಗಮನ ಸೆಳೆದಿದ್ದ ನಟ ವರುಣ್ ಸಂದೇಶ್ ಅಕ್ಟೋಬರ್ 14ರಂದು ಬೆಂಗಳೂರಿನ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಚಾಲನೆ ಪಡೆದ 'ನಿನ್ನಲ್ಲೇ ನಾನು' ಎನ್ನುವ ಚಿತ್ರದ ಮೂಲಕ ಕನ್ನಡಕ್ಕೆ ಬಂದಿದ್ದಾರೆ. ತೆಲುಗಿನಲ್ಲೂ ಏಕಕಾಲಕ್ಕೆ ನಿರ್ಮಾಣವಾಗುತ್ತಿದೆ. ಈಗಾಗಲೇ ಬೆಂಗಳೂರಿನಲ್ಲಿ 10 ದಿನಗಳ ಚಿತ್ರೀಕರಣ ಮುಗಿಸಿರುವ 'ನಿನ್ನಲೇ ನಾನು' ಚಿತ್ರತಂಡ ಆಂಧ್ರದ ವಿಶಾಖಪಟ್ಟಣದ ಕಡೆ ಪ್ರಯಾಣ ಬೆಳೆಸಿದೆ. ರವಿರಾಜ್ ಚಿತ್ರದ ನಿರ್ದೇಶಕ. ಪ್ರಿಯಾಂಕ ಚೋಪ್ರಾಳ ಹತ್ತಿರದ ಸಂಬಂಧಿಯಾಗಿರುವ ಬಾರ್ಬಿ ಈ ಚಿತ್ರದ ನಾಯಕಿ. ಈ ಹುಡುಗಿ ಈಗಾಗಲೇ ತೆಲುಗು ಹಾಗೂ ಹಿಂದಿಯಲ್ಲಿ ತಲಾ ಒಂದೊಂದು ಚಿತ್ರದಲ್ಲಿ ಅಭಿನಯಿಸಿದ್ದು ಅನೇಕ ಜಾಹಿರಾತುಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಮಹೇಶ್ ಗಾಂಧೀ, ಅರುಣ್ ದೇವಯ್ಯ ಸೇರಿದಂತೆ ಇನ್ನಿತರರ ಪಾತ್ರವರ್ಗವಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com